ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 28

೧೧ ಮೇ ೧೯೫೮

★

ಪುಟ ೧೦ ಬೆಲೆ: ೧೩ ನಯೇ ಪೈಸೆ

★

ಪ್ರಜಾಪ್ರಭುತ್ವ ತತ್ವಗಳಿಗೆ ವಿರೋಧವಾದ ಗ್ರಾಮಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆಗಳ ಮಸೂದೆ

ಮೈಸೂರು ಸರಕಾರವು ಗ್ರಾಮ ಪಂಚಾಯ್ತಿ ಮತ್ತು ಸ್ಥಳೀಯ ಸಂಸ್ಥೆಗಳ ಬಗ್ಗೆ ಹೊಸ ಮಸೂದೆಯೊಂದನ್ನು ಮೈಸೂರು ವಿಧಾನ ಸಭೆಯಲ್ಲಿ ಮಂಡಿಸಿದೆ. ಜಿಲ್ಲಾ ಬೋರ್ಡುಗಳನ್ನು ರದ್ದು ಮಾಡಿ, ಅದರ ಸ್ಥಾನದಲ್ಲಿ ಹೊಸ ವ್ಯವಸ್ಥೆಯನ್ನು ತಂದು ಪುರೋಗಾಮಿಯಾದ ಶಾಸನ ತರುವುದಾಗಿ ಸರಕಾರ ಅಂದಿನಿಂದ ಹೇಳುತ್ತ ಬಂದಿದ್ದು ಇದೀಗ ಮಸೂದೆಯೊಂದನ್ನು ಮಂಡಿಸಿದೆ. ಪಂಚಾಯತ್ ರಾಜ್ಯ ಸ್ಥಾಪಿಸುತ್ತೇವೆ, ಸಂಪೂರ್ಣ ಪ್ರಜಾಪ್ರಭುತ್ವ ರೀತಿಯಲ್ಲಿ ಸ್ಥಳೀಯ ಸಂಸ್ಥೆಗಳ ಆಡಳಿತೆ ನಡೆಸುತ್ತೇವೆ ಎಂದು ಕಾಂಗ್ರೆಸ್ ನಾಯಕರು ಕೊಚ್ಚಿಕೊಳ್ಳುತ್ತಿರುವುದು ಈ ಮಸೂದೆ ಎಷ್ಟುಮಟ್ಟಿಗೆ ಸಾಧಿಸುತ್ತದೆ ಎಂಬುದನ್ನು ಪರಿಶೀಲಿಸೋಣ.

ಗ್ರಾಮ ಪಂಚಾಯ್ತಿಯಂಥ ಸಂಸ್ಥೆಯು ಅನಾದಿ ಕಾಲದಿಂದಲೂ ಇತ್ತು. ಈ ಪದ್ಧತಿಯಲ್ಲಿ ಜಮಿನಾನು ಎಲ್ಲರಿಗೂ ಸೇರಿದ್ದಾಗಿತ್ತು, ವ್ಯತ್ಯಾಸವಿರಲಿಲ್ಲ. ಗ್ರಾಮದ ಹಿರಿಯರು ಸಾಮಾನ್ಯವಾಗಿ ಪಂಚಾಯಿತರಾಗಿರುತ್ತಿದ್ದರು. ಆ ಕಾಲದಲ್ಲಿ ಇನ್ನೂ ಪ್ರಭುತ್ವವು ಸರಿಯಾಗಿ ವ್ಯವಸ್ಥೆಗೊಂಡಿರಲಿಲ್ಲ, ಮತ್ತು ಗ್ರಾಮಗಳು ಸ್ವಯಂಪೂರ್ಣವಾಗಿದ್ದುವು. ಆದರೆ ಇಂದು ಎಲ್ಲವೂ ಬದಲಾಗಿದೆ. ಅಧಿಕಾರ ಹೆಚ್ಚು ಕೇಂದ್ರೀಕೃತವಾಗಿದ್ದು, ಪ್ರಭುತ್ವದ ಅಂಗಗಳು ಬೆಳೆದಿವೆ. ಸ್ವಯಂಪೂರ್ಣವಾಗಿದ್ದ ಗ್ರಾಮಗಳು ಇಂದು ಅವಲಂಬಿತವಾದ ಹಾಗೂ ಹಿಂದುಳಿದ ವ್ಯವಸ್ಥೆಯಾಗಿದೆ.

ದೇಶದ ಅಭಿವೃದ್ಧಿಯಲ್ಲಿ ಮತ್ತು ಪುನರ್‌ರಚನೆಯಲ್ಲಿ ಗ್ರಾಮ ಪಂಚಾಯ್ತಿಗಳ ಕಾರ್ಯ ಬಹು ಮುಖ್ಯವಾದುದಾಗಿದೆ. ಮೈಸೂರು ಸರಕಾರವು ಈಗ ತಂದಿರುವ ಮಸೂದೆಯು ಈ ಕಾರ್ಯದಲ್ಲಿ ಅದರ ಮುಖ್ಯತ್ವವನ್ನು ಗಣನೆಗೆ ತೆಗೆದುಕೊಂಡಿಲ್ಲವೆಂದು ಹೇಳಬಹುದು.

ಮೊದಲನೆಯದಾಗಿ, ಭೂಸುಧಾರಣೆಗಳಿಲ್ಲದೆ ಗ್ರಾಮ ಪಂಚಾಯ್ತಿಗಳು ಕಾರ್ಯವನ್ನು ನಿರ್ವಹಿಸುವುದು ಪರಿಣಾಮಕಾರಿಯಾಗದು. ಎರಡನೆಯದಾಗಿ ಗ್ರಾಮ ಪಂಚಾಯ್ತಿಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ಸಾಕಷ್ಟು ಆದಾಯ ಒದಗಿಸದಿದ್ದಲ್ಲಿ ಸಾಧ್ಯವಿಲ್ಲ.

ಮಸೂದೆಯಲ್ಲಿ ಹೇಳುವುದೇನು?

ಮೈಸೂರು ಸರಕಾರ ತಂದಿರುವ ಮಸೂದೆಯಲ್ಲಿ ಗ್ರಾಮ ಪಂಚಾಯ್ತಿ ತಾಲ್ಲೂಕು ಬೋರ್ಡು ಮತ್ತು ಜಿಲ್ಲಾ ಅಭಿವೃದ್ಧಿ ಸಮಿತಿಯ ರಚನೆ ಈ ರೀತಿ ಇದೆ: 1,500ರಿಂದ 1,000 ಜನಸಂಖ್ಯೆ ಉಳ್ಳ ಗ್ರಾಮಗಳ ಜನರಿಂದ ಗ್ರಾಮ ಪಂಚಾಯ್ತಿಯ ಸದಸ್ಯರ ಆಯ್ಕೆಯಾಗುತ್ತದೆ. ತಾಲ್ಲೂಕು ಬೋರ್ಡಿನ ಸದಸ್ಯರನ್ನು ಗ್ರಾಮ ಪಂಚಾಯ್ತಿ ಸದಸ್ಯರು ಆಯ್ಕೆ ಮಾಡುತ್ತಾರೆ. ಇದರಲ್ಲಿ ಶೇ| 25ರಷ್ಟು ಸದಸ್ಯರನ್ನು ಸರಕಾರ ನಾಮಕರಣ ಮಾಡುತ್ತದೆ. ಜಿಲ್ಲಾ ಅಭಿವೃದ್ಧಿ ಸಮಿತಿಯಲ್ಲಿನ ಸದಸ್ಯರೆಲ್ಲರೂ ನಾಮಕರಣ ಮಾಡಲ್ಪಡುತ್ತಾರೆ. ಒಮ್ಮೆ ಚುನಾಯಿತರಾದ ಗ್ರಾಮ ಪಂಚಾಯ್ತಿ ಸದಸ್ಯರು ನಾಲ್ಕು ವರ್ಷ ಅಧಿಕಾರದಲ್ಲಿರುತ್ತಾರೆ. ಡೆಪ್ಯೂಟಿ ಕಮಿಶನರ್‌ರವರು ಅವಶ್ಯವಿದ್ದಲ್ಲಿ ಒಂದು ವರ್ಷ ಜೀವದಾನ ಮಾಡಬಹುದು. ಮಸೂದೆಯಲ್ಲಿ ಡೆಪ್ಯೂಟಿ ಕಮಿಶನರ್‌ರವರಿಗೆ ಅವ್ಯಾಹತವಾದ ಅಧಿಕಾರವನ್ನು ಕೊಡಲಾಗಿದೆ.

ಮೊದಲನೆಯದಾಗಿ 1,500 ಜನಸಂಖ್ಯೆಯ ಮಿತಿ ಇರಿಸಿರುವುದರಿಂದ ನಾಲ್ಕೈದು ಗ್ರಾಮಗಳು ಕೂಡಿದರೆ ಒಂದು ಗ್ರಾಮ ಪಂಚಾಯ್ತಿಯಾಗುತ್ತದೆ. ನಾಲ್ಕೈದು ಗ್ರಾಮಗಳನ್ನು ಒಂದುಗೂಡಿಸಿದಲ್ಲಿ ಪಂಚಾಯತಿಯು ಪರಿಣಾಮಕಾರಿಯಾಗುವುದಿಲ್ಲ ಮತ್ತು ಅವುಗಳ ಮೇಲೆ ಜನತೆಯ ಹತೋಟಿಯು ಸಹ ಇರುವುದಿಲ್ಲ. ಗ್ರಾಮಕ್ಕೊಂದರಂತೆ ಗ್ರಾಮ ಪಂಚಾಯ್ತಿ ಇರಬೇಕೆಂದು ಕಾಂಗ್ರೆಸ್ ನೇಮಿಸಿದ್ದ ಪಂಚಾಯ್ತಿ ಸಮಿತಿಯೇ ಶಿಫಾರಸು ಮಾಡಿದೆ. ಎರಡನೆಯದಾಗಿ ಒಮ್ಮೆ ಚುನಾಯಿತರಾದ ಪಂಚಾಯ್ತಿ ಸದಸ್ಯರು ನಾಲ್ಕು ವರ್ಷ ಇರುತ್ತಾರೆ, ಡೆಪ್ಯೂಟಿ ಕಮಿಷನರ್‌ರವರು ಒಂದು ವರ್ಷ ಜೀವದಾನ ಬೇರೆ ಮಾಡಬಹುದು. ಹೀಗಿರುವಾಗ ಗ್ರಾಮಸ್ಥರಿಗೆ ಒಮ್ಮೆ ಚುನಾಯಿಸಿದ ಮೇಲೆ ಬೇರೆ ಯಾವ ಹಕ್ಕೂ ಇರುವುದಿಲ್ಲ. ತಾಲ್ಲೂಕು ಬೋರ್ಡಿಗೆ ನೇರವಾದ ಚುನಾವಣೆಯಿಲ್ಲ, ಪರೋಕ್ಷ ಚುನಾವಣೆ ಇರುವುದು ಪ್ರಜಾ ಪ್ರಭುತ್ವಕ್ಕೆ ವಿರೋಧವಾದುದಾಗಿದೆ. ಅಲ್ಲದೆ ನಾಲ್ಕರಲ್ಲಿ ಒಂದು ಭಾಗ ಸದಸ್ಯರ ನಾಮಕರಣ ಅನುಚಿತವಾದುದೂ ಅನವಶ್ಯಕವಾದುದೂ ಆಗಿದೆ. ರಾಜಕೀಯ ಸ್ವಾರ್ಥಕ್ಕಾಗಿ ದುರುಪಯೋಗಪಡಿಸಿಕೊಳ್ಳಲು ಇದು ಅವಕಾಶ ಕೊಡುತ್ತದೆ.

ಪಂಚಾಯ್ತಿಗಳ ಅಧಿಕಾರ ವ್ಯಾಪ್ತಿ

ಗ್ರಾಮ ಪಂಚಾಯ್ತಿಗಳ ಅಧಿಕಾರ ವ್ಯಾಪ್ತಿಯನ್ನು ಯೋಜನೆಯ ಅಭಿವೃದ್ಧಿ ಕಾರ್ಯಗಳೊಂದಿಗಾಗಲೀ, ಸುಧಾರಣೆಯ ಕಾರ್ಯಗಳೊಂದಿಗಾಗಲೀ ಸಂಬಂಧಿಸಿಲ್ಲ.

ಗ್ರಾಮ ಪಂಚಾಯ್ತಿಗಳ ಆದಾಯಕ್ಕಾಗಿ ಭೂಕಂದಾಯದಲ್ಲಿ ಶೇ. 15 ಪಾಲನ್ನು ಮಾತ್ರ ಕೊಡಲಾಗುವುದು. ಇದು ಆಯಾ ಪ್ರದೇಶಗಳ ವರಮಾನಕ್ಕೆ ಹೊಂದಿಕೊಂಡಿರುವುದು. ಗ್ರಾಮ ಪಂಚಾಯ್ತಿಗಳು ಆಸ್ತಿ ತೆರಿಗೆ, ಕಸುಬು ತೆರಿಗೆ ಇತ್ಯಾದಿಗಳಗನ್ನು ಹಾಕಿ ತನ್ನ ಆದಾಯವನ್ನು ಹುಟ್ಟಿಸಿಕೊಳ್ಳಬೇಕು. ತೆರಿಗೆ ವಿಧಿಸುವ ಕಾರ್ಯವನ್ನು ಗ್ರಾಮ ಪಂಚಾಯ್ತಿಗಳಿಗೆ ವಹಿಸಿರುವುದು ಅವುಗಳ ಜನಪ್ರಿಯತೆಗೆ ಕುಂದು ತರುತ್ತದೆ. ಅಷ್ಟೇ ಅಲ್ಲದೆ ಭೂಕಂದಾಯದಲ್ಲಿ ಕೇವಲ ಶೇಕಡ 15ರಷ್ಟು ಗ್ರಾಂಟನ್ನು ಆಯಾ ಪ್ರದೇಶಗಳವರ ಮಾ

(ಕೊನೇ ಪುಟ ನೋಡಿ)

ನಿಜಲಿಂಗಪ್ಪನವರ ಮಂತ್ರಿ ಮಂಡಲ ಉರುಳಿತು

ಮಹಾಚುನಾವಣೆಗಳನಂತರ ಕೇವಲ ಒಂದು ವರ್ಷ ಅಧಿಕಾರದಲ್ಲಿದ್ದ ನಿಜಲಿಂಗಪ್ಪನವರ ಮಂತ್ರಿಮಂಡಲ ಮೇ 8ರಂದು ಮಧ್ಯಾಹ್ನ ಉರುಳಿತು. ಅವರ ಸ್ಥಾನಕ್ಕೆ ಈಗ ಬಿ.ಡಿ.ಜತ್ತಿಯವರ ಆಯ್ಕೆಯಾಗಿದೆ.

ಕಳೆದ ಎರಡು ತಿಂಗಳಿಂದಲೂ ಮೈಸೂರು ಕಾಂಗ್ರೆಸ್ ರಾಜಕೀಯದಲ್ಲಿ ನಡೆಯುತ್ತಿದ್ದ ಕಿತ್ತಾಟವು ಒಂದು ಘಟಕ್ಕೆ ಮುಟ್ಟಿ, ಮಂತ್ರಿಮಂಡಲದ ಬದಲಾವಣೆಯಾಗಿದೆ. ಕಾಂಗ್ರೆಸ್ ಹೈಕಮಾಂಡಿನ ಪರವಾಗಿ ಬಂದಿದ್ದ ಶ್ರೀಮನ್ನಾರಾಯಣರು ಮೈಸೂರು ಕಾಂಗ್ರೆಸ್ ಪಕ್ಷದಲ್ಲಿನ ಕಿತ್ತಾಟವನ್ನು ಪರಿಹರಿಸುವ ಉದ್ದೇಶ್ಯದಿಂದ ಮಂತ್ರಿಮಂಡಲದಲ್ಲಿ ಬದಲಾವಣೆ ತಂದಿದ್ದಾರೆ. ಆದರೆ ಈ ಬದಲಾವಣೆ ಎಷ್ಟು ಮಟ್ಟಿಗೆ ಕಾಂಗ್ರೆಸ್ಸಿನಲ್ಲಿರುವ ಒಳಜಗಳವನ್ನು ಪರಿಹರಿಸುವುದೆಂಬುದು ಎಲ್ಲರಿಗೂ ತಿಳಿದಿದೆ. ಜಾತೀಯತೆ, ಲಂಚಗುಳಿತನ ಪರಸ್ಪರ ವೈಷಮ್ಯಗಳಿಂದ ಕಚ್ಚಾಡುತ್ತಿರುವ ಮೈಸೂರು ಕಾಂಗ್ರೆಸ್ಸಿನಲ್ಲಿ ಒಮ್ಮತ ಎಂದಿಗೂ ಬರುವುದಿಲ್ಲವೆಂದು ಹೇಳಬಹುದು.

ನಿಜಲಿಂಗಪ್ಪನವರು ಅಧಿಕಾರ ವಹಿಸಿಕೊಂಡ ಕೂಡಲೇ ಆರು ತಿಂಗಳಲ್ಲಿ ಈ ಮಂತ್ರಿಮಂಡಲ ಉರುಳಿಸುತ್ತೇವೆಂದು ಅವರ ವಿರೋಧಿಗಳು ಹೇಳಿಕೊಳ್ಳುತ್ತಿದ್ದರು. ಅದರಂತೆ ಇಂದು ಒಂದು ವರ್ಷದಲ್ಲಿ ಅವರನ್ನು ಅಧಿಕಾರದಿಂದ ಇಳಿಸಲಾಗಿದೆ. ನಿಜಲಿಂಗಪ್ಪನವರನ್ನು ಉರುಳಿಸಲು ಹಳೆಯ ಜಗಳಗಳನ್ನು ಮರೆತು, ಸಾಹುಕಾರ ಚನ್ನಯ್ಯ, ಹನುಮಂತಯ್ಯ ಮೊದಲಾದವರು ಒಂದುಗೂಡಿದ್ದರು. ಎರಡು ತಿಂಗಳು ಈ ಘರ್ಷಣೆ ನಡೆದು ರಾಜಕೀಯ ವಾತಾವರಣವೇ ಕಲುಷಿತಗೊಂಡಿತ್ತು.

ಅವಿಶ್ವಾಸ ನಿರ್ಣಯ ಮಂಡಿಸುವ ಬದಲಾಗಿ ನಿಜಲಿಂಗಪ್ಪನವರನ್ನು ರಾಜೀನಾಮೆ ಕೊಡುವಂತೆ ಮಾಡಲಾಯಿತು. ರಾಜೀನಾಮೆಯ ನಂತರ ಹೊಸ ನಾಯಕರಾಗಿ ಜತ್ತಿಯವರನ್ನು ಚುನಾಯಿಸಲಾಯಿತು. ಮತದಾನದಲ್ಲಿ ಜತ್ತಿಯವರಿಗೆ 106 ಮತಗಳೂ, ನಿಜಲಿಂಗಪ್ಪನವರಿ 66 ಮತಗಳೂ ಬಂದಿವೆ. ಭೂಸುಧಾರಣೆಗಳ ಬಗ್ಗೆ ಶಿಫಾರಸನ್ನು ಮಂಡಿಸಿರುವ ಜತ್ತಿಯವರು ಕನ್ನಡ ಜನತೆಗೆ ಪರಿಚಿತರಾಗಿದ್ದಾರೆ. ಎಷ್ಟು ಮಟ್ಟಿಗೆ ಅಧಿಕಾರ ನಿರ್ವಹಿಸುವರೆಂದು ಕಾದು ನೋಡಬೇಕಿದೆ. "ಸಾಕಷ್ಟು ಬಹುಮತ"ದಿಂದ ನಾಯಕರಾಗಿರುವ ಜತ್ತಿಯವರ ಮೇಲೆ ಅವಿಶ್ವಾಸ ಯಾವಾಗ ಬರುವುದೋ ತಿಳಿಯದು. ಏಕೆಂದರೆ ಮೈಸೂರು ಕಾಂಗ್ರೆಸ್ಸಿನಲ್ಲಿ ವಿಶ್ವಾಸ-ಅವಿಶ್ವಾಸ ನಿರ್ಣಯಗಳ ಘೋಷಣೆಯ ಪರಂಪರೆಯೇ ಬೆಳೆದುಬಂದಿದೆ. ಮಹಾಚುನಾವಣೆಗಳ ನಂತರ ಮಂತ್ರಿಮಂಡಲ ಉರುಳಿಸಲ್ಪಟ್ಟು ಹೊಸ ಮಂತ್ರಿಮಂಡಲ ಅಧಿಕಾರಕ್ಕೆ ಬರುತ್ತಿರುವುದು ಭಾರತದ ರಾಜ್ಯಗಳಲ್ಲಿ ಮೈಸೂರೇ ಮೊದಲನೆಯದಾಗಿದೆ. ಪಂಜಾಬ್, ಉತ್ತರ ಪ್ರದೇಶ ಮೊದಲಾದ ಕಡೆಗಳಲ್ಲಿ ಕಾಂಗ್ರೆಸ್‌ನಲ್ಲಿ ಬಿಕಟ್ಟು ಮುಂದುವರಿಯುತ್ತಿರುವುದರಿಂದ ಅಲ್ಲಿಯೂ ಬದಲಾವಣೆ ಸಂಭವವಿದೆ.

ಜತ್ತಿಯವರ ಸಂಪುಟ ರಚನೆ ಈ ತಿಂಗಳ ಮಧ್ಯೆದಲ್ಲಿ ಪೂರ್ಣಗೊಳ್ಳುವುದಾಗಿ ತಿಳಿದುಬಂದಿದೆ. ಹಲವಾರು ಅಭ್ಯರ್ಥಿಗಳು ಮಂತ್ರಿ ಪದವಿಗಳಿಗಾಗಿ ಯತ್ನಿಸುತ್ತಿದ್ದಾರೆ. ಜತ್ತಿಯವರ ಭವಿಷ್ಯ ಸಂಪುಟದ ಆಯ್ಕೆಯ ಮೇಲೆ ಹೊಂದಿಕೊಂಡಿದೆ.

—✱—

ರಾಷ್ಟ್ರೀಯ ಅಂತರರಾಷ್ಟ್ರೀಯ

(೩ನೇ ಪುಟದಿಂದ)

ಬೆಳೆದು ಬಲಿತಿರುವ ಅಧಿಕಾರ ಲಾಲಸೆ ಕಾಂಗ್ರೆಸ್ಸಿಗರಲ್ಲಿ ಖಂಡಿತ ಹೋಗಲಾರದು. ವರ್ಷೇ ವರ್ಷೇ ಸಂಸ್ಥೆಯಲ್ಲಿನ ಬಿಕ್ಕಟ್ಟು ತೀವ್ರಗೊಳ್ಳುತ್ತಿದೆ. ಜನತೆಯ ಪ್ರೀತಿ ವಿಶ್ವಾಸಗಳನ್ನು ಕಳೆದುಕೊಳ್ಳುತ್ತಿದೆ. ಜನತೆ ಕಾಂಗ್ರೆಸ್ ಸಂಸ್ಥೆಯ ಬಗ್ಗೆ, ಅದರ ಸರಕಾರದ ನೀತಿಗಳ ಬಗ್ಗೆ ಎಚ್ಚತ್ತಿದ್ದಾರೆ. ಪಂಡಿತ ನೆಹರೂ ಎಷ್ಟೇ ಬೆದರಿಕೆ ಹಾಕಿದರೂ ಅಂಟು ಜಾಡ್ಯವಾಗಿ ಬೆಳೆದಿರುವ ಕಾಂಗ್ರೆಸ್ಸಿನಲ್ಲಿರುವ ರೋಗವನ್ನು ನಿವಾರಿಸುವುದು ದುಸ್ಸಾಧ್ಯವೆಂದು ಹೇಳಬಹುದು.

ಜನತೆಯ ಪ್ರಶ್ನೆಗಳನ್ನು ಬಗೆಹರಿಸುವ ಬಗ್ಗೆ, ಕಾಂಗ್ರೆಸ್ಸಿನಲ್ಲೇ ಇಂದು ತಲೆದೋರಿರುವ ಬಿಕ್ಕಟ್ಟಿಗೆ ಕಾರಣವೇನೆಂದು ನೆಹರೂರವರು ಕೂಲಂಕುಶವಾಗಿ ಯೋಚಿಸುವುದು ಅಗತ್ಯ. ಪ್ರಸಕ್ತ ಪರಿಸ್ಥಿತಿಯಿಂದ ನೆಹರೂರವರು ಕಳವಳಗೊಂಡಿರುವುದು ನಿವೃತ್ತರಾಗಬೇಕೆನ್ನುವ ಅವರ ಇಚ್ಛೆಯಲ್ಲಿ ವ್ಯಕ್ತಗೊಳ್ಳುತ್ತದೆ. ಈ ಬಗ್ಗೆ ನೆಹರೂರವರು ತಮ್ಮ ಸರಕಾರದ ಧೋರಣೆಗಳನ್ನೇ ಪರಿಶೀಲಿಸುವುದೊಳಿತು.

... ನ್ನು ಮತ್ತು ಎಲ್ಲ ರೀತಿಯ ನೆರವನ್ನು ಕೊಡುತ್ತಿದ್ದಾರೆ.

ಕೇರಳದ ರಾಜಕೀಯ ಭವಿಷ್ಯ ಈ ಚುನಾವಣೆಯನ್ನವಲಂಬಿಸಿದೆ ಎಂದು ಹೇಳಲಾಗುತ್ತಿದೆ. ಚುನಾವಣೆಯಲ್ಲಿ ಕಾಂಗ್ರೆಸ್ಸು ಜಯಗಳಿಸಿದ ಪಕ್ಷದಲ್ಲಿ ಆಗುವುದಾದರೂ ಏನು? ಜಯಗಳಿಸಿದಲ್ಲಿ ರಾಜ್ಯದಲ್ಲಿ ರಾಜಕೀಯ ಬಿಕ್ಕಟ್ಟು ಏರ್ಪಟ್ಟು ರಾಷ್ಟ್ರಾಧ್ಯಕ್ಷರ ಆಳ್ವಿಕೆ ಬರುತ್ತದೆ ಅಷ್ಟೆ ಜನತೆ ಇದನ್ನು ಅಪೇಕ್ಷಿಸುತ್ತಿಲ್ಲ ಪ್ರಜಾ ಪ್ರಭುತ್ವ ಆಡಳಿತೆಯನ್ನು ಅಪೇಕ್ಷಿಸುತ್ತಿರುವಾಗ ರಾಷ್ಟ್ರಾಧ್ಯಕ್ಷರ ಆಡಳಿತೆಯನ್ನು ತರವುದರಲ್ಲಿ ಕಾಂಗ್ರೆಸ್ ಭಾಗಿಯಾದರೆ ಅದು ಕಾಂಗ್ರೆಸ್ಸಿಗೆ ಯಾವ ಗೌರವವನ್ನು ತರುವುದಿಲ್ಲವೆಂಬುದು ದಿಟ. ಪ್ರಜಾ ಪ್ರಭುತ್ವ ಇಲ್ಲವೇ ರಾಷ್ಟ್ರಾಧ್ಯಕ್ಷರ ಆಳ್ವಿಕೆ ಇದೀಗ ಈ ಉಪಚುನಾವಣೆಯಲ್ಲಿ ಪ್ರಶ್ನೆಯಾಗಿದೆ ಎಂದು ಹೇಳಲಾಗುತ್ತಿದೆ. ಎಷ್ಟೇ ವಿರೋಧವಿದ್ದರೂ ಕಮ್ಯೂನಿಸ್ಟ್ ಉಮೇದುವಾರರು ಜಯಗಳಿಸುವುದರಲ್ಲಿ ಸಂಶಯವಿಲ್ಲ. ಕಳೆದ ಒಂದು ವರ್ಷದಲ್ಲಿ ಜನಪ್ರಿಯ ಆಡಳಿತೆಯನ್ನು ನಡೆಸಿರುವ ಕಮ್ಯೂನಿಸ್ಟ್ ಸರಕಾರದ ಬಗ್ಗೆ ಜನತೆಯಲ್ಲಿ ವಿಶ್ವಾಸವಿದೆ. ಈ ಚುನಾವಣೆ ಫಲಿತಾಂಶವು ದೇಶದ ಎಲ್ಲರ ಗಮನವನ್ನೂ ಸೆಳೆದಿರುವುದರಿಂದ ಮಹತ್ವವುಳ್ಳದ್ದಾಗಿದೆ.

ತಾತಾ ಉಕ್ಕಿನ ಕಾರ್ಖಾನೆ ನೌಕರರ ಮುಷ್ಕರ ನಿರ್ಧಾರ

ಜಮ್‌ಷೆಡ್‌ಪುರದಲ್ಲಿರುವ ತಾತಾ ಉಕ್ಕಿನ ಕಾರ್ಖಾನೆ ನೌಕರರು ತಮ್ಮ ನ್ಯಾಯವಾದ ಬೇಡಿಕೆಗಳಿಗಾಗಿ ಮೇ 12ರಂದು ಮುಷ್ಕರ ನಡೆಸಲು ನಿರ್ಧರಿಸಿದ್ದಾರೆ. ಮಾಲಿಕರ ಮುಂದೆ ಮಂಡಿಸಲಾಗಿರುವ 15 ಬೇಡಿಕೆಗಳಲ್ಲಿ ಮುಖ್ಯವಾದುದು, ವೇತನಗಳ ಪುನರ್‌ಪರಿಶೀಲನೆ ಮಾಡುವುದು, ಈ ಪರಿಶೀಲನೆ ಆಗುವ ವರೆಗೆ ತಾತ್ಕಾಲಿಕವಾಗಿ ಶೇ. 25ರಷ್ಟು ಸಂಬಳ ಹೆಚ್ಚಿಸುವುದು, ತುಟ್ಟಿ ಭತ್ಯದಲ್ಲಿ ಹೆಚ್ಚಳ ಮತ್ತು ಈ ಭತ್ಯವನ್ನು ಜೀವನ ವೆಚ್ಚದ ಅಂಶಗಳ ಏರಿಕೆಗೆ ಅನುಸಾರವಾಗಿ ಹೆಚ್ಚಿಸುವುದು, ಐದು ವರ್ಷ ಸರ್ವೀಸಾಗಿರುವ ಎಲ್ಲ ಕೆಲಸಗಾರರಿಗೂ ಕ್ವಾರ್ಟರ್ಸ್ ಒದಗಿಸುವುದು ಸಂಬಳ ಸಹಿತ 30 ದಿನಗಳ ಖಾಯಿಲೆ ರಜೆ, ಕೆಲಸದಿಂದ ತೆಗೆದುಹಾಕಿರುವವರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವುದು ಮತ್ತು ಜೆಮ್‌ಷೆಡ್‌ಪುರ ಮಜ್ದೂರ್ ಸಂಘಕ್ಕೆ ಮಾನ್ಯತೆ ಕೊಡುವುದು.

ಮೇಲಿನ ಬೇಡಿಕೆಗಳಿಗಾಗಿ ಸಂಧಾನವೆಲ್ಲವೂ ಮುರಿದುಬಿದ್ದುದರಿಂದ ಸಂಘವು ಏಪ್ರಿಲ್ 15ರಂದು ಮುಷ್ಕರದ ನೋಟೀಸನ್ನು ಇತ್ತಿದೆ. ಮುಷ್ಕರದ ಸಿದ್ಧತೆ ತೀವ್ರವಾಗಿ ನಡೆಯುತ್ತಿದೆ. ಇಂಟಕ್ ನಾಯಕತ್ವದಲ್ಲಿರುವ ಟಾಟಾ ಕೆಲಸಗಾರರ ಸಂಘವು ಮುಷ್ಕರವನ್ನು ಮುರಿಯಲು ಸತತ ಯತ್ನ ನಡೆಸುತ್ತಿದೆ. ಮುಷ್ಕರದ ನಾಯಕತ್ವವನ್ನು ಎ. ಐ. ಟಿ. ಯು. ಸಿ.ಗೆ ಸೇರಿರುವ ಜೆಮ್‌ಷೆಡ್‌ಪುರ ಮಜ್ದೂರ್ ಸಂಘವು ವಹಿಸಲಿದೆ. ಮುಷ್ಕರವನ್ನು ಯಶಸ್ವಿಯಾಗಿ ನಡೆಸಲು 5,000 ಮಂದಿ ಸ್ವಯಂಸೇವಕರನ್ನೂ ಕೂಡಿಸಲಾಗಿದೆ. ತಮ್ಮ ಬೇಡಿಕೆಗಳನ್ನು ಪಡೆದುಕೊಳ್ಳಲು ದೃಢನಿರ್ಧಾರದಿಂದಿರುವ ಮತ್ತು ಐಕ್ಯತೆಯಿಂದಿರುವ ತಾತಾ ಉಕ್ಕಿನ ಕಾರ್ಖಾನೆ ಕೆಲಸಗಾರರ ಮುಷ್ಕರವು ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ.

ದೇವಿಕುಲಂ ಉಪಚುನಾವಣೆ

ಕೇರಳ ವಿಧಾನ ಸಭೆಗೆ ದೇವಿಕುಲಂ ದ್ವಿಸದಸ್ಯ ಕ್ಷೇತ್ರದಿಂದ ಮೇ 16ರಂದು ನಡೆಯಲಿರುವ ಉಪ ಚುನಾವಣೆಯ ಪ್ರಚಾರ ಕಾರ್ಯ ತೀವ್ರವಾಗಿ ಸಾಗುತ್ತಿದೆ. ಸಚಿವರುಗಳ ಚುನಾವಣೆಯಲ್ಲಿ ಭಾಗವಹಿಸುವುದಿಲ್ಲವೆಂದು ಕೇರಳ ಕಮ್ಯೂನಿಸ್ಟ್ ಸರಕಾರವು ನಿರ್ಧರಿಸಿ, ಪ್ರಜಾಪ್ರಭುತ್ವ ರೀತ್ಯ ಚುನಾವಣೆ ಯಶಸ್ವಿಯಾಗಿ ನಡೆಯಲು ಮಾರ್ಗದರ್ಶನವಿತ್ತಿದೆ. ಆದರೆ ಕಾಂಗ್ರೆಸ್ ಪಕ್ಷವು ಚುನಾವಣೆಯಲ್ಲಿ ಹೇಗಾದರೂ ಗೆಲ್ಲಬೇಕೆಂದು ಯತ್ನಿಸುತ್ತಿದೆ. ಕೇಂದ್ರ ಸಚಿವರುಗಳು ಮತ್ತು ಇತರ ಕಾಂಗ್ರೆಸ್ ಮಂತ್ರಿಗಳೂ ಚುನಾವಣೆಯ ಪ್ರಚಾರ ಕಾರ್ಯದಲ್ಲಿ ತೊಡಗಿದ್ದಾರೆ.

ಚುನಾವಣೆಯಲ್ಲಿ ಕುತಂತ್ರಗಳನ್ನು ನಡೆಸುವುದರಲ್ಲಿ ಚತುರರೆಂದು ಹೆಸರುಗಳಿಸಿರುವ ಕೇಂದ್ರ ಸಚಿವರಾದ ಎಸ್. ಕೆ. ಪಾಟೀಲರು ದೇವೀಕುಲಂ ಉಪ ಚುನಾವಣೆಯಲ್ಲಿ ವಿಶೇಷ ಆಸಕ್ತಿಯಿಂದ ಪ್ರಚಾರ ನಡೆಸಲಿದ್ದಾರೆ. ಮದ್ರಾಸಿನ ಮುಖ್ಯ ಮಂತ್ರಿ ಕಾಮರಾಜ ನಾಡಾರ್ ಮತ್ತು ಇತರ ಮಂತ್ರಿಗಳು ಚುನಾವಣೆಯ ಪ್ರಚಾರ ನಡೆಸಲಿದ್ದಾರೆ. ಸಚಿವರುಗಳು ಚುನಾವಣೆಯಲ್ಲಿ ಭಾಗವಹಿಸಕೂಡದು ಎನ್ನುವ ಕಮ್ಯೂನಿಸ್ಟ್ ಪಕ್ಷದ ತೀರ್ಮಾನವು ಕಾಂಗ್ರೆಸ್ಸಿಗೆ ಅನ್ವಯಿಸುವುದಿಲ್ಲ ಎಂದು ಕಾಂಗ್ರೆಸ್ ನಾಯಕರುಗಳು ಹೇಳುತ್ತಿದ್ದಾರೆ.

ಇತ್ತೀಚೆಗೆ ಕನ್ನಾನೂರಿನಲ್ಲಿ ನಡೆದ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಸಮಿತಿಯ ಸಮ್ಮೇಳನದಲ್ಲಿ ದೇವಿಕುಲಂ ಉಪ ಚುನಾವಣೆಯ ಬಗ್ಗೆ ಮಾತನಾಡುತ್ತ ಕೇಂದ್ರ ರಕ್ಷಣಾ ಸಚಿವ ಕೃಷ್ಣಮೆನ್ನರವರು "ಕಾಂಗ್ರೆಸ್ಸು ಕೇರಳದಲ್ಲಿ ಸೋತಿತು ಮತ್ತು ಇದರಿಂದಾಗಿ ವಿಶ್ವದಲ್ಲಿ ಕಾಂಗ್ರೆಸ್ಸಿನ ಮತ್ತು ಭಾರತದ ಗೌರವವು ಕುಂದಿತು ಸೋಲನ್ನನುಭವಿಸಿರುವಂಥ ಇಲ್ಲಿ ಕಾಂಗ್ರೆಸ್ ರಾಷ್ಟ್ರೀಯ ಗೌರವವನ್ನು ಪುನಃ ಪಡೆದುಕೊಳ್ಳಲು ಈ ಉಪ ಚುನಾವಣೆಯಲ್ಲಿ ಜಯ ಗಳಿಸುವುದು ಅಗತ್ಯ" ಎಂದು ತಿಳಿಸಿದ್ದಾರೆ.

ಉಪ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಉಮೇದುವಾರರನ್ನು ಸೋಲಿಸಲು ಎಲ್ಲ ಬಗೆಯ ಅಪಪ್ರಚಾರಗಳನ್ನು ಹರಡಲಾಗುತ್ತಿದೆ. ಚುನಾವಣೆಯ ದಿನ ಹತ್ತಿರ ಬರುತ್ತಿದ್ದಂತೆ ಅಪಪ್ರಚಾರದ ಧಾಳಿಯೂ ಅಧಿಕಗೊಳ್ಳುತ್ತಿದೆ. ಕಮ್ಯೂನಿಸ್ಟ್ ಉಮೇದುವಾರರ ವಿಜಯವನ್ನು ಕೋರಿ ದೇಶದ ನಾನಾ ಭಾಗಗಳಿಂದ ಶ್ರಮಜೀವಿಗಳು ಪುರೋಗಾಮಿಗಳು ಧನ ಸಹಾಯವ

ಆಫ್ರಿಕಾದ ಸ್ವತಂತ್ರ ರಾಷ್ಟ್ರಗಳ ಸಂಯುಕ್ತ ಘೋಷಣೆ

ಆಫ್ರಿಕಾ ಖಂಡದ ಸ್ವತಂತ್ರ ರಾಷ್ಟ್ರಗಳ ಸಮ್ಮೇಳನವು ಅಕ್ರಾದಲ್ಲಿ ಏಪ್ರಿಲ್ ೨೨ರಂದು ಮುಕ್ತಾಯಗೊಂಡಿತು. ಎಂಟು ದಿನಗಳು ಸಮಾವೇಶಗೊಂಡಿದ್ದ ಈ ಸಮ್ಮೇಳನವು ಆಫ್ರಿಕಾ ರಾಷ್ಟ್ರಗಳ ಸ್ವಾತಂತ್ರ್ಯ ರಕ್ಷಣೆ, ಆರ್ಥಿಕಾಭಿವೃದ್ಧಿ, ವರ್ಣಭೇದದ ಸಮಸ್ಯೆ ಇನ್ನೂ ಸ್ವತಂತ್ರವಾಗದೆ ವಸಾಹತುಶಾಹಿಯಡಿಯಲ್ಲಿ ನರಳುತ್ತಿರುವ ಆಫ್ರಿಕಾ ದೇಶಗಳ ಸಮಸ್ಯೆ ಇತ್ಯಾದಿಗಳನ್ನು ಕುರಿತು ಚರ್ಚೆ ನಡೆಸಿ ಮುಖ್ಯವಾದ ಗೊತ್ತುವಳಿಗಳನ್ನು ಮಾಡಿ ಸಮ್ಮೇಳನದ ನಂತರ ಇತ್ತಿರುವ ಸಂಯುಕ್ತ ಘೋಷಣೆಯು ಅತ್ಯಂತ ಮಹತ್ವವುಳ್ಳದ್ದಾಗಿದೆ. ವಸಾಹತುಶಾಹಿಯಿಂದ ಬಂಧವಿಮೋಚನೆ ಹೊಂದಿದ ಸ್ವತಂತ್ರ ಆಫ್ರಿಕಾ ರಾಷ್ಟ್ರಗಳ ಐಕ್ಯತೆ, ತಮ್ಮ ಸ್ವಾತಂತ್ರ್ಯ ಸಾರ್ವಭೌಮತ್ವಗಳನ್ನು ಕಾಪಾಡಿಕೊಳ್ಳುವುದರಲ್ಲಿ ಅವುಗಳ ದೃಢ ನಿರ್ಧಾರ ಇವನ್ನು ಅದು ಎತ್ತಿತೋರಿಸುತ್ತದೆ.

ಅಕ್ರಾದಲ್ಲಿ ನಡೆದ ಈ ಸಮ್ಮೇಳನದಲ್ಲಿ ಸಂಯುಕ್ತ ಅರಬ್ ಗಣರಾಜ್ಯ, ಸೂಡಾನ್, ಘಾನ, ಎಥಿಯೋಪಿಯ, ಲಿಬಿಯ, ಮೊರಾಕ್ಕೊ, ಟ್ಯುನೀಷಿಯ ಮತ್ತು ಲೈಬೀರಿಯಾ ರಾಷ್ಟ್ರಗಳು ಭಾಗವಹಿಸಿದ್ದುವು. ವಸಾಹತುಶಾಹಿ ನೀತಿಯೂ ಆಫ್ರಿಕಾದ ಮತ್ತು ವಿಶ್ವದ ಶಾಂತಿಗೆ ಧಕ್ಕೆ ತರುವಂಥದ್ದಾಗಿದೆ ಎಂದು ಸಮ್ಮೇಳನವು ಖಂಡಿಸಿದೆ. ವಸಾಹತುಶಾಹಿಯ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ, ಅದರಲ್ಲೂ ಫ್ರೆಂಚ್ ಸಾಮ್ರಾಜ್ಯವಾದಿಯ ವಿರುದ್ಧ ಹೋರಾಡುತ್ತಿರುವ ಆಲ್ಜೀರಿಯಾ ಜನತೆಗೆ ಸಮ್ಮೇಳನವು ಬೆಂಬಲವಿತ್ತಿದೆ. ಸಮ್ಮೇಳನದ ಅಂತ್ಯದಲ್ಲಿ ಹೊರಡಿಸಿದ ಸಂಯುಕ್ತ ಘೋಷಣೆಯಲ್ಲಿ ವಿಶ್ವ ಸಂಸ್ಥೆಯ ಪ್ರಣಾಳಿಕೆಗೆ ಮತ್ತು ಬಾಂಡುಂಗ್‌ನಲ್ಲಿ ಸಮಾವೇಶಗೊಂಡಿದ್ದ ಏಷ್ಯಾ ಆಫ್ರಿಕಾ ರಾಷ್ಟ್ರಗಳ ಸಮ್ಮೇಳನದ ತೀರ್ಮಾನಗಳಿಗೆ ಬದ್ಧವಾಗಿರುವುದಾಗಿ ತಿಳಿಸಲಾಗಿದೆ. ವಿಶ್ವಶಾಂತಿಗಾಗಿ, ಆಫ್ರಿಕಾ ಜನತೆಯ ನಡುವೆ ಐಕ್ಯತೆಗಾಗಿ, ವಸಾಹತು ನೀತಿಯ ಅಂತ್ಯಕ್ಕಾಗಿ ಸತತವಾಗಿ ಶ್ರಮಿಸುವುದಾಗಿ ಘೋಷಿಸಲಾಗಿದೆ. ತಮ್ಮ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುತ್ತ, ಆಫ್ರಿಕಾದ ಜನತೆಯ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಗಾಗಿ ದುಡಿಯುವುದಾಗಿಯೂ, ವರ್ಣಭೇದ ನೀತಿಯಲ್ಲಿ ಎಲ್ಲ ರೂಪದಲ್ಲಿಯೂ ತೀವ್ರವಾಗಿ ವಿರೋಧಿಸುವುದಾಗಿಯೂ, ಬೃಹತ್ ರಾಷ್ಟ್ರಗಳು ನ್ಯೂಕ್ಲಿಯರ್ ಶಸ್ತ್ರಗಳ ತಯಾರಿಕೆ ಮಾಡುವುದನ್ನೂ, ಬಳಸುವುದನ್ನೂ ಮತ್ತು ಪ್ರಯೋಗ ನಡೆಸುವುದನ್ನೂ ತ್ಯಜಿಸುವಂತೆ ಒತ್ತಾಯ ತರುವುದಾಗಿಯೂ ಘೋಷಿಸಲಾಗಿದೆ.

ತಮ್ಮ ಸ್ವಾತಂತ್ರ್ಯ ಸಾರ್ವಭೌಮತ್ವಗಳನ್ನು ಭದ್ರವಾದ ತಳಹದಿಯ ಮೇಲಿರಿಸಲು ಅಗತ್ಯವಾಗಿರುವ ಆರ್ಥಿಕ ಪ್ರಗತಿಯನ್ನೂ ತೀವ್ರವಾಗಿ ಸಾಧಿಸಲು, ಈ ಮಹತ್ಕಾರ್ಯದಲ್ಲಿ ದೇಶದಲ್ಲಿನ ಆಂತರಿಕ ಸಂಪತ್ತನ್ನು ರೂಢಿಸಿಕೊಳ್ಳುವುದರೊಂದಿಗೆ, ಪರಸ್ಪರರ ನಡುವೆ ಸೌಹಾರ್ದಗಳ ಮೂಲಕ ಆರ್ಥಿಕಾವಲಂಬನೆಯನ್ನು ನಿವಾರಿಸಲು ಯತ್ನಿಸುವುದಾಗಿ ಘೋಷಿಸಲಾಗಿದೆ.

ಜನತೆಯ ಜೀವನ ಮಟ್ಟಗಳನ್ನು ಉತ್ತಮಗೊಳಿಸುವುದು, ಸಾಂಸ್ಕೃತಿಕ ಮುನ್ನಡೆಯನ್ನು ಸಾಧಿಸುವುದು, ಪರಸ್ಪರ ರಾಷ್ಟ್ರಗಳೊಡನೆ ಸಾಂಸ್ಕೃತಿಕ ನಿಯೋಗಗಳ ವಿನಿಮಯ ಮಾಡಿಕೊಳ್ಳುವುದು ತನ್ಮೂಲಕ ಆಫ್ರಿಕಾದ ಸ್ವತಂತ್ರ ರಾಷ್ಟ್ರಗಳ ಜನತೆಯ ನಡುವಣ ಸಂಬಂಧವು ಬಲಗೊಳ್ಳುವಂತೆ ಮಾಡುವುದು ಉದ್ದೇಶವಾಗಿದೆ ಎಂದು ಘೋಷಿಸಲಾಗಿದೆ.

ಕಮ್ಯೂನಿಸ್ಟ್ ಪಾರ್ಟಿ ನಿಧಿಗೆ ಸಹಾಯ

ಮಂಗಳೂರಿನಲ್ಲಿ ನಡೆದ ಕರ್ನಾಟಕ ಪ್ರಾಂತ ಕಮ್ಯೂನಿಸ್ಟ್ ಪಾರ್ಟಿ ಸಮ್ಮೇಳನದಲ್ಲಿ, ಪ್ರಾಂತ ಸಮಿತಿಯ ನಿಧಿಗೆ 2000 ರೂಗಳ ಸಂಗ್ರಹಣಕ್ಕೆ ಇತ್ತಿದ ಕರೆಯ ಮೇರೆಗೆ, ಬೆಂಗಳೂರಿನ ಹಿತೈಷಿಯೊಬ್ಬರು ರೂ. 5ನ್ನು, ಚಿಕ್ಕಮಗಳೂರು ಜಿಲ್ಲೆಯ ಪಾರ್ಟಿ ಸಮಿತಿಯು ರೂ. 50 ನ್ನೂ, ಶಿವಮೊಗ್ಗ ಜಿಲ್ಲೆಯ ಪಾರ್ಟಿ ಸಮಿತಿಯು 55ನ್ನೂ, ಹಾವೇರಿಯ ಪಾರ್ಟಿ ಸದಸ್ಯರು ರೂ. 35ನ್ನೂ, ಸಂವದತ್ತಿಯ ಶಂಕರಣ್ಣ ಕಪ್ಪಣ್ಣ ಇವರು ರೂ. 5ನ್ನೂ ಕಳಿಸಿ ಕೊಟ್ಟಿದ್ದಾರೆ. ಇವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು ಇತರ ಪಾರ್ಟಿ ಘಟಕಗಳವರೂ ಮತ್ತು ಹಿತೈಷಿಗಳೂ ಶೀಘ್ರವಾಗಿ ತಮ್ಮ ಭಾಗದ ಕಾಣಿಕೆಯನ್ನು ಕಳಿಸಿ ಕೊಡಬೇಕೆಂದು ವಿನಂತಿಸುತ್ತೇವೆ.

7-5-58 ಕಾರ್ಯದರ್ಶಿ

ಭಾರತ ಕಮ್ಯೂನಿಸ್ಟ್ ಪಾರ್ಟಿ ಕರ್ನಾಟಕ ಪ್ರಾಂತ ಸಮಿತಿ ಸುಲ್ತಾನಪೇಟೆ, ಬೆಂಗಳೂರು ೨.

ಷೇಕ್ ಅಬ್ದುಲ್ಲಾರವರ ಬಂಧನ

ಕಾಶ್ಮೀರ ಸರಕಾರವು ಷೇಕ್ ಮಹಮುದ್ ಅಬ್ದುಲ್ಲಾರವರನ್ನು ಪುನಃ ಬಂಧಿಸಿರುವುದು ರಾಜಕೀಯ ವಲಯಗಳಲ್ಲಿ ಅಚ್ಚರಿಯನ್ನುಂಟುಮಾಡಿದೆ. ಕಾಶ್ಮೀರ ಸರಕಾರದ ಈ ಕ್ರಮವು ಶಾಂತಿ ಭಂಗಕ್ಕೆ ಎಡೆಕೊಡಬಹುದೆಂಬ ಹಾಗೂ ಪಾಕೀಸ್ಥಾನದೊಂದಿಗೆ ಭಾರತ ಸಂಬಂಧವನ್ನು ಮತ್ತೂ ಕೆಡಿಸುವುದೆಂಬ ಅಭಿಪ್ರಾಯವನ್ನು ಕೆಲವರು ವ್ಯಕ್ತಗೊಳಿಸಿದ್ದಾರೆ.

ಅಬ್ದುಲ್ಲಾರವರ ಬಂಧನದ ವಿಷಯವನ್ನು ಚರ್ಚಿಸಲು ಕಮ್ಯೂನಿಸ್ಟ್ ಪಾರ್ಟಿ ಮತ್ತು ಪ್ರಜಾಸೋಷಲಿಸ್ಟ್ ಪಕ್ಷದ ಸದಸ್ಯರುಗಳು ಪಾರ್ಲಿಮೆಂಟಿನಲ್ಲಿ ಮಂಡಿಸಿದ ನಿಲುವಳಿ ಸೂಚನೆಯನ್ನು ಅಧ್ಯಕ್ಷರು ಅದು ಕಾಶ್ಮೀರ ರಾಜ್ಯಸರಕಾರಕ್ಕೆ ಸಂಬಂಧಿಸಿದ್ದೆಂದು ತಿಳಿಸಿ ತಳ್ಳಿಹಾಕಿದ್ದಾರೆ.

ಷೇಕ್ ಅಬ್ದುಲ್ಲಾರವರ ಬಂಧನದ ಬಗ್ಗೆ ಭಾರತ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಅಜಯ ಘೋಷ್‌ರವರು ಇತ್ತಿರುವ ಹೇಳಿಕೆಯಲ್ಲಿ ಷೇಕ್ ಅಬ್ದುಲ್ಲಾರವರ ಬಂಧನವು ಅನಿರೀಕ್ಷಿತವಾದುದು ಹಾಗೂ ದುರಾದೃಷ್ಟವಾದುದೂ ಆಗಿದೆ ಎಂದು ತಿಳಿಸಿದ್ದಾರೆ. ಅಲ್ಲದೆ, ಕಾಶ್ಮೀರದಲ್ಲಿ ಎಲ್ಲ ರೀತಿಯಿಂದಲೂ ಪರಿಸ್ಥಿತಿ ಶಾಂತವಾಗಿತ್ತು. ಶಾಂತಿ ಭಂಗವಾಗುವಂಥ ಘಟನೆಯೇನೂ ಜರುಗಿರಲಿಲ್ಲ. ತಾವು ಕಾನೂನು ಭಂಗಮಾಡಲು ಇಚ್ಛಿಸುವುದಿಲ್ಲವೆಂದು ಷೇಕ್ ಅಬ್ದುಲ್ಲಾ ಘೋಷಿಸಿದ್ದರು. ಈದ್ ಹಬ್ಬವೂಸಹ ಶಾಂತಿಯುತವಾಗಿ ನಡೆಯಿತು ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಷೇಕ್ ಅಬ್ದುಲ್ಲಾರವರ ರಾಜಕೀಯ ಅಭಿಪ್ರಾಯವು ಎಲ್ಲರಿಗೂ ತಿಳಿದಿದೆ, ಅದನ್ನು ಟೀಕಿಸಲಾಗಿದೆ. ಅವರ ಧೋರಣೆಯು ಕಾಶ್ಮೀರದ ಜನತೆಯ ಹಿತಕ್ಕಾಗಲೀ ಸ್ವಾತಂತ್ರ್ಯ ಪ್ರಜಾಪ್ರಭುತ್ವಗಳ ರಕ್ಷಣೆಗಾಗಲೀ ಸಹಾಯಕವಾಗುವುದಿಲ್ಲವೆಂದೂ, ಅದು ಅವಕ್ಕೆ ಆತಂಕ ತರುವುದೆಂದೂ ಟೀಕಿಸಲಾಗಿದೆ.

ಆದರೆ ಬೇರೇ ಅಭಿಪ್ರಾಯವಿಟ್ಟುಕೊಂಡಿದ್ದಲ್ಲಿ ಅಥವ ಅದನ್ನು ಪ್ರಚುರಪಡಿಸಿದಲ್ಲಿ ಯಾರನ್ನು ಬಂಧಿಸುವುದು ಸರಿಯಲ್ಲ. ಷೇಕ್ ಅಬ್ದುಲ್ಲಾರವರ ಚಟುವಟಿಕೆಯು ದೇಶದ ಭದ್ರತೆಗೆ ಅಂತಕ ತರುವಂಥದಾಗಿದ್ದಲ್ಲಿ ಅವರನ್ನು ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಬಹುದಾಗಿತ್ತೆ ಹೊರತು, ಸ್ಥಾನ ಬದ್ಧತಾ ಕಾಯಿದೆಯಡಿಯಲ್ಲಿ ಬಂಧಿಸಿಡುವುದಲ್ಲ.

ಈ ರೀತಿಯಲ್ಲಿ ದಬ್ಬಾಳಿಕೆ ನಡೆಸಿದಲ್ಲಿ ಷೇಕ್ ಅಬ್ದುಲ್ಲಾರವರನ್ನು ತಮ್ಮ ನಾಯಕನೆಂದು ಪರಿಗಣಿಸುವ ಕಾಶ್ಮೀರ ಜನತೆಯ ವಿಭಾಗವನ್ನು ಮತ್ತು ಭಾರತದೊಂದಿಗೆ ಕಾಶ್ಮೀರದ ಸೇರ್ಪಡೆಯನ್ನು ವಿರೋಧಿಸುವ ಜನವಿಭಾಗವನ್ನು ಪ್ರಚೋದಿಸುತ್ತದೆ ಅಷ್ಟೆ.

ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯದ ಗುರಿ ಸಾಧಿಸುವ ಆಸಕ್ತಿಯುಳ್ಳ ಎಲ್ಲ ಶಕ್ತಿಗಳೂ ಶಾಂತಿಯುತವಾದ ವಾತಾವರಣವನ್ನು ಕಲ್ಪಿಸಿ, ಷೇಕ್ ಅಬ್ದುಲ್ಲಾರವರ ಧೋರಣೆಯನ್ನು ಬದಲಿಸಲು ಯತ್ನಿಸುತ್ತಿದ್ದಾಗ, ಈ ರೀತಿಯಲ್ಲಿ ಬಂಧಿಸಿ ಪರಿಸ್ಥಿತಿಯನ್ನು ಉಲ್ಬಣಗೊಳಿಸಿರುವುದು ಖಂಡನೀಯವಾಗಿದೆ.

ಅದೇ ಅಲ್ಲದೆ ಕಾಶ್ಮೀರ ಭಾರತಕ್ಕೆ ಸೇರಬೇಕೆನ್ನುವುದರ ಬಗ್ಗೆ ದೃಢಾಭಿಪ್ರಾಯವುಳ್ಳ ಮತ್ತು ಷೇಕ್ ಅಬ್ದುಲ್ಲಾ, ಕಾಶ್ಮೀರ ಸರಕಾರ ಮತ್ತು ಭಾರತ ಸರಕಾರದ ನಾಯಕರ ನಡುವೆ ಒಪ್ಪಂದ ತರಲು ಯತ್ನಿಸುತ್ತಿದ್ದಂಥ ಶ್ರೀ ಕಾಶ್ಯಪ್ ಬಂಧುರವರ ಬಂಧನ ಸಾವಿರಾರು ಕಾಶ್ಮೀರಿ ಜನತೆಗೆ ದಿಗ್ಭ್ರಮೆ ಹಿಡಿದಿದೆ.

ಭಾರತವು ಕಾಶ್ಮೀರದಲ್ಲಿ ಪ್ರಜಾಪ್ರಭುತ್ವವನ್ನು ಮೊಟಕುಮಾಡಲು ಯತ್ನಿಸುತ್ತಿ ಎಂಬ ಅಭಿಪ್ರಾಯ ಜನರಲ್ಲಿ ಉಂಟಾಗುತ್ತಿದೆ.

ಕಾಶ್ಮೀರವು ಭಾರತಕ್ಕೆ ಸೇರಬೇಕು ಎಂದು ಹೇಳುವುದಷ್ಟೇ ಅಲ್ಲದೆ, ಇಡೀ ಕಾಶ್ಮೀರ ಜನತೆಯ ಮನವೊಲಿಸಲು ತಕ್ಕ ಸ್ಥಿತಿಗತಿಗಳುಂಟುಮಾಡಿ, ಸಾಮ್ರಾಜ್ಯವಾದಿಗಳ ಮತ್ತು ಪಾಕಿಸ್ಥಾನದ ಕುತಂತ್ರಗಳನ್ನು ಮುರಿಯಲು ಅವರ ಬೆಂಬಲ ಪಡೆಯಬೇಕೆಂದು ಹೇಳುವ ವಿಶಾಲ ಜನಸಮೂಹವು ಇಂದು ಕಾಶ್ಮೀರದಲ್ಲಿದೆ. ಸರಕಾರ ಇಂಥ ಅವಸರದ ಕೃತ್ಯಗಳು ಮತ್ತು ಧೋರಣೆಗಳಿಂದ ಅವರಿಗೆ ತೊಂದರೆ ಆಗುತ್ತದೆ. ಇದರಿಂದ ಭಾರತದ ಶತೃಗಳು ಮತ್ತು ಪ್ರಜಾಪ್ರಭುತ್ವ ವಿರೋಧಿಗಳು ಹೆಚ್ಚು ಬಲಗೊಳ್ಳುವ ಅವಕಾಶವಿದೆ.

ಕಾಶ್ಮೀರದ ಜನತೆಯ ಸಂಪೂರ್ಣ ಸಹಾನುಭೂತಿಯನ್ನೂ, ಆದರವನ್ನೂ ಸಂಪಾದಿಸುವುದು ಇಂದಿನ ಮುಖ್ಯ ಕಾರ್ಯವಾಗಿದೆ. ಇದಕ್ಕಾಗಿ ಭಾರತದಲ್ಲಿರುವ ಎಲ್ಲ ಪ್ರಜಾಪ್ರಭುತ್ವವಾದಿಗಳು ಶ್ರಮಿಸಬೇಕಾಗಿದೆ.

ಈ ಕಾರ್ಯವನ್ನು ಮಾಡುವುದರಲ್ಲಿ ಭಾರತದ ಜನತೆಗೆ ಭಾರತ ಸರಕಾರವು ಹೊಣೆಯಾಗಿದೆ. ಕಾಶ್ಮೀರದ ವಿಷಯವನ್ನು ಸಂಪೂರ್ಣವಾಗಿ ಅಲ್ಲಿನ ಸರಕಾರಕ್ಕೇ ಬಿಡುವುದು ದೊಡ್ಡ ತಪ್ಪಾಗುತ್ತದೆ, ಅಷ್ಟೇ ಅಲ್ಲ ಅಪಾಯಕಾರಿಯಾದುದೂ ಆಗುತ್ತದೆ ಎಂದು ಅಜಯ ಘೋಷ್ ತಿಳಿಸಿದ್ದಾರೆ.

ಕೇರಳದಲ್ಲಿ ವಿಷಮಿಶ್ರಿತ ಆಹಾರ ದುರಂತ!

ವಿಷಮಿಶ್ರಿತ ಆಹಾರದ ಸೇವನೆಯಿಂದಾಗಿ ಕೇರಳದಲ್ಲಿ ಕಳೆದ ವಾರ ಭಾರೀ ದುರಂತ ನಡೆದುದು ವಿಷಾದಕರವಾಗಿದೆ. ಕ್ವಿಲೋನ್ ಬಳಿಯಿರುವ ಶಸ್ತ್ರಮ ಕೋಟೆಯ ಲೋಕ ಸಹಾಯಕ ಸೇನಾ ಶಿಬಿರದಲ್ಲಿ ವಿಷಮಿಶ್ರಿತ ಆಹಾರ ಸೇವನೆಯಿಂದಾಗಿ ಏಪ್ರಿಲ್ 29ರಂದು 70ಕ್ಕೂ ಹೆಚ್ಚು ಮಂದಿ ಸಾವಿಗೀಡಾದರು. ರಾಜ್ಯದ ನಾನಾ ಭಾಗಗಳಲ್ಲಿ ಅನೇಕರು ಈ ಆಹಾರ ಸೇವನೆಯಿಂದ ತೊಂದರೆಗೊಳಗಾಗಿದ್ದಾರೆ. ನೂರಾರು ಮಂದಿ ಇಂದು ಆಸ್ಪತ್ರೆಯಲ್ಲಿದ್ದಾರೆ.

ಮದರಾಸಿನ ಚೆಂಗಲ್‌ಪೆಟ್ ಜಿಲ್ಲೆಯಲ್ಲೂ ಒಂದೆರಡು ಘಟನೆ ಸಂಭವಿಸಿವೆ.

ಗೋಧಿ ಹಿಟ್ಟು, ಮೈದಾ, ರವೆ, ಸಕ್ಕರೆ ಇವುಗಳನ್ನು ತಿಂದ ನಂತರ ಅದು ವಿಷಮಿಶ್ರಿತವಾಗಿದ್ದುದರಿಂದ ಜನರು ಸಾವಿಗೀಡಾಗಿದ್ದಾರೆಂದು ತಿಳಿದುಬಂದಿದೆ. ಕೇರಳ ಸರಕಾರವು ಕೂಡಲೇ ಈ ಬಗ್ಗೆ ಒಂದು ವಿಚಾರಣಾ ಸಮಿತಿಯನ್ನು ನಿಯಮಿಸಿದೆ. ಎಲ್ಲ ಜನರಿಗೂ ಪದಾರ್ಥಗಳನ್ನು ಎಚ್ಚರಿಕೆಯಿಂದ ಬಳಸಬೇಕೆಂದು ತಿಳಿಸಿದೆ. ರಾಜ್ಯದಲ್ಲಿರುವ ಒಟ್ಟು ವ್ಯಾಪಾರದ ಗೋಡೌಗಳು ಮತ್ತು ಇತರ ದಾಸ್ತಾನಿನ ಅಂಗಡಿಗಳಲ್ಲಿನ ಸರಕುಗಳನ್ನು ಪರೀಕ್ಷೆಗೊಳಪಡಿಸಿದೆ. ಕೇರಳ ಸರಕಾರವಷ್ಟೇ ಅಲ್ಲದೆ, ಲೋಕ ಸಹಾಯಕ ಸೇವಾ ಶಿಬಿರ ದುರಂತವನ್ನು ತನಿಖೆ ಮಾಡಲು ಕೇಂದ್ರ ಸರಕಾರವೂ ಒಂದು ತನಿಖಾ ಸಮಿತಿಯನ್ನು ನೇಮಿಸಿದೆ. ಮೃತರಿಗೆ ಪರಿಹಾರವನ್ನು ಕೇಂದ್ರ ಸರಕಾರವು ಒದಗಿಸಬೇಕೆಂದು ಸಲಹೆಯನ್ನು ಸೂಚಿಸಿ ಕೇರಳ ಸರಕಾರ ಮೃತರ ಬಂಧುಗಳಿಗೆ ಈಗಾಗಲೇ ತಲಾ ರೂ. 25ರಂತೆ ಪರಿಹಾರವನ್ನಿತ್ತಿದೆ. ಈ ವಿಚಾರಣಾ ಸಮಿತಿಯ ವರದಿಯು ಮೂರು ನಾಲ್ಕು ವಾರಗಳಲ್ಲಿ ಬರಲಿದೆ. ಈ ಪ್ರಕರಣದಲ್ಲಿ ಕಾರಣಕರ್ತರಾದವರನ್ನು ಶೀಘ್ರವಾದ ಶಿಕ್ಷೆಗೊಳಪಡಿಸುವುದು ಅಗತ್ಯವಾಗಿದೆ.

ಈ ವರೆಗೆ ಬಂದಿರುವ ವರದಿಗಳಂತೆ, ಆಹಾರ ಪದಾರ್ಥಗಳೊಂದಿಗೆ ಹುಳಗಳನ್ನು ಕೊಲ್ಲಲು ಬಳಸುವ "ಫೋಲಿಡಾಲ್" ವಿಷವು ಬೆರೆತಿದ್ದಿತೆಂದು ತಿಳಿದುಬಂದಿದೆ. ತ್ರಿವಾಂಡ್ರಂ ಜಿಲ್ಲೆಯ ಡೆಪ್ಯೂಟಿ ಪೋಲೀಸ್ ಸೂಪರಿಂಟೆಂಡೆಂಟರು ಇತ್ತಿರುವ ಹೇಳಿಕೆಯೊಂದರಲ್ಲಿ ಈ ರೀತಿ ಹೇಳಿದ್ದಾರೆ: ಸರಕಾರದ ಆದೇಶದ ಮೇಲೆ ತಾವು ಆಹಾರ ದಾಸ್ತಾನುಗಳನ್ನು ಪರೀಕ್ಷಿಸಿದರೆಂದೂ ಅಲ್ಲದೆ, ಕೊಚ್ಚಿನ್ ಬಂದರಿನಲ್ಲಿ ಆಹಾರದ ಸರಕುಗಳನ್ನು ಇಳಿಸಿದ "ಜೈಹಿಂದ್" ಹಡಗನ್ನೂ ತಾವು ಪರೀಕ್ಷಿಸಿದರೆಂದೂ, ಅದರಲ್ಲಿ "ಫೋಲಿಡಾಲ್" ವಿಷದ 55 ಪೆಟ್ಟಿಗಳಲ್ಲಿ 15 ಒಡೆದುಹೋಗಿ ಸುಮಾರು 15 ಶೀಶೆಗಳಿಂದ 12 ಗ್ಯಾಲನ್‌ನಷ್ಟು ವಿಷ ಸುರಿದಿದ್ದು, ಆಹಾರ ಪದಾರ್ಥಗಳಿಗೆ ಸೋಕಿತೆಂದೂ ತಿಳಿಸಿದ್ದಾರೆ. ಗೋಧಿ, ಅಟ್ಟಾ ಹಿಟ್ಟು, ಸಕ್ಕರೆ ಇವುಗಳಿಗೆ ಅದು ಸೋಂಕಿದ್ದಿತೆಂದು ತಿಳಿಸಿದ್ದಾರೆ. ಶಸ್ತ್ರಮ ಕೋಟೆಯ ವ್ಯಾಪಾರಗಾರರೊಬ್ಬರು 15 ಮೂಟೆ ಅಟ್ಟಾ ಹಿಟ್ಟನ್ನು ಕೊಚ್ಚಿನ್‌ನಿಂದ ಕೊಂಡು ಅದನ್ನು ಲೋಕ ಸಹಾಯಕ ಸೇನಾ ಶಿಬಿರಕ್ಕೆ ಸರಬರಾಜು ಮಾಡಿದ್ದರೆಂದೂ ತಿಳಿಸಿದ್ದಾರೆ.

ತನಿಖೆ ಸಂಪೂರ್ಣವಾಗಿ ಮುಗಿದ ನಂತರ ಹೆಚ್ಚಿನ ವಿವರ ದೊರಕಲಿದೆ.

ಪಂಡಿತ ನೆಹರೂ ತಾತ್ಕಾಲಿಕವಾಗಿ ನಿವೃತ್ತಿಯಾಗಲಿಲ್ಲ?

ಕೇರಳ ಪ್ರವಾಸವನ್ನು ಮುಗಿಸಿಕೊಂಡು ದೆಹಲಿಗೆ ಹಿಂತಿರುಗಿದ ಪಂಡಿತ ನೆಹರೂರವರು ತಾವು ಅಧಿಕಾರದಿಂದ ತಾತ್ಕಾಲಿಕವಾಗಿ ನಿವೃತ್ತರಾಗ ಬಯಸುವುದಾಗಿ ಘೋಷಿಸಿದರು. ಕಾಂಗ್ರೆಸ್ ಪಕ್ಷದ ಮುಂದೆ ತಮ್ಮ ನಿರ್ಧಾರವನ್ನು ಮಂಡಿಸಿ ಎಲ್ಲರಿಗೂ ದಿಗ್ಭ್ರಮೆ ಹಿಡಿಸಿದರು. ವೃತ್ತಪತ್ರಿಕೆಗಳೆಲ್ಲವೂ ದಪ್ಪಕ್ಷರಗಳಲ್ಲಿ ಪ್ರಕಟಣೆಯಿತ್ತವು. ದೇಶವು ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸಲು ಯತ್ನಿಸುತ್ತಿರುವಾಗ, ರಾಷ್ಟ್ರೀಯವಾಗಿ ಅಂತರರಾಷ್ಟ್ರೀಯವಾಗಿ ಮಹತ್ತರವಾದ ಸಮಸ್ಯೆಗಳಿರುವಾಗ ನೆಹರೂರವರು ಅಧಿಕಾರ ತ್ಯಜಿಸುವುದು ಸೂಕ್ತವಲ್ಲ ಎಂದು ದೇಶಾದ್ಯಂತವೂ ಬೊಬ್ಬೆ ಎದ್ದಿತು. ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದ ತುರ್ತು ಸಭೆ ಕರೆಯಲ್ಪಟ್ಟಿತು.

ಪಂಡಿತ ನೆಹರೂರಂಥ ವ್ಯಕ್ತಿಯ ಅಗತ್ಯತೆ ದೇಶಕ್ಕೆ ಅಗತ್ಯವಾಗಿದೆ ಎಂಬಂಶದಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಆದರೆ ಹಟಾತ್ತನೆ ಬಂದ ಈ ನಿರ್ಧಾರದ ಹಿನ್ನೆಲೆಯೇನು ಎಂಬುದೀಗ ಪ್ರಶ್ನೆಯಾಗಿದೆ. ಕಾಂಗ್ರೆಸ್ಸಿನಲ್ಲಿ ಇಂದು ತಲೆದೋರಿರುವ ಸಂಘಟನಾ ಬಿಕ್ಕಟ್ಟು ಕಾರಣವೆಂದು ಧಾರಾಳವಾಗಿ ಹೇಳಬಹುದು. ಇಂದು ಅವರ ನಿವೃತ್ತಿ ಪ್ರಶ್ನೆಯೂ ಮಂಡಿಸಲಟ್ಟು ತೀರ್ಮಾನವೂ ಸಹ ಬದಲಿಸಿಯಾಗಿದೆ. ಎಲ್ಲವೂ ಒಂದು ವಾರದಲ್ಲಿ ನಾಟಕೀಯವಾಗಿ ಮಾರ್ಪಾಟಾಗಿದೆ ಎಂದು ಹೇಳಬಹುದು.

ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದ ಸಭೆಯನ್ನುದ್ದೇಶಿಸಿ ನೆಹರೂರವರ ಭಾಷಣದ ಪೂರ್ಣ ಪಾಠ ಪ್ರಕಟವಾಗಲಿಲ್ಲ. ಕೆಲವಂಶಗಳು ಮಾತ್ರ ಪ್ರಕಟವಾಗಿದೆ. ನೆಹರೂರವರು ತಮ್ಮ ಭಾಷಣದಲ್ಲಿ ಕಾಂಗ್ರೆಸ್ಸಿನಲ್ಲಿ ಇಂದು ತಲೆದೋರಿರುವ ಬಿಕ್ಕಟ್ಟಿನ ಬಗ್ಗೆ ಪ್ರಸ್ತಾಪಿಸಿದ್ದಾರೆ. ಲಂಚಖೋರುವತ್ತುಗಳು, ಅಧಿಕಾರ ದಾಹ ತುಂಬಿರುವುದನ್ನು ಖಂಡಿಸಿದ್ದಾರೆ. ಜಾತೀಯತೆ ಮತ್ತಿತರ ತೀವ್ರ ವಾದಗಳು ಮನೆಮಾಡಿಕೊಂಡಿವೆ ಎಂದೂ ವ್ಯಕ್ತಗೊಳಿಸಿದ್ದಾರೆ. ಅವರ ಭಾಷಣದಲ್ಲಿನ ಅಂಶವನ್ನು ಪರಿಶೀಲಿಸಿದಲ್ಲಿ ಅಧಿಕಾರದಿಂದ ನಿವೃತ್ತರಾಗುವ ಸೂಚನೆಯು ಕಾಂಗ್ರೆಸ್ಸಿಗರಿಗೆ ಛೀಮಾರಿ ಹಾಕುವುದಕ್ಕಾಗಿ ಎಂದೂ, ಅಥವಾ ಸಂಸ್ಥೆಯಲ್ಲಿ ತಲೆದೋರಿರುವ ಈ ದುರವಸ್ಥೆಯಿಂದಾಗಿ ಮಾಡಿದ ತೀರ್ಮಾನವೆಂದಾಗಲೀ ಹೇಳಬಹುದು. ಈ ಬಗೆಯ ಅಭಿಪ್ರಾಯವನ್ನು ಅನೇಕರು ವ್ಯಕ್ತಗೊಳಿಸಿದ್ದಾರೆ.

ಹಿಂದೆ ಗಾಂಧೀಜಿಯವರು ಕಾಂಗ್ರೆಸ್ ಸಂಸ್ಥೆಯಲ್ಲಿ ಇಂಥ ಹೀನಸ್ಥಿತಿ ಒದಗಿದಾಗ ಉಪವಾಸ ವ್ರತ ಆಚರಿಸಿ, ಎಲ್ಲರಿಗೂ ಛೀಮಾರಿ ಹಾಕಿ ಹತೋಟಿಗೆ ತರಲು ಯತ್ನಿಸುತ್ತಿದ್ದರೆಂದೂ, ಆದರೆ ನೆಹರೂರವರಿಗೆ ಉಪವಾಸ ವ್ರತದಲ್ಲಿ ನಂಬುಗೆ ಇಲ್ಲದಿರುವುದರಿಂದ ಈ ಮಾರ್ಗ ಹುಡುಕಿದ್ದಾರೆಂದೂ ಕೆಲವು ಕಾಂಗ್ರೆಸ್ಸಿಗರೇ ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆ. ಆದರೆ ನೆಹರೂರವರ ಈ ಕ್ರಮ ಎಷ್ಟು ಮಟ್ಟಿಗೆ ಕಾಂಗ್ರೆಸ್ ಸದಸ್ಯರ ಮೇಲೆ ಪರಿಣಾಮ ಮೂಡಿಸೀತು ಎಂಬುದೀಗ ಸಂದೇಹಾಸ್ಪದವಾದ ವಿಷಯ. ಕಳೆದ ಹನ್ನೊಂದು ವರ್ಷಗಳಲ್ಲಿ

(೨ನೇ ಪುಟ ನೋಡಿ)

ಚೀನಾದ ಹೆಸರಾಂತ ಲೇಖಕ ಮಾವೊಟುನ್ ಬರೆದ ಕತೆ

ದೊಡ್ಡ ಜವುಗು ಪ್ರಾಂತ್ಯ

ಕನ್ನಡಕ್ಕೆ:- **ವೆಂಕಟರಾಜ್ ಪಾನಸೆ**

ಒಂದಿಷ್ಟೂ ತಡೆಬಿಡುವುಗಳಿಲ್ಲದೆ ಸಂಪೂರ್ಣ ಒಂದು ವಾರದ ವರೆಗೆ ಚಳಿಗಾಲದ ಮಳೆ ಒಂದೇ ಸಮನೆ ಸುರಿಯುತ್ತಿತ್ತು. ಅದಕ್ಕೂ ಮುಂಚಿನ ರಾತ್ರಿ ಎದ್ದಿದ್ದ ಭಯಂಕರ ಬಿರುಗಾಳಿ ಶಿಬಿರದ ಡೇರೆಗಳನ್ನು ಕಿತ್ತು ಹಾರಿಸಿಕೊಂಡು ಹೋಗುವಷ್ಟು ಜೋರಾಗಿ ಬೀಸಿತ್ತು. ಗಾಳಿ ಕೊಂಚ ಕಡಿಮೆಯಾದಾಗ ಅದರ ಸದ್ದು ದೂರದಲ್ಲೆಲ್ಲೋ ಕೊಳಲಿನಲ್ಲಿಯ ವಿಲಾಪದಂತೆ ಕೇಳುತ್ತಿತ್ತು. ತಾತ್ಕಾಲಿಕವಾಗಿ ನಿಂತಿದ್ದ ಮಳೆ ಮತ್ತೆ ಆರಂಭವಾಗಿ ಸಮರಭೇರಿಯಂತೆ ಸದ್ದುಮಾಡುತ್ತ ಜಡಿದೇ ಜಡಿಯಿತು.

ಮಧ್ಯೆ ಮಧ್ಯೆ ಇನ್ನೂ ಹಲವು ಬಗೆಯ ವಿಚಿತ್ರ ಸದ್ದುಗಳು, ಧ್ವನಿಗಳು ಕೇಳುತ್ತಿದ್ದವು. ಅವುಗಳಲ್ಲಿ ಕೆಲವು ವಿಲಕ್ಷಣವಾಗಿದ್ದರೆ ಇನ್ನು ಕೆಲವು ಘೋರತನವಾಗಿದ್ದವು, ಇನ್ನು ಕೆಲವು ಖಿನ್ನತೆಯಿಂದ ಕೂಡಿದ್ದರೆ ಬೇರೆ ಹಲವು ಕರ್ಣಭೇದಕವಾಗಿದ್ದವು. ಅವೆಲ್ಲ ಮನುಷ್ಯ ಧ್ವನಿಯಂತೆ ಏರಿಳಿತದಿಂದ ಕೂಡಿದ್ದವು. ಈಗ ಎರಡು ಮೂರು ದಿನಗಳ ಹಿಂದೆ ಬೀಸಿದ್ದ ಬಿರುಗಾಳಿಯೊಳಗಿನಿಂದಲೇ ಈ ಧ್ವನಿಗಳು ಕೇಳಿಸಲಾರಂಭಿಸಿದ್ದವು. ನರಿಗಳ ಅಳುವಿಕೆಯೆಂದೂ ಕೆಲವರು ಹೇಳಿದ್ದರು.

ಶಿಬಿರವನ್ನು ಆಗಲೇ ಒಂದು ಎತ್ತರವಾದ ದಿಬ್ಬಕ್ಕೆ ಸ್ಥಳಾಂತರಿಸಲಾಗಿತ್ತು. ಅಲ್ಲಿ ಒಂಭತ್ತುನೂರು ಪಂಜರದ ಸೈನಿಕರು (ನಿರ್ಬಂಧಿತ) ಒಣಭತ್ತದ ಹುಲ್ಲಿನ ಹಾಸಿಗೆಗಳ ಮೇಲೆ ಮಲಗಿಕೊಳ್ಳುವಷ್ಟು ಸ್ಥಳಾವಕಾಶವಿತ್ತು. ದೂರ ಪ್ರದೇಶವೊಂದಕ್ಕೆ ಸಂರಕ್ಷಣಾ ಕಾರ್ಯದ ಮೇಲೆ ಇವರನ್ನು ಸಾಗಿಸಿಕೊಂಡು ಹೊರಟಿದ್ದ ಇಬ್ಬರು ಅಧಿಕಾರಿಗಳು ಇದಕ್ಕೂ ಹೆಚ್ಚಿನ ಸೌಕರ್ಯಗಳನ್ನೇನನ್ನೂ ಅವರಿಗೆ ಒದಗಿಸಿ ಕೊಟ್ಟಿರಲಿಲ್ಲ. ತಾವು ಮಾತ್ರ ಇಡೀ ದಿನವೆಲ್ಲ ಕಂಠಪೂರ್ತಿಯಾಗಿ ಕುಡಿದು ಮತ್ತರಾಗಿ ಹೊರಳಾಡುತ್ತಿದ್ದರು.

ಅಧಿಕಾರಿಗಳೆಂದೂ ಇಷ್ಟು ಜಡವಾಗಿರಲಿಲ್ಲ. ಅವರ ಪೂರ್ವಿಕರು ಧೀರ ದಂಡನಾಯಕರುಗಳಾಗಿ ಈ ನಾಡಿನಲ್ಲಿ ಹತ್ತಾರು ವರುಷಗಳ ವರೆಗೆ ಹಾವಳಿ ನಡೆಸಿ, ಅನೇಕ ಯುದ್ಧಗಳಲ್ಲಿ ಗೆದ್ದು ವೀ, ಹ್ಯಾನ್, ಚೂ, ಮತ್ತು ಚೀ ರಾಜ್ಯಗಳನ್ನೆಲ್ಲ ಸದೆಬಡೆದು ಚಿನ್ ದೊರೆಯ ಪ್ರಭುತ್ವಕ್ಕೊಳಪಡಿಸಿ ಅವನನ್ನು ಪ್ರಥಮ ಸಾಮ್ರಾಟನನ್ನಾಗಿಸಿದ್ದ ಜಂಭ, ಬಡಾಯಿಗಳು ಈ ಅಧಿಕಾರಿಗಳ ಪಾಲಿಗಿದ್ದರೂ ಇವರು ಸ್ವತಃ ಅಂತಹ ದೊಡ್ಡ ಯುದ್ಧಗಳನ್ನೇನು ನಡೆಸಿರಲಿಲ್ಲ, ವಿಜಯಗಳನ್ನೂ ಸಂಪಾದಿಸಿರಲಿಲ್ಲ. ತಮ್ಮ ತಾಯಂದಿರ ಗರ್ಭದಲ್ಲಿದ್ದಾಗ ಮಾತ್ರವೇ ಇವರು ರಣಭೇರಿಯ ಗರ್ಜನೆಯನ್ನು ಕೇಳಿದ್ದರು. ಅವರ ಹಿರಿಮೆಯೆಂದರೆ ದಂಡನಾಯಕರುಗಳ, ಶ್ರೀಮಂತ ವೈಭವದ ಭೂಸ್ವಾಮಿಗಳ ಸಂತತಿಯಾಗಿದ್ದರೆಂಬುದೇ. ಸೈನಿಕರ ಉಡುಪು ತೊಡುಪುಗಳನ್ನು ತೊಟ್ಟು ಶಸ್ತ್ರಾಸ್ತ್ರಗಳನ್ನು ಧರಿಸುವುದೇ ಅವರ ವಿಶೇಷ ವೈಶಿಷ್ಟ್ಯವಾಗಿತ್ತು. ಅವರು ಸಾಗಿಸಿಕೊಂಡು ಹೋಗುತ್ತಿದ್ದ ಜನರೂ ಸಾಮಾನ್ಯವಾಗಿ ಅವರಂತೆಯೇ ಭೂಸ್ವಾಮಿಗಳ ಮಕ್ಕಳಾಗಿರುತ್ತಿದ್ದರು, ತಮ್ಮ ಊರಿನ ಯುವಕರಾಗಿರುತ್ತಿದ್ದರು, ವರ್ಗನಿಷ್ಠೆಯಿಂದ ಒಂದೆಡೆ ಸೇರಿದವರಾಗಿರುತ್ತಿದ್ದರು. ಆದರೆ ಇಂದು ಅವರು ಸಾಗಿಸಿಕೊಂಡು ಹೋಗುತ್ತಿದ್ದ ಜನರು ಕೇವಲ ಪಂಜರದ (ನಿರ್ಬಂಧಿತ) ಸೈನಿಕ [Conscripts] ರಾಗಿದ್ದರು, ಹಿಂದೆಂದೂ ಸೈನಿಕರಾಗಿ ಕೆಲಸ ಮಾಡಲು ಹಕ್ಕಿಲ್ಲದ ತುಚ್ಛ ಗುಲಾಮರಾಗಿದ್ದರು, ತಮ್ಮ ಮೇಲಧಿಕಾರಿಗಳ ವರ್ಗಕ್ಕೆ ನಿಷ್ಠರಾಗಿರದ 'ತುಂಟ ಪೋಲಿ'ಗಳಾಗಿದ್ದರು.

ಹೀಗೆ ಅಪರಿಚಿತವಾದ ಸನ್ನಿವೇಶದಲ್ಲಿ, ಇನ್ನೂ ಸ್ಪಷ್ಟವಾಗಿ ಹೇಳುವದಾದರೆ ತಮ್ಮ ಬಗ್ಗೆ ಹಗೆತನ ತುಂಬಿದ ತಂಡದ ಮಧ್ಯದಲ್ಲಿ, ಧೋ ಧೋ ಎಂದು ಒಂದೇ ಸಮನೆ ಜಡಿಯುತ್ತಿದ್ದ ಚಳಿಗಾಲದ ಪ್ರಚಂಡ ಮಳೆಯಲ್ಲಿ ಆ ಅಧಿಕಾರಿಗಳು ಮಾತ್ರ ನಿಧಾನವಾಗಿ ಕುಡಿಕುಡಿದು ಸುಂದಾಗಿ ಆಲಸ್ಯದಿಂದ ಬಿದ್ದುಕೊಂಡಿರುತ್ತಿದ್ದರು, ಮಂಜಿನಲ್ಲಿ ಮೈಮರೆತು ಬಿದ್ದಿರುವ ಮಣ್ಣಿನ ಕೊತ್ತಿ (ಬೆಕ್ಕು) ಗಳಂತೆ ಹಾಸಿಗೆಯಲ್ಲಿ ಹೊರಳಾಡುತ್ತಿದ್ದರು. ಆದರೆ ಇಲಿಗಳು ಈ ಕೊತ್ತಿ (ಬೆಕ್ಕು) ಗಳಿಗೆ ಇನ್ನು ಬಹುಕಾಲ ಅಂಜುವ ಕಾಲ ಕಳೆದು ಹೋಗಿತ್ತು.

ಅಧಿಕಾರಿಗಳಿಬ್ಬರಿಗೂ ಮಧ್ಯರಾತ್ರಿಯಲ್ಲಿ ಎಚ್ಚರಾದಾಗ ಗಾಳಿಯ ಸಿಳ್ಳು ಕೇಳುತ್ತಿತ್ತು, ಮಳೆಯ ನಗಾರಿಯ ಹೊಡೆತ ಕೇಳುತ್ತಿತ್ತು, ಚಳಿಗಾಲದ ಗಾಳಿಯ ಹಿಮಶೀತ ಅವರ ಮೂಳೆಗಳನ್ನು ಕೊರೆದಂತಾಯಿತು. ಅಗ ಅವರಿಗೆ ತಾವು ಅಂತ್ಯವಿಲ್ಲದ ಮರುಳುಗಾಡಿನ ಉತ್ತರದ ಗಡಿಯ ಠಾಣ್ಯವನ್ನು ತಲುಪಿದಂತೆ ಭಾಸವಾಗಿತ್ತು. ಅವರು ಸೇರಬೇಕಾಗಿದ್ದ ಸ್ಥಳ ಯೂಯಾಂಗ್. ಯೂಯಾಂಗ್—ನಾಲಗೆಯ ಮೇಲೆ ಎಷ್ಟು ಸರಾಗವಾಗಿ ಉರುಳುವ ಶಬ್ದ! ಒಂದಾನೊಂದು ಕಾಲದಲ್ಲಿ ಮಹಾದಂಡನಾಯಕ ಮೆನ್‌ಟೀನ್ ತನ್ನ ಮುನ್ನೂರು ಸಹಸ್ರ ಸೈನಿಕರನ್ನು ಸಾಗಿಸಿಕೊಂಡು ಹೋದುದು ಇದೇ ಯೂಯಾಂಗ್ ಆಗಿರಬಹುದೆ? ಆದರೆ ಆ ಮುನ್ನೂರು ಸಶಸ್ತ್ರ ಸೈನಿಕರೂ ಎಂದೂ ಮರಳಿ ಬರಲಿಲ್ಲವಲ್ಲ, ಅವರ ಮೂಳೆಗಳು ಗೊಬ್ಬರವಾಗಿ ಅಲ್ಲಿನ ಕಾಡಿನ ಹುಲ್ಲನ್ನು ಸಮೃದ್ಧವಾಗಿ ಬೆಳೆಸುತ್ತಿವೆ!

'ಮಾವೊಟುನ್' ಎಂಬುದು ಷೆನ್‌ಯೆನ್-ಪಿಗ್‌ರವರ ಕಾವ್ಯನಾಮ. ಚೀನಾದ ಕ್ರಾಂತಿಕಾರೀ ವಾಸ್ತವವಾದಿ ಲೇಖಕರಲ್ಲಿ ಹಿರಿಯ ಬರೆಹಗಾರ ಮಾವೊಟುನ್ ಸಾಮ್ರಾಜ್ಯವಾದ ಹಾಗೂ ಪಾಳೆಯಗಾರಿಕೆಯ ವಿರುದ್ಧ ಬಂಡು ಹೂಡಿದ ಧೀರಲೇಖಕ. ಚೀನಾದಲ್ಲಿ ಜನತಾರಾಜ್ಯ ಸ್ಥಾಪಿತವಾದ ಬಳಿಕ ಮಾವೊಟುನ್ 1949ರಲ್ಲಿ ಕೇಂದ್ರ ಸರ್ಕಾರದ ಸಾಂಸ್ಕೃತಿಕ ಶಾಖೆಯ ಸಚಿವರಾಗಿ ಚುನಾಯಿಸಲ್ಪಟ್ಟರು.

ಇಲ್ಲಿ ಪ್ರಕಟವಾಗುತ್ತಿರುವ ಅವರ ಕತೆ "Great Marsh District" ಎಂಬುದರ ಸರಳಾನುವಾದವಾಗಿದ್ದು ಪ್ರಾಚೀನ ಚೀನಾದಲ್ಲಿ ನಡೆದ ರೈತರ ಬಂಡಾಯವೊಂದರ ಕಾಲ್ಪನಿಕ ಕತೆ. ಇಂಥ ಕತೆಗಳನ್ನು ಮಾವೊಟುನ್ ತುಂಬಾ ಬರೆದಿದ್ದಾರೆ. ಈ ಕಾಲ್ಪನಿಕ ಕತೆಯನ್ನು ಇಂದಿನ ಚೀನಾಕ್ಕೆ ಹೊಂದಿಸಿ ನೋಡಿದರೆ ಎಷ್ಟು ಸಮಂಜಸವಾಗಿ ತೋರಿತು! ಕತೆಯ ಕೊನೆಯ ವಾಕ್ಯ ಹೇಳುತ್ತದೆ: "ಸಾಮ್ರಾಟ ಸತ್ತಿದ್ದಾನೆ—ಭೂಮಿ ಹಂಚಲ್ಪಡಬೇಕು!" ಚೀನಾದ ವಿಷಯದಲ್ಲಿ ಅತ್ಯಂತ ಸತ್ಯವಾದ ಕತೆ.

ಈ ಕತೆ ತುಂಬ ಕಲಾತ್ಮಕವೂ ಆಗಿದೆ, ಸಾಂಕೇತಿಕವೂ ಆಗಿದೆ. —ಸಂ.

ಅವರ ಕುಪಿತ ವಿಚಾರಗಳೆಲ್ಲ ಮಾಯವಾದುವು. ಕುಡಿದ ಬಳಿಕ ಅವರ ಮೆದುಳಿಗೆ ಎಂಥದೋ ಜಾಡ್ಯ ಅಂಟಿಕೊಂಡಂತಾಗಿ ಕತ್ತಲಾವರಿಸಿದಂತಾಯಿತು. ಅವರ ಆಜ್ಞೆಗಳು ಉತ್ತರ ಗಡಿಯ ಠಾಣ್ಯವನ್ನು ಆನೆಯ ಚಾಂದ್ರ ಮಾಸದ ಕೊನೆಯಲ್ಲಿ ತಲುಪುವವಾಗಿದ್ದವು. ಆಗಲೇ ಆ ತಿಂಗಳೂ ಮುಗಿದಂತಾಗಿತ್ತು, ಅವರು ಆ ದೊಡ್ಡ ಜವುಗು ಪ್ರಾಂತ್ಯವನ್ನು ತಲುಪಬಹುದಾಗಿತ್ತು. ಆದರೆ ಈ ಕೆಟ್ಟ ಮಳೆ ಅವರನ್ನು ತಡೆಹಿಡಿದಿತ್ತು. ಗೊತ್ತುಪಡಿಸಿದ ಅವಧಿಯಲ್ಲಿ ಆಜ್ಞೆಗಳನ್ನು ಜಾರಿಯಲ್ಲಿ ತಾರದವರನ್ನು ಸೈನಿಕ ಕಾನೂನುಗಳು ಕ್ರೂರವಾಗಿ ದಂಡಿಸಿಕೊಂಡಿದ್ದವು.

ಮೊನ್ನೆ ಹಿಡಿಯಲ್ಪಟ್ಟ ಒಂದು ಮೀನಿನ ಹೊಟ್ಟೆಯಲ್ಲಿ ಬಟ್ಟೆಯ ತುಣುಕೊಂದು ದೊರೆಯಿತೆಂಬ ವಿಚಿತ್ರ ಸುದ್ದಿ—ವದಂತಿ—ಹಬ್ಬಿತ್ತು. ಆ ಬಟ್ಟೆಯ ಮೇಲೆ ಇಂಗಳೀಕ ಬಣ್ಣದಲ್ಲಿ ಹೀಗೆ ಮೂರು ಅಕ್ಷರಗಳು ಬರೆಯಲ್ಪಟ್ಟಿದ್ದವು:

"ಚೆನ್‌ಷೆಂಗ್—ಸಾಮ್ರಾಟ!"

ಚೆನ್‌ಷೆಂಗ್? ಆ ಇಬ್ಬರು ಶಿಬಿರಾಧಿಪತಿಗಳಲ್ಲಿ ಒಬ್ಬನ ಹೆಸರೂ ಚೆನ್‌ಷೆಂಗ್ ಎಂದಿತ್ತು. ಆತನೇನೋ ನೋಡೋದಕ್ಕೆ ಎತ್ತರವಾಗಿದ್ದ ದೊಡ್ಡ ಮನುಷ್ಯ. ರೈತಾಪಿ ಜನಗಳಲ್ಲೇ ಅಪರೂಪನಾದ ಚೆಲುವ, ಹೀಗಿದ್ದ ಮಾತ್ರಕ್ಕೆ "ಸಾಮ್ರಾಟ"ನೆನ್ನುವುದು ಹೇಗೆ?

ಹಠಾತ್ತನೆ ಗಾಳಿಯ ಹಾಗೂ ಮಳೆಯ ಸದ್ದುಗಳನ್ನೆಲ್ಲ ಅಡಗಿಸಿ ಬಿಡುವಂಥ ಅತ್ಯಂತ ಪ್ರಬಲವಾದ ಅರಚುವಿಕೆಯೊಂದು ಯಾವುದೋ ಎತ್ತರದ ಮೇಲಿನಿಂದ ಸೀಳಿಕೊಂಡು ಬಂತು. ಮಂದವಾದ ಚಿಮಣಿಯ ಬೆಳಕಿನಲ್ಲಿ ಈ ಅಧಿಕಾರಿಗಳಿಬ್ಬರೂ ಪರಸ್ಪರ ಕಂದಿದ ಮುಖಗಳನ್ನು ನೋಡಿದರು. ಆ ಅರಚುವಿಕೆ ಇವರು ಉಸಿರುಬಿಟ್ಟು ಉಸಿರುತೆಗೆದುಕೊಳ್ಳುವಂತೆ ಮಾಡಿತ್ತು. ಹೃದಯದ ಬಡಿತವನ್ನೇ ನಿಲ್ಲಿಸುವಂತಿತ್ತು. ನಾಳಗಳಲ್ಲಿ ಹರಿಯುವ ನೆತ್ತರನ್ನೇ ಹೆಪ್ಪುಗಟ್ಟಿಸುವಂತಿತ್ತು. ಬಳ್ಳುಗಳು ಪ್ರತಿರಾತ್ರಿಯೂ ಬೊಬ್ಬಿಡುತ್ತಿದ್ದವು, ಆದರೆ ಈ ಬೊಬ್ಬಿಡುವಿಕೆ ಭೂತಬಳ್ಳುವಿನದಾಗಿತ್ತು, ನಿಮ್ಮ ಹೃದಯವನ್ನು ಛಿದ್ರಛಿದ್ರವಾಗಿಸಿದ ಬಳ್ಳುವಾಗಿತ್ತು. ಮೇಲಿಂದ ಮೇಲೆ ಶಪಿಸುತ್ತಿತ್ತು, ಹಲುಬುತ್ತಿತ್ತು, ಹೆದರಿಸುತ್ತಿತ್ತು. ಅದರ ಶಬ್ದಗಳು ಹೀಗೆ ನಿಚ್ಚಳವಾಗಿದ್ದವು:

"ಚೂ ರಾಜ್ಯವನ್ನು ಮತ್ತೆ ಸ್ಥಾಪಿಸಿರಿ!"

"ಚೆನ್‌ಷೆಂಗ್—ನಮ್ಮ ಸಾಮ್ರಾಟ!"

ಭೀತಿಯಿಂದ ತೊದಲುತ್ತಿರುವ ನಾಲಗೆಯಿಂದ ಅಧಿಕಾರಿಗಳು ಈ ಕರೆಗಳನ್ನು ಪುನರುಚ್ಚರಿಸಿದರು. ಕುಡಿತದಿಂದ ಬೆಂಕಿಯಾಗಿದ್ದ ಕಣ್ಣುಗಳಿಂದ ಅವರು—ಸೂರ್ಯನ ಬಿಸಿಲಿನಿಂದ ಬಾಡಿ ಬತ್ತಿ ಕಪ್ಪಗಾಗಿದ್ದ ಬಡರೈತ ಚೆನ್‌ಷೆಂಗ್‌ನ ಮುಖವನ್ನು ಕಲ್ಪಿಸಿ ನೋಡುತ್ತಿದ್ದರು. ಯಾಕೆಂದರೆ ಆತ ತನ್ನ ದೊಡ್ಡದಾದ ದೇಹದಾರ್ಢ್ಯದಿಂದ ಆ ಪಂಜರದ ಸೈನಿಕರಲ್ಲಿ ಶಿಬಿರಾಧಿಪತಿಯಾಗಿ ಆಯಲ್ಪಟ್ಟಿದ್ದ. ಅವನ ದೇಹದಲ್ಲಿ ಉಕ್ಕಿನ ಸ್ನಾಯುಗಳೇ ಇದ್ದರೆ ನಮ್ಮ ಗತಿಯೇನು? ಆದರೆ ಅವನಿಗೆ ಸೈನಿಕ ವಿದ್ಯೆಗಳಂತೂ ಒಂದಿಷ್ಟೂ ಗೊತ್ತಿಲ್ಲ!

ಚೆನ್‌ಷೆಂಗ್‌ನೇನು ಭಾರೀ ಗಂಡಾಂತರಕಾರಿಯೇನಾಗಿರಲಿಲ್ಲ, ಗಂಡಾಂತರವಿದ್ದುದು ಧೋ ಧೋ ಸುರಿಯುತ್ತಿದ್ದ ಮಳೆಯಲ್ಲಿ. ಮಳೆಯು ಅವರ ಮುನ್ನಡೆಯನ್ನು ತಡೆಗಟ್ಟಿತ್ತು. ಅವರ ಸರಬರಾಜುಗಳೆಲ್ಲ ನಿಂತು ಹೋಗಿದ್ದವು. ಇನ್ನೂ ಒಂದು ವಾರ ಮಳೆ ಹತ್ತಿಕೊಂಡರೆ ಸೈನಿಕರೆಲ್ಲ ಹಸಿವಿನಿಂದ ಸತ್ತುಹೋಗುತ್ತಾರೆ. ಆದರೆ ಅದಕ್ಕೂ ಮೊದಲೇ ನಿರ್ಬಂಧಿತ ಸೈನಿಕರು ಹಸಿವು ಮತ್ತು ಕಷ್ಟಗಳಿಂದ ರೊಚ್ಚಿಗೆದ್ದು ಇನ್ನೇನನ್ನಾದರೂ ಮಾಡಲಿಕ್ಕಿಲ್ಲವೆ?

○ ○ ○ ○

ಮಾರನೆಯ ದಿನವೂ ಮಳೆ ಬೀಳುತ್ತಲೇ ಇತ್ತು. ಅಧಿಕಾರಿಗಳಿಬ್ಬರೂ ತಮ್ಮ ಡೇರೆಗಳಿಂದ ಹೊರಬಂದು ದ್ವೇಷದ ಉರಿನೋಟಗಳನ್ನೆದುರಿಸುವ ಸಾಹಸಕ್ಕೆ ಕೈಹಾಕಲು ಸಿದ್ಧರಾಗಿರಲಿಲ್ಲ. ಸೈನಿಕರೆಲ್ಲ ಈಗ ಹಲವಾರು ದಿನಗಳಿಂದ ಕೇವಲ ಮೀನು ಮತ್ತು ಕಾಡಿನ ಮುಳ್ಳು ಹಣ್ಣುಗಳನ್ನೇ ತಿಂದು ಜೀವಿಸುತ್ತಿದ್ದರು. ಇವು ಅವರ ಹೊಟ್ಟೆಗೆ 'ಭರತಿ' ಮಾತ್ರವೇ ಆಗುತ್ತಿದ್ದರೂ ಅದರ ಪರಿಣಾಮ ಮಾತ್ರ ಬೇರೆಯಾಗಿತ್ತು. ಈ ಆಹಾರದಿಂದ ಅವರು ಮುಂಗೋಪಿಗಳೂ, ಸಾರ್ಥಿಗಳೂ ಆಗುತ್ತಿರುವಂತೆ ಕಾಣುತ್ತಿತ್ತು. ಪಂಜರದ ಸೈನಿಕರು ಇನ್ನು ಮೇಲೆಯೂ ಬಹುಕಾಲ ವಿಧೇಯರಾಗಲಿ, 'ಜೀ ಹುಜೂರ್' ಎನ್ನುವ ದಾಸರಾಗಲಿ ಆಗಿರುವಂತ ಕಾಣುತ್ತಿರಲಿಲ್ಲ. ಅವರಲ್ಲಿ ದ್ವೇಷ-ಕೋಪಗಳು ಧಗಧಗಿಸುತ್ತಿದ್ದವು ಅದರಿಂದ ಅವರು ದೂರುಗಳನ್ನು ಒಂದೇ ಸಮನೆ ಕಾರಿಕೊಳ್ಳುತ್ತಿದ್ದರು.

"ನಾವೇನು ಮಾಡೋಣ ಈಗ? ನಮಗೆ ಇನ್ನು ಮುಂದೆ ನಡೆಯಲಿಕ್ಕಾಗದು. ಆದರೆ ಇಲ್ಲೇ ಉಳಿದರೆ ಮುಳುಗಿ ಸತ್ತುಹೋಗುತ್ತೇವೆ".

"ನಾವು ಇನ್ನೇನು ಇಲ್ಲದೆ ಬರೀ ಮೀನುಗಳನ್ನೇ ತಿನ್ನುತ್ತಾ ಹೋದರೆ ಕಾಹಿಲೆಯಿಂದ ಹಾಸಿಗೆ ಹಿಡಿಯುತ್ತೇವೆ".

"ಉರುವಲೆಲ್ಲ ಮುಗಿದು ಹೋಗಿದೆ. ಇಂದು ಬೆಚ್ಚಗಾಗಿರಲು ನಮ್ಮ ಹುಲ್ಲು ಹಾಸಿಗೆಗಳನ್ನೇ ಸುಡಬೇಕು. ಆದರೆ ನಾಳೆ ಅನ್ನ ಕುಚೋಳೋದು ಹೇಗೆ? ಹಸಿ ಮೀನುಗಳನ್ನೇ ತಿನ್ನೋಣವೆ? ಆದರೆ ನಾವು ನೀರುನಾಯಿಗಳಲ್ಲವಲ್ಲ!"

"ಯೂಯಾಂಗ್ ಇಲ್ಲಿಂದ ಸಹಸ್ರ ಮೈಲಿ ದೂರವಿದೆ ಎಂದು ಹೇಳುತ್ತಾರೆ."

"ನಾವು ಅಲ್ಲಿಗೆ ತಲುಪುವದರೊಳಗಾಗಿಯೇ ಹೇಗೋ ಸಾಯುತ್ತೇವೆ!"

ಅವರ ಕಣ್ಣುಗಳು ಸಾವಿನ ಭೀತಿಯಿಂದ ದೊಡ್ಡವಾಗಿದ್ದವು. ಯೂಯಾಂಗ್‌ನಲ್ಲೇಕೆ ಅವರು ಸಾಯಬೇಕು? ಯಾಕೆಂದರೆ ಸೈನಿಕ ಆಜ್ಞೆಗಳನ್ನೆಲ್ಲ ಉಲ್ಲಂಘಿಸಿದವರಿಗೆ ಸೈನಿಕ ಕಾನೂನು ಈ ಶಿಕ್ಷೆಯನ್ನು ವಿಧಿಸಿದೆ. ಕಾನೂನು ಮಾಡುವುದು ಅವರ ಕೆಲಸವೇನಾಗಿರಲಿಲ್ಲ ತಾನೆ? ಆದರೆ ಅವರು ಸಾಯಬೇಕಾಗಿತು ಅಷ್ಟೆ! ಅಂಥ ಕಾನೂನು ಇಲ್ಲದಿದ್ದರೂ, ಇಲ್ಲವೆಂದಿಟ್ಟುಕೊಂಡರೂ ಅವರು ಯೂಯಾಂಗಿಗೆ ಹೋಗಿ ಅಲ್ಲಿಯ ಹೀಯುಂಗ್ ನೂ ಕಾಡು ಜನರನ್ನು ಸದೆಬಡೆದು ಸೋಲಿಸಿ ಅವರು ಸಂಪಾದಿಸುವದಾದರೂ ಏನನ್ನು? ಈ ಪಂಜರದ ಸೈನಿಕರು ಕೂಡ ಚಿನ್ ರಾಜ್ಯದವರು ಗೆದ್ದುಕೊಂಡು ಆಡಳಿತ ನಡೆಸಿದ ಆರು ರಾಜ್ಯಗಳಲ್ಲಿದ್ದ ಮೂಲ ರೈತ ಕುಲದವರೇ. ಅವರ ಭೂಮಿಗಳು ಅವರಿಗೇನನ್ನು ಕೊಡದಿದ್ದರೂ ಯಥೇಚ್ಛವಾಗಿ ಯುದ್ಧ—ರಕ್ತಪಾತಗಳನ್ನು ಕೊಟ್ಟಿವೆ, ಜುಲುಮೀ ದುಡಿಮೆಯನ್ನು ಧಾರಾಳವಾಗಿ ಕೊಟ್ಟಿವೆ. "ಸ್ವತಂತ್ರ ನಾಗರಿಕ"ರಿಗಿರುವ ದಯಾಳುತನವನ್ನು (ಸರ್ಕಾರ) ಒಂದಿಷ್ಟೂ ಅವರಿಗೆ ತೋರಿಸಿಲ್ಲ (ಕೊಟ್ಟಿಲ್ಲ). ಚಿನ್ ಸೈನ್ಯಪಡೆಗಳು ಧಾಳಿ ನಡೆಸಿದಾಗ ತಾವು ತಮ್ಮ ನಾಡಿಗಾಗಿ ಯುದ್ಧ ಮಾಡಲಿಲ್ಲವೆಂದು ಆಮೇಲೆ ಅವರು ತುಂಬಾ ಪಶ್ಚಾತ್ತಾಪಪಟ್ಟರು. ಅವರೀಗ ಜೀತದ ಸೈನಿಕರು, ಶ್ರೀಮಂತ ಭೂಸ್ವಾಮಿಗಳಿಗಾಗಿ ಕೊಳ್ಳೆಹೊಡೆಯಲು ಹೊರಟಿರುವ ಸೈನಿಕರು, ಬಲಶಾಲಿಯಾದ ಚಿನ್ ರಾಜ್ಯದ "ಸ್ವತಂತ್ರ ನಾಗರಿಕರು", ತಮ್ಮ ಅಧಿಕಾರಿಗಳಂತೆ ಶ್ರೀಮಂತ ಭೂಸ್ವಾಮಿಗಳಿಗಾಗಿ ಸುಲಿಗೆ ನಡೆಸಲು ಸ್ವತಂತ್ರ ನಾಗರಿಕರನ್ನು ಸಂರಕ್ಷಿಸಲು ಅವರು ಯೂಯಾಂಗಿಗೆ ಹೋಗುತ್ತಿಲ್ಲವೆ? ಹುಲ್ಲುಗಾವಲುಗಳನ್ನು ಹುಡುಕಿಕೊಂಡು ದಕ್ಷಿಣದ ಕಡೆಗೆ ಹೊರಡುವ ಸಂಚಾರಿ ಹೀಯುಂಗ್ ನೂ ಜನರೊಡನೆ ಕದನವಾಡಲು, ಅವರನ್ನು ಕಡಿದು ತುಂಡುಮಾಡಲು, ತಮ್ಮ ಬಡಜನರ ಮೂಳೆಗಳನ್ನು ಮುರಿದು ಹಾಕಲು ಮತ್ತು ಅವರ

ನಗರ ಸಭೆಗಳ ಆಡಳಿತೆ ಕೆಡಲು ಕಾರಣವೇನು? ಅಧಿಕಾರಿಗಳ ಆಲಸ್ಯ, ಸದಸ್ಯರ ಕೈವಾಡ

ಪ್ರಜಾಪ್ರಭುತ್ವ ರಾಜ್ಯದಲ್ಲಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಬಹಳ ಮಹತ್ವವಿದೆ. ಸ್ವರಾಜ್ಯ ಸಿಕ್ಕಿ ಹತ್ತು ವರ್ಷಗಳಾದರೂ ಮುನಿಸಿಪಾಲಿಟಿ, ಗ್ರಾಮ ಪಂಚಾಯಿತಿ ಮೊದಲಾದ ನಾಗರಿಕ ಸಂಸ್ಥೆಗಳ ಆಡಳಿತೆ ಸುಧಾರಿಸಲ್ಪಡಲಿಲ್ಲ. ಯೋಗ್ಯ ಸದಸ್ಯರನ್ನು ಆರಿಸಿ ಕಳುಹಿಸದಿರುವ ನಾಗರಿಕರೂ, ಅದರಂತೆಯೇ ಸಾರ್ವಜನಿಕ ಹಣ ಅಪವ್ಯಯ ಮಾಡುವ ಅಧಿಕಾರಿಗಳ ಮೇಲೆ ಯೋಗ್ಯ ಕ್ರಮ ಕೈಗೊಳ್ಳದಿರುವ ಸರಕಾರವೂ, ಸ್ಥಾನಿಕ ಸಂಸ್ಥೆಗಳ ಪರಿಸ್ಥಿತಿ ಹದಗೆಡಲು ಮುಖ್ಯ ಕಾರಣ.

ನಗರ ಸಭೆಗಳಲ್ಲಿರುವ ಕುಂದುಕೊರತೆ, ದೈನಂದಿನ ಆಡಳಿತೆಯಲ್ಲಿ ಸದಸ್ಯರ ಕೈವಾಡ, ಬೇಜವಾಬ್ದಾರಿ ಅಧಿಕಾರಿಗಳಿಂದ ಆಡಳಿತೆಯ ಮೇಲಾಗುತ್ತಿರುವ ಪರಿಣಾಮ, ಹಣದ ಅಪವ್ಯಯ ಮೊದಲಾದ ಹಲವಾರು ವಿಷಯಗಳ ಕುರಿತು, ತನ್ನ ಒಂದು ವರ್ಷದ ಅನುಭವದ ಮೇಲಿಂದ ಬಿಜಾಪುರದ ನಗರ ಸಭೆಯ ಅಧ್ಯಕ್ಷರಾದ ಶ್ರೀಮತಿ ಸುಶೀಲ ಬಾಯಿ ಕೊಡಕಲ ಇವರು ಒಂದು ವರದಿಯನ್ನು ಅರ್ಪಿಸಿದ್ದು, ಇದು ಕರ್ನಾಟಕದ ಎಲ್ಲಾ ಮುನಿಸಿಪಾಲಿಟಿಗಳಿಗೂ ಮಾರ್ಗದರ್ಶಕವಾಗುವುದರಲ್ಲಿ ಸಂಶಯವಿಲ್ಲ.

ಶ್ರೀಮತಿ ಸುಶೀಲಾ ಬಾಯಿ ಕೊಡೆಕಲ ಇವರು ತಮ್ಮ ವರದಿಯಲ್ಲಿ ತಾನು ಅಧಿಕಾರ ವಹಿಸಿದಾಗ 90 ಸಾವಿರ ರೂಪಾಯಿ ಶಿಲ್ಕು ಇತ್ತೆಂದೂ, ಆದರೆ ಒಂದೂವರೆ ಲಕ್ಷ ರೂಪಾಯಿಯ ಬಿಲ್ಲುಗಳು ಬಾಕಿ ಉಳಿದಿದ್ದವೆಂದೂ, ಈಗ ತಾನು ಚಾರ್ಜು ಕೊಡುತ್ತಿರುವಾಗ, ಎಲ್ಲಾ ಬಿಲ್ಲುಗಳನ್ನು ಕೊಟ್ಟಿರುವರಲ್ಲದೆ, ಮುನಿಸಿಪಾಲಿಟಿಗೆ ಎರಡೂವರೆ ಲಕ್ಷ ರೂಪಾಯಿ ಉಳಿತಾಯ ಮಾಡಿ ತೋರಿಸಿರುವುದಾಗಿ ಹೇಳಿರುವರು.

ವೇಳೆಗೆ ಸರಿಯಾಗಿ ಬಿಲ್ಲುಗಳನ್ನು ಕೊಡುವ ಪದ್ಧತಿಯೇ ಮುನಿಸಿಪಾಲಿಟಿಯಲ್ಲಿಲ್ಲ. ಎಷ್ಟೋ ಸಲ ಬಿಲ್ಲುಗಳು ಕಳೆದು ಹೋಗಿರುತ್ತವೆ. ಮುನಿಸಿಪಾಲಿಟಿಗೆ ಸಾಮಾನು ಒದಗಿಸಿಕೊಟ್ಟವರೂ ಮತ್ತು ನಗರ ಸಭೆಯ ಸದಸ್ಯರೂ, ಬಿಲ್ಲುಗಳನ್ನೂ ಇತರ ಕಾಗದ ಪತ್ರಗಳನ್ನೂ ತೆಗೆದುಕೊಂಡು ಮುನಿಸಿಪಾಲಿಟಿಯ ಆವಾರದಲ್ಲಿ ಅಡ್ಡಾಡುತ್ತಿರು ದೃಶ್ಯ ನೋಡುವಂಥಾದ್ದಿರುತ್ತದೆ. ಸದಸ್ಯರು ಕೈಹಾಕದೇ ಯಾವ ಬಿಲ್ಲುಗಳಾಗಲೀ ಕೊಡಲ್ಪಡುವುದು ಅತಿ ವಿರಳ. ವ್ಯಾಪಾರಸ್ಥರಾಗಲೀ, ಕಂಟ್ರಾಕ್ಟರರಾಗಲೀ, ಮೆಂಬರರ ಬೆನ್ನು ಹತ್ತಬೇಕು, ಮೆಂಬರರು ನೌಕರದಾರರ ಬೆನ್ನು ಹತ್ತಿದರೇನೇ ಬಿಲ್ಲುಗಳು ಸರಿಯಾಗಿ ಕೊಡಲ್ಪಡುತ್ತಿದೆ. ಕಚೇರಿಯಲ್ಲಿ ಇಂಥ ಪರಿಸ್ಥಿತಿ ಉಂಟಾಗಲಿಕ್ಕೆ ಮುನಿಸಿಪಲ ಅಧಿಕಾರಿಗಳೇ ಮುಖ್ಯ ಕಾರಣ. ಪ್ರತಿಯೊಂದು ಶಾಖೆಯವರು ಸರಿಯಾಗಿ ಕೆಲಸ ಮಾಡುತ್ತಿರುವರೋ ಇಲ್ಲವೋ ಎಂಬುದನ್ನು ಚೀಫ್ ಆಫೀಸರರು ದಕ್ಷತೆಯಿಂದ ನೋಡುವುದಿಲ್ಲ, ನೌಕರರದಾರರ ಮೇಲೆ ಚೀಫ್ ಆಫೀಸರರ ಹಿಡಿತ ಇಲ್ಲದಿರುವುದೇ ಇದಕ್ಕೆ ಮುಖ್ಯ ಕಾರಣ.

ಯಾವುದೇ ಕೆಲಸವಿರಲಿ ಕಂಟ್ರಾಕ್ಟರರಿಗೆ ಮುಂಗಡ ಹಣ ಕೊಡುವ ಪದ್ಧತಿ ನಿಲ್ಲಿಸಲ್ಪಡಬೇಕು. ಇಂಥ ಪದ್ಧತಿಯನ್ನು ತಡೆಹಿಡಿಯಬೇಕೆಂದು ಸರಾಸರಿ ಲೆಕ್ಕ— ತಪಾಸಣೆ ಅಧಿಕಾರಿಗಳು ಮೇಲಿಂದ ಮೇಲೆ ಹೇರುತ್ತಿದ್ದರೂ, ಸದಸ್ಯರು ಮತ್ತು ಕೆಲವು ಅಧಿಕಾರಿಗಳ ಕೈವಾಡದಿಂದ ಕಂಟ್ರಾಕ್ಟರರಿಗೆ ಸಾವಿರಾರು ರೂಪಾಯಿ ಮುಂಗಡ ಹಣ ಕೊಡಲ್ಪಡುತ್ತಿದೆ. ಇದು ಲಂಚಗುಳಿತನಕ್ಕೆ ಮೂಲ ಕಾರಣವಾಗಿದೆ.

ಸರಕಾರಿ ಲೆಕ್ಕ ತಪಾಸಣೆ ಅಧಿಕಾರಿಗಳ ವಾರ್ಷಿಕ ತಕ್ರಾರು ವರದಿಗೆ ಕಳೆದ ಹತ್ತು ವರ್ಷಗಳಿಂದಲೂ ಯಾವುದೇ ಉತ್ತರವನ್ನು ಮುನಿಸಿಪಾಲಿಟಿಯವರು ಕಳುಹಿಸಿಕೊಟ್ಟಿರಲಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ತಮ್ಮ ತಪ್ಪು ತಡೆಗಳನ್ನು ಮುಚ್ಚಿಕೊಳ್ಳುವುದರ ಸಲುವಾಗಿ ಈ ರೀತಿ ವರ್ತಿಸುತ್ತಿರಲು ಸರಕಾರದವರು ಇದರ ಮೇಲೆ ಯೋಗ್ಯ ಕ್ರಮ ಕೈಗೊಳ್ಳದಿರುವುದರಿಂದ, ತಪ್ಪು-ತಡೆಗಳಿಗೆ ಮತ್ತು ದುರಾಚಾರಗಳಿಗೆ ಹಾಗೂ ಅಪವ್ಯಯಗಳಿಗೆ ಸರಕಾರದವರೇ ಪ್ರೋತ್ಸಾಹ ಕೊಡುವಂತಾಗಿದೆ. ಸರಕಾರದವರು ಯೋಗ್ಯ ವೇಳೆಯಲ್ಲಿ ಕೆಲವರ ಮೇಲಾದರೂ ಸರಿಯಾದ ಕ್ರಮ ತೆಗೆದುಕೊಂಡಿದ್ದರೆ, ನಗರ ಸಭೆಗಳಲ್ಲಿ ಈಗ ನಡೆಯುತ್ತಿರುವ ಹಣದ ದುರ್ವ್ಯಯ ಮತ್ತು ಅಧಿಕಾರದ ದುರುಪಯೋಗ ಸ್ವಲ್ಪ ಮಟ್ಟಿಗಾದರೂ ಕಡಿಮೆಯಾಗುತ್ತಿತ್ತು.

ನಗರ ಸಭೆಯಲ್ಲಿ ಸದಸ್ಯರೊಳಗಿನ ಜಗಳದಿಂದಾಗಿ, ವಾರ್ಷಿಕ ಆಯ—ವ್ಯಯ ಪತ್ರಿಕೆ ಮಾರ್ಚ್ ತಿಂಗಳಲ್ಲಿ ಮಂಜೂರಾಗುವುದೇ ಇಲ್ಲ. ಪಾರ್ಟಿ ರಾಜಕಾರಣದಿಂದಾಗಿ ಇದನ್ನು ಮುಂದಕ್ಕೆ ಹಾಕುತ್ತಾ ಹೋಗುತ್ತಾರೆ; ಯಾಕಂದರೆ ಕೆಲಸಗಳಾಗಬಾರದು ಎಂಬ ದುರುದ್ದೇಶದಿಂದ. ಕಳೆದ 6 ತಿಂಗಳುಗಳಿಂದ ನೂರಾರು ಮುಖ್ಯ ವಿಷಯಗಳು ಸಭೆಯ ಮುಂದಿದ್ದರೂ, ಪಾರ್ಟಿ ಜಗಳದಿಂದಾಗಿ ಎಲ್ಲಾ ವಿಷಯಗಳು ಮುಂದುವರಿಸಲ್ಪಡುತ್ತಿವೆ. ಸದಸ್ಯರ ಈ ಧೋರಣೆ ಆಡಳಿತೆಯ ಹಿತದೃಷ್ಟಿಯಿಂದ ಘಾತಕಪ್ರಾಯವಾಗಿದೆ.

ಅಧ್ಯಕ್ಷರು ಕಾಯಿದೆ ಬದ್ಧ ರೀತಿಯಲ್ಲಿ ಆಡಳಿತೆ ನಡೆಸಿಕೊಂಡುಹೋದರೆ, ಕೆಲವು ಸದಸ್ಯರ ಮನಸ್ಸಿಗೆ ಬರುವುದಿಲ್ಲ. ಅಧ್ಯಕ್ಷರ ವಿರುದ್ಧ ಕೆಲವು ಅಧಿಕಾರಿಗಳನ್ನು ಎತ್ತಿಹಿಡಿದು, ಸಾರ್ವಜನಿಕ ಕೆಲಸಗಳ ಮೇಲೆ ತಡೆಯಾಜ್ಞೆ ಹೊರಡಿಸುವಂಥಾ ಹೀನ ಕೆಲಸಗಳನ್ನೂ ಮಾಡುತ್ತಿರುವರು. ಇದರಿಂದ ಆಡಳಿತೆಯಲ್ಲಿ ಶಿಥಿಲತೆ ಉಂಟಾಗುತ್ತದೆಂಬುದರ ಕಡೆ ಸದಸ್ಯರ ಲಕ್ಷ್ಯ ಹೋಗುವುದಿಲ್ಲ.

ಮುನಿಸಿಪಾಲಿಟಿಯಲ್ಲಿ ಪಿ. ಡಬ್ಲ್ಯು. ಡಿ. ಖಾತೆ ಅತಿ ಹೀನಾವಸ್ಥೆಯಲ್ಲಿದೆ, ಓವರಸೀಯರರೇ ಆಗಲೀ ಇಂಜಿನಿಯರರೇ ಆಗಲೀ ಅನುಭವಸ್ಥರಿಲ್ಲ. ಈ ಖಾತೆಯಲ್ಲಿ ಯೋಗ್ಯ ರಿಜಿಸ್ಟರ ಇಡುವ ಪದ್ಧತಿಯಿಲ್ಲ. ಈ ಖಾತೆಯಲ್ಲಿದ್ದಷ್ಟು ಅಂದಾದುಂದಿ ಬೇರೆ ಯಾವ ಖಾತೆಯಲ್ಲಿಯೂ ಇಲ್ಲ. ಈ ಖಾತೆಯಲ್ಲಿ ಮುನಿಸಿಪಾಲಿಟಿಯ ಹಣವೆಲ್ಲ ನೀರಿನಂತೆ ಹಾಳಾಗುತ್ತಿದೆ. ನೌಕರರ ಮೇಲೆ ಹಿಡಿತವಿರುವ ಜವಾಬ್ದಾರಿ ಇಂಜಿನಿಯರಿಲ್ಲದಿದ್ದರೆ, ಈ ಖಾತೆ ಸುಧಾರಿಸಲಿಕ್ಕೆ ಸಾಧ್ಯವಿಲ್ಲ.

ಲಂಚಗುಳಿತನಕ್ಕೆ ರಹದಾರಿಯಂತಿರುವ ಟೆಂಡರ ಕರೆಯುವ ಪದ್ಧತಿ ಈ ನಗರ ಸಭೆಗಳಲ್ಲಿ ಅತಿ ವಿಚಿತ್ರವಾಗಿದೆ. ತಮಗೆ ಬೇಕಾದಂತ ವ್ಯಾಪಾರಸ್ಥರಿಗೆ ಅನುಕೂಲವಾಗುವಂತೆ ಟೆಂಡರ ಕರೆಯಲಾಗುತ್ತಿದೆ ಮತ್ತು ಟೆಂಡರ ಕರೆದ ಬಳಿಕ ಕೂಡ ತಮ್ಮವರೆನ್ನುವವರಿಗೆ ತಾರೀಕು ಮತ್ತು ರೇಟು ಬದಲಾವಣೆ ಮಾಡಲಿಕ್ಕೆ ಅನುಕೂಲತೆ ಮಾಡಿ ಕೊಡಲಾಗುತ್ತಿದೆ. ಮೋಟರ ಸ್ಟೋರ ಖಾತೆಯಲ್ಲಿ ಯೋಗ್ಯ ರಿಜಿಸ್ಟರ ಇಲ್ಲ ಸಾಮಾನುಗಳ ಯಾದಿಯಿಲ್ಲ. ಈ ಖಾತೆಯಲ್ಲಿ ಸಾಮಾನುಗಳ ದುರುಪಯೋಗವಾಗುತ್ತಿದೆ. ಚೀಫ ಆಫೀಸರರು ಇದರ ಮೇಲೆ ಯೋಗ್ಯ ತಪಾಸಣೆ ಇಡುವುದಿಲ್ಲ.

([illegible]ನೇ ಪುಟ ನೋಡಿ)

ನೋ ನಿಜವೇ. ಆದರೆ ಆ ಜನರು ಈಗ ಬಾಯಿಗಳನ್ನು ಉಪಯೋಗಿಸುವ ಬದಲು ತಮ್ಮ ಕಣ್ಣುಗಳನ್ನು ಉಪಯೋಗಿಸಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದರು. ಆದರೆ ಏನೇ ಆಗಲಿ ಅವರು ತಮ್ಮ ಕಣ್ಣುಗಳಿಂದ ಕೂಡ ಆ ಅಧಿಕಾರಿಗಳಿಗೆ "ಸಲಾಂ" ಹೊಡೆಯಲಿಲ್ಲ. ಅವರ ನೋಟದಲ್ಲಿ ಅಣಕ ತುಂಬಿತ್ತು, ದ್ವೇಷ ಉಕ್ಕುತ್ತಿತ್ತು. "ಈಗೇನು ಮಾಡುತ್ತೀರಿ? ಇದಕ್ಕೇನು ಮಾಡುತ್ತೀರಿ?" ಎಂದು ಪ್ರಶ್ನಿಸುವಂತಿದ್ದವು ಅವರ ಕಣ್ಣುಗಳು ಅಧಿಕಾರಿಗಳಿಬ್ಬರೂ ಅವರ ದೂರುಗಳನ್ನೂ ಮನವಿಗಳನ್ನೂ ಕೇಳಿಕೊಳ್ಳಲು ಸಿದ್ಧರಾಗಿದ್ದರು. ಅವರಿಂದ ವಿಭಾಗವಾಗಿರುವುದನ್ನು ಕೊನೆಗಾಣಿಸಲು ಅವರ "ಸೊಕ್ಕನ್ನು" ಕೂಡ ಸ್ವಾಗತಿಸಲು ಸಿದ್ಧರಾಗಿದ್ದರು. ಆದರೆ ಅಲ್ಲಿ ಅವರಿಗೆ ದೊರೆತು ಸ್ವಾಗತ ಮೂಕವಾಗಿತ್ತು. ಇದರಿಂದಾಗಿ ಅಧಿಕಾರಿಗಳಿಗೆ ತಾವು ಅವರಿಂದ ಇನ್ನೂ ದೂರಿರುವಂತೆ ಭಾಸವಾಯಿತು. ವಿದೇಶವೊಂದರಲ್ಲಿದ್ದಂತೆ, ವೈರಿ ಶಿಬಿರದಲ್ಲಿ ಸಿಕ್ಕಿ ಹಾಕಿಕೊಂಡಂತೆ, ದ್ವೇಷದಿಂದ ಕೆಂಡ ಕಾರುತ್ತಿರುವ ಕಣ್ಣುಗಳ ಕಾಡಿನಲ್ಲಿ ದಾರಿ ತಪ್ಪಿರುವಂತೆ ಅವರಿಗೆ ಭಾಸವಾಯಿತು. ತಿರುಗಣಿ ಮಡುಗಳು ತುಂಬಿದ **ವೇತನದಿಯಿಂದ** ಅಧಿಕಾರಿಗಳು ಈ ಜನರಿಂದ ಪ್ರತ್ಯೇಕಿಸಲ್ಪಟ್ಟಿದ್ದರು. ಆದರೆ ಇದು ದ್ವೇಷದ ಪೀತನದಿಯಾಗಿತ್ತು. ಸಾಮಾನ್ಯವಾಗಿ ಅವರಿಗೂ ಇವರಿಗೂ ಎಂತಹ ಸಾಮಾನ್ಯ ಸಂಬಂಧವೂ ಇರಲಿಲ್ಲ. ಪಂಜರದ ಸೈನಿಕರು ತುಂಬಾ ಯಾತನೆಗಳಿಗೊಳಗಾಗಿದ್ದರು, ಅವರಿಗೆ ಹಲವು ಆವಶ್ಯಕತೆಗಳಿದ್ದವು ಹಲವು ಸಾಮಾನು ಸಲಕರಣೆಗಳು ಬೇಕಾಗಿದ್ದವು, ಆದರೆ ಈ ಅಧಿಕಾರಿಗಳ ಮುಂದೆ ಧ್ವನಿ ಎತ್ತಲು ಅವರು ಶಕ್ತರಾಗಿರಲಿಲ್ಲ.

ಕೊನೆಗೆ ಈ ಅಧಿಕಾರಿಗಳು ಡೇರೆಯ ಹೊರಗಡೆಯಿದ್ದ ಚಿಕ್ಕ ಮಣ್ಣಿನ ದಿಬ್ಬದ ಮೇಲೆ ಹತ್ತಿಕೊಂಡು ಪರಿಶೀಲನೆಯನ್ನಾರಂಭಿಸಿದರು.

([illegible]ನೇ ಪುಟ ನೋಡಿ)

ವಿಯೆಟ್‌ನಾಂ ಅಧ್ಯಕ್ಷ ಹೋಚಿಮಿನ್ಹ್‌ರವರ ಕವಿತೆಯ ಸರಳಾನುವಾದ

ವಿಜಯದೊಸಗೆ

ಬೆಳದಿಂಗಳು ಸುಳಿದು ಬರುತಿದೆ
ಕವನವಂ ಬೇಡುತಲಿ ಕಿಟಕಿಯಿಂದ।
ಕಾಳಗದ ತಜ್ಞವೆನ್ನ ಕೈಯನು ಬಿಡದು
ಕವಿತೆಯನ್ನಾನೀಗ ಬರೆಯಲಾರೆ।
ಪರ್ವತದ ಮಂದಿರದ ಗಂಟೆ ಗಣಗಣವು
ವಿಜಯವಾರ್ತೆಯನಿದೋ ಗಡಿನಾಡಿನಿಂದ
ತಂದೆನ್ನ ಸೆಳೆಯುತಿದೆ ಕನಸಿನಿಂದ॥

ನಾನೋದುತಿರುವಾಗ ಬೆಟ್ಟವಕ್ಕಿಗಳು
ನೋಡುತಿವೆ ನನ್ನನ್ನು ಸೂರಿನಿಂದ।
ಕುಸುಮಗಳ ನೆರಳೀಗ ಬೀಳುತಿದೆ ಕೆಳಗೆ
ಮಸಿಯ ಹಲಗೆಯಮೇಲೆ; ದೂರದಿಂದ
ಬಂದಿಹುದು ಜಯದೊಸಗೆ
ಬೇಸತ್ತು ಮರಳಿರುವ ತುರಗ ತುಂಡ।
ಸ್ಮರಣೆ ನಿಮ್ಮದು ಬಂದು
ಬರೆಯುತಿಹೆನೀಕವನ ಕಳುಹಲೆಂದು.

ವಿಶ್ರಾಂತಿ ಬರುತಿಹುದು ಸೇನೆ ವ್ಯವಹಾರಗಳ
ಕಾಯಕದ ತರುವಾಯ; ಬೀಸುತಿದೆ ಮಳೆಗಾಳಿ
ಚಳಿಯೊಡನೆ ಬಂದಿಹುದು ಶರತ್ಕಾಲ!
ಕೇಳಿಸುವುದಾಗಾದೆ ಗುಟ್ಟ ಬೆಟ್ಟಗಳಿಂದ ಕೊಳಲನಾದ
ತುಂಡು ಕಾಳಗ ಯೋಧರದೋ ಮರಳಿಬಂದಿಹರು
ವಧುವವರಿಗುಳಿದಿಹುದು ಸಾಕೆನ್ನುವಷ್ಟು
ನನಗದುವೆ ಸಂತಸವು.

ಹುಣ್ಣಿಮೆಯ ಚಂದಿರನು ಮೊದಲ ತಿಂಗಳಿನವನು
ಮೇಣ್ ಬಾನೆಡೆಗೆ ಸಾಗುತಿಹ ದೂರದಾ ನದಿಯು
ಕವಿದ ಕಾವಳದೊಳಗೆ ನಾವು ತರ್ಕಿಪೆವು
ಸಮರಕಾರ್ಯದ ನಮ್ಮ ಮುನ್ನಡೆಯನು;
ದೋಣಿಯೆಲ್ಲವು ತುಂಬಿ ತುಳುಕುತಿಹುದು
ಚಂದಿರನ ಬೆಳದಿಂಗಳ ಬೆಳಕಿನಿಂದ.

—ಶರತ್ಕಾಲ, ೧೯೫೦.
ಅನು: **ವಾಸುದೇವ**

ಮೇ ದಿನಾಚರಣೆ

ಬೆಂಗಳೂರು—

ವಿಶ್ವದಾದ್ಯಂತ ಆಚರಿಸಲಾದ ಮೇ ದಿನಾಚರಣೆಯನ್ನು ಬೆಂಗಳೂರಿನ ಕಾರ್ಮಿಕ ಸಂಘಗಳು ಮೆರವಣಿಗೆ ಮತ್ತು ಸಭೆಗಳನ್ನು ಏರ್ಪಡಿಸುವುದರ ಮೂಲಕ ನೆರವೇರಿಸಿದುವು. (ಪ್ರಥಮ ಬಾರಿಗೆ) ವಿವಿಧ ಸಂಘಗಳವರು ಒಂದುಗೂಡಿ ಈ ಭಾರಿ ಮೇ ದಿನಾಚರಣೆಯನ್ನಾಚರಿಸಿದ್ದು ಮಹತ್ವದ ವಿಷಯವಾಗಿದೆ.

ಮೇ ದಿನಾಚರಣೆ ಸಮಿತಿಯ ಆಶ್ರಯದಲ್ಲಿ ಎ.ಐ.ಟಿ.ಯು.ಸಿ. ಗೆ ಸೇರಿರುವ ಕಾರ್ಮಿಕ ಸಂಘಗಳ ಸದಸ್ಯರು ಮೆರವಣಿಗೆ ನಡೆಸಿದರು.

ಸಂಜೆ ಇಂಜಿನಿಯರಿಂಗ್ ಮತ್ತು ಟ್ಯಾಕ್ಸಿ ಡ್ರೈವರುಗಳ ಮತ್ತು ಆಟೋರಿಕ್ಷಾ ಸಂಘದವರು ಸುಮಾರು 100 ಟ್ಯಾಕ್ಸಿಗಳು ಮತ್ತು ಆಟೋರಿಕ್ಷಾಗಳ ಭಾರಿ ಮೆರವಣಿಗೆಯು ಮಹಾತ್ಮ ಗಾಂಧಿ ರಸ್ತೆ, ಕಮರ್ಷಿಯಲ್ ಸ್ಟ್ರೀಟ್ ಮುಂತಾದ ರಸ್ತೆಗಳಲ್ಲಿ ಹಾದು ಹೋಯಿತು. ಕಾರ್ಯದರ್ಶಿ ಶ್ರೀ ಎಂ. ಎಸ್. ರಾಮರಾವ್ ಅವರು ನಾಯಕತ್ವ ವಹಿಸಿದ್ದರು. ಸಿಲ್ಕ್ ಕೆಲಸಗಾರರ ಸಂಘದವರು ಮೆರವಣಿಗೆಗಳಲ್ಲಿ ಭಾಗವಹಿಸಿದ್ದರು.

ಸಂಜೆ ಬ್ಲಾಕ್‌ಪಲ್ಲಿ ಮೈದಾನದಲ್ಲಿ ನಗರ ಕಾರ್ಮಿಕ ಸಂಘಗಳ ಮೇ ದಿನಾಚರಣೆ ಸಮಿತಿಯ ಆಶ್ರಯದಲ್ಲಿ ಬಹಿರಂಗ ಸಭೆಯು ಸಿಮ್ಸನ್ಸ್ ಗ್ರೂಪ್ ಕಂಪೆನಿ ನೌಕರರ ಸಂಘದ ಕಾರ್ಯದರ್ಶಿ ಶ್ರೀ ಎನ್. ಆರ್. ವಿಶ್ವನಾಥನ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕರ್ನಾಟಕ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಕಾರ್ಯದರ್ಶಿ ಶ್ರೀ ಎಂ. ಎಸ್. ಕೃಷ್ಣನ್ ಅವರು ಸ್ವಾಗತ ಭಾಷಣ ಮಾಡಿದ ನಂತರ, ಅಖಿಲ ಭಾರತ ರಕ್ಷಣಾ ನೌಕರರ ಫೆಡರೇಷನ್ನಿನ ಶ್ರೀ ಲಕ್ಷ್ಮೀನಾರಾಯಣ್, ಬ್ಯಾಂಕ್ ನೌಕರರ ಸಂಘದ ಶ್ರೀ ಕೃಷ್ಣಸ್ವಾಮಿ, ಕೇಂದ್ರ ಸರಕಾರದ ನೌಕರರ ಒಕ್ಕೂಟ ಸಂಘದ ಶ್ರೀ ವೇಣುಗೋಪಾಲ್, ಕೇಂದ್ರ ಕೈಗಾರಿಕಾ ನೌಕರರ ಫೆಡರೇಷನ್ನಿನ ಶ್ರೀ ಎ. ಎಲ್. ಸಿಂಗ್, ದಕ್ಷಿಣ ರೈಲ್ವೆ ನೌಕರರ ಸಂಘದ ಶ್ರೀ ಜಯರಾಂ, ಇಂಜಿನಿಯರಿಂಗ್ ಮತ್ತು ಟ್ಯಾಕ್ಸಿ ಕೆಲಸಗಾರರ ಸಂಘದ ಶ್ರೀ ಎಂ. ಎಸ್. ರಾಮರಾವ್, ಕೆ. ಪಿ. ಟಿ. ಯು. ಸಿ.ಯ ಶ್ರೀ ಸೂರ್ಯನಾರಾಯಣ್ ಹಿಂದೂಸ್ತಾನ್ ವಿಮಾನ ಕಾರ್ಖಾನೆ ನೌಕರರ ಸಂಘದ ಅಧ್ಯಕ್ಷ ಶ್ರೀ ಎಫ್. ಲೂಯಿಸ್, ಕಾರ್ಪೊರೇಷನ್ ಕೆಲಸಗಾರರ ಸಂಘದ ಶ್ರೀ ಡಿ. ಎಸ್. ಶ್ರೀರಾಮುಲು ಮುಂತಾದವರು ಕೆಲಸಗಾರರ ಸಭೆಯನ್ನುದ್ದೇಶಿಸಿ, ಕಾರ್ಮಿಕ ಚಳವಳಿ, ಮೇ ದಿನಾಚರಣೆಯ ಮಹತ್ವ ಸರಕಾರದ ಕಾರ್ಮಿಕ ನೀತಿ ಬಗ್ಗೆ ಹೇಳಿ ಕಾರ್ಮಿಕರು ಐಕ್ಯತೆಯಿಂದ ಕೂಡಿ ಕಾರ್ಮಿಕರ ಬೇಡಿಕೆಗಳಿಗೆ ಹೋರಾಟ ನಡೆಸಬೇಕೆಂದು ಮನವಿ ಮಾಡಿಕೊಂಡರು.

ಸಭೆ ಆರಂಭವಾಗುವ ಮುನ್ನ ಕಾರ್ಮಿಕ ಚಳುವಳಿಯ ಹೋರಾಟದಲ್ಲಿ ನಿಧನರಾದ ಹುತಾತ್ಮರಿಗೂ, ಹೆಚ್.ಎ.ಎಲ್. ನೌಕರರ ಮೇಲೆ ಪೋಲೀಸರು ಹಾರಿಸಿದ ಗೋಳಿಬಾರ್‌ನಿಂದ ಮೃತನಾದ ಶ್ರೀ ಪಾಂಡ್ಯನ್ ಆಚಾರಿ ಅವರುಗಳ ನಿಧನಕ್ಕೆ ಗೌರವವನ್ನು ಸಲ್ಲಿಸಿತು.

'ಮೇ ದಿನ'ವನ್ನು ಸಂಬಳ ಸಹಿತ ರಾಷ್ಟ್ರೀಯ ದಿನವನ್ನಾಗಿ ಘೋಷಿಸಬೇಕೆಂಬ ನಿರ್ಣಯ, ಸರ್ಕಾರದ ಕಾರ್ಮಿಕ ವಿರೋಧಿ ನೀತಿ ಕೈ ಬಿಟ್ಟು ಪುರೋಗಾಮಿ ನೀತಿಯನ್ನವಲಂಬಿಸಲೆಂದು ಒತ್ತಾಯ ಮಾಡುವ ಹಾಗೂ ಕಾರ್ಮಿಕರು ದ್ವಿತೀಯ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತ ಮಾಡಲು ಭಾಗಿಗಳಾಗುವಂತಾಗಲು ಈಗಿನ ಕಾರ್ಮಿಕ ನೀತಿಯನ್ನು ಬದಲಾಯಿಸಬೇಕೆಂದು ಒತ್ತಾಯ ಮಾಡುವ ಮೈಸೂರು ಸರ್ಕಾರ ಎರಡನೆ ಕೈಗಾರಿಕಾ ಪಂಚಾಯಿತಿ ಕಾರ್ಮಿಕ ಸಲಹಾ ಸಮಿತಿ ಇವುಗಳನ್ನು ರಚಿಸಬೇಕೆಂದೂ ಬೇಡುವ ಪ್ರಮುಖವಾದ ಎಲ್ಲಾ ಕೈಗಾರಿಕೆಗಳಿಗೂ ವೇತನ ಸಮಿತಿಯನ್ನು ರಚಿಸಬೇಕೆಂಬ ತೆಗೆದು ಹಾಕಲಾಗಿರುವ ಎಚ್.ಎ.ಎಲ್. ನೌಕರರನ್ನು ಆಡಳಿತ ವರ್ಗ ಮತ್ತೆ ಹಿಂತೆಗೆದುಕೊಳ್ಳಬೇಕೆಂದೂ ಸರ್ಕಾರ ನೌಕರರ ಮೇಲೆ ಹೂಡಲಾಗಿರುವ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಬೇಕೆಂದೂ ಒತ್ತಾಯ ಪಡಿಸುವ ಅನೇಕ ನಿರ್ಣಯಗಳನ್ನು ಸಭೆ ಅಂಗೀಕರಿಸಿತು.

ಸುಪ್ರೀಂ ಕೋರ್ಟು ಮತ್ತು ಇತರ ಕೋರ್ಟುಗಳ ವ್ಯಾಪಿಯಿಂದ ಕಾರ್ಮಿಕ ವಿವಾದಗಳನ್ನು ಹೊರಗಿಡಲು ಕೇಂದ್ರ ಸರ್ಕಾರ ರಾಜ್ಯಾಂಗಕ್ಕೆ ಸೂಕ್ತ ತಿದ್ದುಪಡಿ ತರಬೇಕೆಂದು ಒತ್ತಾಯ ಪಡಿಸುವ ನಿರ್ಣಯ ಸರ್ವಾನುಮತದಿಂದ ಅಂಗೀಕೃತವಾಯಿತು.

ಹಿಂದೂಸ್ತಾನ್ ಮೆಷಿನ್ ಟೂಲ್ಸ್ ಕಾರ್ಖಾನೆಯ ನೌಕರರು ಬೆಳಿಗ್ಗೆ ಮೆರವಣಿಗೆ ಹೊರಟಿದ್ದರು. 9 ಗಂಟೆಗೆ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಎಂ. ಕೆ. ಮತುಲ್ಲಾ ಅವರ ಅಧ್ಯಕ್ಷತೆಯಲ್ಲಿ ದಿನಾಚರಣೆಯನ್ನು ಆಚರಿಸಿದರು. ಕಾರ್ಯದರ್ಶಿಗಳಾದ ಎ. ಬಿ. ಭಟ್ಟಾಚಾರ್ಜಿ, ಕೆ. ಎಂ. ಮುನಿಯಪ್ಪ, ಟಿ. ಬಿ. ವೆಂಕಟೇಶ್, ಸಿ. ಎಂ. ವೆಂಕಟೇಶ್, ಅವರುಗಳು ಮಾತನಾಡಿದರು.

ಇಂಡಿಯನ್ ಟೆಲಿಫೋನ್ ಕಾರ್ಖಾನೆಯಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಜಗದೀಶ್ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ನೌಕರರು ಮೇ ದಿನವನ್ನು ಆಚರಿಸಿದರು. ಶ್ರೀಗಳಾದ ಎ. ಎನ್. ಸಿಂಗ್, ಐ. ರಾಜನ್ ಅವರುಗಳು ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು.

ಮಂಗಳೂರು—

ಎಂದಿನಂತೆ ಈ ಬಾರಿಯೂ ಮೇ ದಿನವನ್ನು ಸಂಭ್ರಮದಿಂದ ಮಂಗಳೂರಿನಲ್ಲಿ ಆಚರಿಸಲಾಯಿತು ಪ್ರಾತಃಕಾಲ ವಿವಿಧ ಪ್ರದೇಶಗಳಿಂದ ಪ್ರಭಾತ ಫೇರಿಗಳು ಕೇಂದ್ರ ಮೈದಾನಿಗೆ ಬಂದು ಸೇರಿ ಅಲ್ಲಿ ಶ್ರೀ ಹೆಚ್. ಉಮಾನಾಥ ನಾಯಕ್‌ರಿಂದ ಧ್ವಜಾರೋಹಣ ನಡೆಯಿತು.

ಸಂಜೆ ವಿವಿಧ ಕಾರ್ಖಾನೆಗಳಿಂದಲೂ, ವಿವಿಧ ಪ್ರದೇಶಗಳಿಂದಲೂ ಮಜೂರರ ಮೆರವಣಿಗೆಗಳು ಹೊರಟು ಘೋಷಣೆಗಳೊಂದಿಗೆ ಇಡೀ ನಗರ ಸುತ್ತಾಡಿ ಕೇಂದ್ರ ಮೈದಾನಕ್ಕೆ ಬಂದು ತಲಪಿದುವು.

ಕೇಂದ್ರ ಮೈದಾನಿನಲ್ಲಿ ಸಂಜೆ 6 ಗಂಟೆಗೆ ಸಾರ್ವಜನಿಕ ಸಭೆ ಜರುಗಿತು. ಪ್ರಾರಂಭದಲ್ಲಿ ಎಸ್. ಕೆ. ಟಿ ಯು. ಸಿ. ಯ ಕಾರ್ಯದರ್ಶಿ ಶ್ರೀ ಕೆ.ಮೋನಪ್ಪ ಶೆಟ್ಟರು ಮೇ ದಿನದ ಮಹತ್ವವನ್ನು ವಿವರಿಸಿ ಸಭಿಕರನ್ನು ಸ್ವಾಗತಿಸಿದರು.

ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿ ಶ್ರೀ ಎ. ಕೃಷ್ಣಶೆಟ್ಟರು ವಹಿಸಿದ್ದರು.

ಬಳಿಕ ಶ್ರೀಗಳಾದ ಬಿ. ವಿ. ಕಕ್ಕಿಲ್ಲಾಯ, ಬಿ. ಲಿಂಗಪ್ಪ ಸುವರ್ಣ, ಎ. ಶಾಂತಾರಾಂ ಪೈ, ಹೆಚ್. ಉಮಾನಾಥ ನಾಯಕ್, ಡೇವಿಡ್ ಕರ್ಕಡ ಮೊದಲಾದವರು ಮೇ ದಿನದ ಇತಿಹಾಸ, ಮಜೂರ ವರ್ಗದ ಐಕ್ಯದ ಮಹತ್ವ, ಇಂದು ರಾಷ್ಟ್ರೀಯವಾಗಿಯೂ, ಅಂತರ ರಾಷ್ಟ್ರೀಯವಾಗಿಯೂ ಮಜೂರ ವರ್ಗ ಪಡೆದ ಸ್ಥಾನ, ಸಮಾಜವಾದ ಪದ್ಧತಿಯ ಶ್ರೇಷ್ಠತ್ವ ಇವನ್ನು ವಿವರಿಸಿ ಬಂಡವಾಳಶಾಹೀ ಪದ್ಧತಿಯಲ್ಲಿ ಇಂದು ಉಂಟಾಗಿರುವ ಮುಗ್ಗಟ್ಟು ಇವನ್ನು ತಿಳಿಸಿ, ದೇಶದೊಳಗೆ ಹೇಗೆ ಇಂದು ಕಾಂಗ್ರೆಸು ದುರ್ಬಲವಾಗುತ್ತಿದೆ, ಪ್ರಜಾ ಪ್ರಭುತ್ವವಾದಿ ಶಕ್ತಿಗಳು ಬೆಳೆಯುತ್ತಿವೆ ಎಂಬುದನ್ನು ಸ್ಪಷ್ಟಪಡಿಸಿ ಇಂದು ಮಜೂರ ವರ್ಗದಲ್ಲಿ ಬಿಕ್ಕಟ್ಟುಂಟು ಮಾಡಲು ಬರುವ ಪ್ರತಿ ಶಾಖಾ ಶಕ್ತಿಗಳನ್ನು ಬಲವತ್ತಾಗಿ ಇದಿರಿಸಿ ಐಕ್ಯತೆಯಿಂದ ನವ ಸಮಾಜವನ್ನು ಕಟ್ಟಲು ಮಜೂರ ವರ್ಗ ಮುಂದಾಗಬೇಕೆಂದು ಕರೆ ಕೊಟ್ಟರು.

ಸಭಾ ನಂತರ ಜನತಾ ರಂಗಭೂಮಿಯ ಕಲಾವಿದರಿಂದ ಹಾಡುಗಾರಿಕೆ, ಸುಪ್ರಸಿದ್ಧ ಅರ್ಥಧಾರಿಗಳಿಂದ ಯಕ್ಷಗಾನ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳಿದ್ದವು.

ಚಿಕ್ಕಮಗಳೂರು—

1-5-58ನೇ ಗುರುವಾರ ಸಂಜೆ 7 ಗಂಟೆಗೆ ಸರಿಯಾಗಿ ಆಜಾದ್ ಮೈದಾನದಲ್ಲಿ ಬಹಿರಂಗ ಸಭೆ ನಡೆಯಿತು.

ಸಭೆ ಅಧ್ಯಕ್ಷತೆ ಕಾ॥ಎಂ.ವಿ. ಭಾಸ್ಕರ್‌ರವರು ವಹಿಸಿದ್ದರು. ಕಾಂ॥ ಬಿ. ವೀರಣ್ಣನವರು ಮೇ ದಿನದ ಮಹತ್ವವನ್ನು ವಿವರಿಸಿದ ನಂತರ ಕಾಂ॥ ಎಂ. ವಿ. ಸುಬ್ಬಯ್ಯನವರು ತಮಿಳಿನಲ್ಲಿ ಭಾಷಣ ಮಾಡಿ. ಈ ಕೆಳಕಂಡ ಠರಾವು ಮಾಡಲಾಯಿತು.

ಕಾರ್ಮಿಕರ ಬೇಡಿಕೆಗಳ ಹಾಗೂ ಸಂಘಟನೆ ಬಗ್ಗೆ ಉದ್ಭವಿಸುವ ವಿವಾದಗಳು ಪೋಲೀಸರನ್ನು ಉಪಯೋಗಿಸುವುದರ ಮೂಲಕ ಬಗೆಹರಿಸಲಸಾಧ್ಯವೆಂದೂ ಈ ನಿಮಿತ್ತ ಕಾರ್ಮಿಕ ವಿವಾದಗಳು ಬೇರೆಯೇ ದಾರಿಗೆ ತಿರುಗುವುದರಿಂದ ಕೈಗಾರಿಕೆಯಲ್ಲಿ ಶಾಂತ ವಾತಾವರಣವನ್ನು ಕಾಪಾಡಲು ಸಾಧ್ಯವಾಗಲಾರದೆಂದು ಈ ಸಭೆಯು ಸರಕಾರದ ಗಮನಕ್ಕೆ ತರುತ್ತದೆ. ಮತ್ತು ಕೈಗಾರಿಕೆಯಲ್ಲಿ ಉದ್ಭವಿಸುವ ವಿವಾದಗಳನ್ನು ಬಗೆಹರಿಸಲು ಲೇಬರ್ ಇಲಾಖೆಯನ್ನು ಮಾತ್ರ ಉಪಯೋಗಿಸಬೇಕೆಂದೂ ಮನವಿ ಮಾಡಿಕೊಳ್ಳುತ್ತೇವೆ.

ಗುಲ್ಬರ್ಗಾ—

ಗುಲ್ಬರ್ಗಾ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ಜಿಲ್ಲೆಯ ಕಾರ್ಮಿಕರು ಮೇ ದಿನವನ್ನಾಚರಿಸಿದರು. ವಿವಿಧ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು ಅಂದು ಮೆರವಣಿಗೆ ನಡೆಸಿದರು. ಶ್ರೀಗಳಾದ ಶ್ರೀನಿವಾಸಗುಡಿ, ಗಂಗಾಧರ ನಮೋಷಿ, ಅಬ್ದುಲ್ ಕರೀಂ ಮೊದಲಾದವರು ಮೇ ದಿನದ ಅಂಗವಾಗಿ ನಡೆದ ಸಭೆಯಲ್ಲಿ ಭಾಷಣ ಮಾಡಿದರು. ಕಮ್ಯೂನಿಸ್ಟ್ ಪಾರ್ಟಿ ಕಛೇರಿಯನ್ನು ಅಲಂಕರಿಸಲಾಗಿದ್ದಿತು.

ಓದುಗರ ಓಲೆ

ದೊಡ್ಡಬಳ್ಳಾಪುರದ ಪುರಸಭೆಯವರ ಕರ್ತವ್ಯ ಲೋಪ!

ನಮ್ಮೂರು ನಾಗರ ಕೆರೆ ನೀರಿನ ಸರೋವರದಂತೆ ಕುಡಿಯುವ ನೀರಿಗೂ, ಬಟ್ಟೆಬರೆ ಚೊಕ್ಕಟ ಮಾಡಿಕೊಳ್ಳುವುದಕ್ಕೂ, ಸ್ನಾನಕ್ಕೂ ಅನೇಕ ವರ್ಷಗಳಿಂದ ಅನುಕೂಲವಾಗಿತ್ತು. ಊರು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುತ್ತಾ ಜನಸಂದಣಿ ಜಾಸ್ತಿಯಾಗುತ್ತಿದೆ. ನಲ್ಲಿಗಳಲ್ಲಿ ನೀರು ಬರುವುದು ನಿಂತು ನಾಲ್ಕೈದು ವರ್ಷಗಳಾದಾಗ್ಯೂ, ಅತಿ ಶ್ರೇಷ್ಠವಾದ ಈ ಕೆರೆಯೊಂದು ಊರಿಗೆ ಇರುವುದರಿಂದ ಜನರು ಹಾಗೂ ಹೀಗೂ, ನೀರಿನ ಕಷ್ಟವನ್ನ ಮರೆಯುತ್ತಿದ್ದರು. ಇತ್ತೀಚೆಗೆ ಒಂದು ಜಾತಿಯ ಜೊಂಡು ಬೆಳೆದು ನೀರಿನ ಮೇಲೆ ಹೆಪ್ಪು ಕಟ್ಟಿಕೊಂಡಿದೆ. ಇದು ಕೆರೆಯನ್ನೆಲ್ಲಾ ಆವರಿಸಿಕೊಂಡು ನೀರಿನಲ್ಲಿ ಕಾಲಿಡಲು ಜಾಗವಿಲ್ಲದಂತಾಗಿದೆ. ನೀರು ಕುಡಿಯಲಂತೂ ಅನರ್ಹ. ಸ್ನಾನ ಕೆಲವು ವರ್ಷಗಳ ಹಿಂದೆ ಮಾಡಿದ್ದನ್ನ ನೆನಸಿಕೊಂಡು ತೃಪ್ತಿಪಡಬೇಕಷ್ಟೆ. ಬಟ್ಟೆ ಒಗೆಯಲು ಹೋಗುವ ಹೆಂಗಸರು, ಮಕ್ಕಳು, ಮೆಟ್ಟಲಿನ ಹತ್ತಿರಕ್ಕೆ ಸಾಗಿ ಬಂದಿರುವ ಈ ಜೊಂಡನ್ನ ಕಿತ್ತು ಆಚೆಗೆ ಹಾಕಿ ಮಡಿಗೆ ಪ್ರಾರಂಭ ಮಾಡಬೇಕು.

ವಿಹಾರಾರ್ಥವಾಗಿ ಬಹುಮಂದಿ ಪುರಪ್ರಮುಖರು ಸಂಜೆ ವೇಳೆ ಈ ಏರಿ ಮೇಲೆ ತಿರುಗಾಡುತ್ತಿರುತ್ತಾರೆ. ಇವರ ಓಡಾಟಕ್ಕಾಗಿ ಏರಿಯುದ್ದಕ್ಕೂ ಎಲೆಕ್ಟ್ರಿಕ್ ದೀಪದ ಸೌಕರ್ಯವನ್ನೂ ಒದಗಿಸಲಾಗಿದೆ. ಇಷ್ಟಾದರೂ ಇವರ ಕಣ್ಣಿಗೆ ಬೀಳದಂತೆಯೇ ನೀರಿನ ಮೇಲೆ ಮುಚ್ಚಿಕೊಂಡಿರುವ ಈ ಹಸುರು ಚಾವಣಿ ಹ್ಯಾಗೆ ತಪ್ಪಿಸಿಕೊಂಡಿದೆಯೋ ಅರ್ಥವಾಗುವುದಿಲ್ಲ. ಸೇವಾದಳದ ಯುವಕರು ಒಂದೆರಡು ಬಾರಿ ಈ ಜೊಂಡನ್ನ ತೆಗೆಯುವ ಪ್ರಯತ್ನ ಮಾಡಿದ್ದು ಸ್ತುತ್ಯಾರ್ಹವಾದ ವಿಚಾರ. ಈ ಯುವಕರಿಗಿರುವ ಸಹೃದಯ ಸೇವಾ ಧುರೀಣರಾದ ನಮ್ಮೂರಿನ ಪುರಸಭಾಧ್ಯಕ್ಷರಿಗಿಲ್ಲವಾದ್ದು ಶೋಚನೀಯ. ಕೆರೆ ನೀರಿನ ಸೌಲಭ್ಯ ಕೇವಲ ಬಡ ಕುಟುಂಬಗಳಿಗೆ ಸಂಬಂಧಪಟ್ಟ ವಿಚಾರವಾದ್ದರಿಂದ ಯಾರ ಗಮನವನ್ನೂ ಸೆಳೆಯಲಿಲ್ಲ. ಈಗಲಾದರೂ ಪುರಸಭೆಯವರು ಈ ಜೊಂಡನ್ನ ತೆಗೆಸಿ ನೀರನ್ನ ಪರಿಶುದ್ಧಗೊಳಿಸುವ ಕಡೆ ಲಕ್ಷ್ಯ ಕೊಡುವರೆ?

"ನೊಂದ ಬಡಕುಟುಂಬ"

ಸುದ್ದಿ ಸಂಗ್ರಹ

ಹಿಂದುಸ್ತಾನ್ ವಿಮಾನ ಕಾರ್ಖಾನೆ
ವಿವಾದಗಳ ಇತ್ಯರ್ಥಕ್ಕೆ ಮ್ಯಾನೇಜ್‌ಮೆಂಟಿನ ಅಡ್ಡಿ!

ಕಳೆದ ತಿಂಗಳು ೨೦ರಂದು ರಕ್ಷಣಾ ಸಚಿವ ಶ್ರೀ ವಿ. ಕೆ. ಕೃಷ್ಣ ಮೆನನ್‌ರವರು ಬೆಂಗಳೂರಿಗೆ ಆಗಮಿಸಿದಾಗ ವಿಮಾನ ಕಾರ್ಖಾನೆ ನೌಕರರನ್ನುದ್ದೇಶಿಸಿ ಮಾತನಾಡುತ್ತ, ವಿವಾದಗಳ ಇತ್ಯರ್ಥಕ್ಕಾಗಿ ಕೆಲವು ಸೂಚನೆಗಳನ್ನು ಮಂಡಿಸಿದರು. 100 ರೂ.ಗಳಿಗಿಂತ ಕಡಿಮೆ ಸಂಬಳ ಬರುತ್ತಿರುವವರ ತುಟ್ಟಿ ಭತ್ಯದಲ್ಲಿ 6 ರೂ. ಹೆಚ್ಚಳವನ್ನೂ ಮತ್ತು 100ರಿಂದ 200 ರೂ.ಗಳವರೆಗೆ ತುಟ್ಟಿ ಭತ್ಯದಲ್ಲಿ 5 ರೂ. ಹೆಚ್ಚಳವನ್ನೂ, ಕೊಡಲು ಮ್ಯಾನೇಜ್‌ಮೆಂಟಿಗೆ ಶಿಫಾರಸು ಮಾಡುವುದಾಗಿ ತಿಳಿಸಿದರು ಮತ್ತು ಟ್ರಾನ್ಸ್‌ಪೋರ್ಟ್ ಚಾರ್ಜಿನಲ್ಲಿ 60 ರೂ. ಕನಿಷ್ಟ ಸಂಬಳ ಪಡೆಯುತ್ತಿರುವವರಿಗೆ ಈಗ ವಸೂಲಿ ಮಾಡುತ್ತಿರುವ ರೂ. 7—8—0ಯ ಬದಲು ರೂಪಾಯಿ 3—12—0 ವಸೂಲಿ ಮಾಡಲು, ಅದಕ್ಕೂ ಹೆಚ್ಚು ಸಂಬಳ ಬರುತ್ತಿರುವವರಿಗೆ ರೂ. 4 ಮತ್ತು 100 ರೂ ಗಳಿಗೆ ಮೇಲ್ಪಟ್ಟು ಸಂಬಳ ಬರುತ್ತಿರುವವರಿಗೆ ರೂ. 5ನ್ನೂ ವಸೂಲಿ ಮಾಡುವಂತೆ ಸಲಹೆಯಿಯುವುದಾಗಿಯೂ ತಿಳಿಸಿದರು. ಮನೆ ಬಾಡಿಗೆ ಭತ್ಯದ ಬಗ್ಗೆ ಐ. ಟಿ. ಐ. ನೌಕರರಿಗೆ ಕೈಗಾರಿಕಾ ಪಂಚಾಯಿತಿ ಕೋರ್ಟು ಎಷ್ಟು ಕೊಡಲಾಗುವುದೋ ಅಷ್ಟು ಕೊಡಲಾಗುವುದೆಂದೂ ಬೋನಸ್ ಪ್ರಶ್ನೆಯನ್ನು ಪರಿಶೀಲಿಸುವುದಾಗಿಯೂ ತಿಳಿಸಿದರು. ಈಗ ಕೆಲಸದಿಂದ ತೆಗೆದುಹಾಕಿರುವ ನೌಕರರ ಪ್ರಶ್ನೆಯನ್ನು ಪರಿಶೀಲಿಸುವುದಾಗಿಯೂ ಅದು, ನೌಕರರು ಉಂಟುಮಾಡುವ ವಾತಾವರಣದ ಮೇಲೆ ಹೊಂದಿಕೊಂಡಿದೆಯೆಂದೂ ತಿಳಿಸಿದರು. ಅಲ್ಲದೆ ಕೆಲಸದಿಂದ ತೆಗೆದುಹಾಕಲಾಗಿರುವವರು ವೈಯ್ಯಕ್ತಿಕವಾಗಿ ಮ್ಯಾನೇಜ್‌ಮೆಂಟಿಗೆ ಅರ್ಜಿ ಸಲ್ಲಿಸಿದರೆ ಪರಿಶೀಲಿಸಲಾಗುವುದೆಂದೂ ತಿಳಿಸಿದರು. ತಮ್ಮ ಸಲಹೆಗಳು ಅಮಲಿಗೆ ಬರಬೇಕಿದ್ದಲ್ಲಿ ನೌಕರರ ಸಂಘವು ಈ ಕೈಗಾರಿಕಾ ಪಂಚಾಯ್ತಿಯ ಕೋರ್ಟಿನಲ್ಲಿರುವ ಕೇಸನ್ನು ಹಿಂತೆಗೆದುಕೊಳ್ಳಬೇಕೆಂದು ಹೇಳಿದರು. ತಮ್ಮ ಈ ಸಲಹೆಗಳನ್ನು ಪರಿಶೀಲಿಸಿ ನೌಕರರು ಉತ್ತಮ ವಾತಾವರಣ ಕಲ್ಪಿಸಬೇಕೆಂದು ಕರೆಯಿತ್ತರು.

ನೌಕರರ ಸಂಘವು ಶಾಂತಿಯುತವಾದ ವಾತಾವರಣವನ್ನು ಕಲ್ಪಿಸಲು ಯತ್ನಿಸುತ್ತಿದೆ. ಆದರೆ ಮ್ಯಾನೇಜ್‌ಮೆಂಟು ಮಾತ್ರ ಅದಕ್ಕೆ ವಿರುದ್ಧವಾಗಿ ವರ್ತಿಸುತ್ತಿದೆ. ನೌಕರರ ಸಂಘದ ಪ್ರತಿನಿಧಿಗಳು ಮಾನ್ಯ ರಕ್ಷಣಾ ಸಚಿವರನ್ನು ಭೆಟ್ಟಿ ಮಾಡಿ, ಮನವಿ ಸಲ್ಲಿಸಿ ಮಾತುಕತೆ ನಡೆಸಿದಾಗಲೂ ಅವರು ಇದೇ ಆಶ್ವಾಸನೆಯನ್ನಿತ್ತಿದ್ದಾರೆ. ಸಂಘವು ಅವರ ಸಲಹೆಗಳನ್ನು ಸ್ವಾಗತಿಸಿರುವುದಾಗಿಯೂ, ಆದರೆ ಕೆಲಸದಿಂದ ತೆಗೆದುಹಾಕಿರುವ ನೌಕರರನ್ನು ಕೆಲಸಕ್ಕೆ ತೆಗೆದುಕೊಂಡು ಒಪ್ಪಂದವೇರ್ಪಡಬೇಕೆಂದೂ ತಿಳಿಸಿದೆ: ಎಲ್ಲ ರೀತಿಯಲ್ಲಿ ಈ ಮುಖ್ಯವಾದ ರಕ್ಷಣಾ ಕೈಗಾರಿಕೆಯಲ್ಲಿ ಕೈಗಾರಿಕಾ ಶಾಂತಿ ಏರ್ಪಡಿಸಲು ಪ್ರಯತ್ನಿಸುವುದಾಗಿ ಘೋಷಿಸಿದೆ. ಆದರೆ ಮ್ಯಾನೇಜ್‌ಮೆಂಟಿನವರು ಇದಕ್ಕೆ ಸಿದ್ಧವಿಲ್ಲವೆಂದು ಕಾಣಬರುತ್ತಿದೆ. ಮೊದಲಿನ 23 ಮಂದಿಯ ಜೊತೆಗೆ, ಇನ್ನೂ 46 ಜನರನ್ನು ಕೆಲಸದಿಂದ ತೆಗೆದುಹಾಕಲಾಗಿದ್ದೆ. ಇನ್ನೂ ಸ್ವಲ್ಪ ಮಂದಿಯನ್ನು ತೆಗೆದುಹಾಕಲು ಮ್ಯಾನೇಜ್‌ಮೆಂಟ್ ನಿರ್ಧರಿಸಿರುವುದಾಗಿ ತಿಳಿದುಬಂದಿದೆ. ನೌಕರರ ಸಂಘವು ಫ್ಯಾಕ್ಟರಿಯ ಪ್ರದೇಶದಲ್ಲಿ ಸಂಘದ ಸರ್ವ ಸದಸ್ಯರ ಸಭೆ ನಡೆಸಲು ಅನುಮತಿ ನಿರಾಕರಿಸಿದೆ. ಮ್ಯಾನೇಜ್‌ಮೆಂಟಿನವರು ಕೆಲಸಗಾರರಿಗೆ ದ್ರೋಹ ಬಗೆಯುವ ಇಂಥ ನೀತಿಯನ್ನನ್ನುಸರಿಸಿದಲ್ಲಿ, ಮಾನ್ಯರಕ್ಷಣಾ ಸಚಿವರ ಭರವಸೆಯಿದ್ದರೂ, ಒಪ್ಪಂದ ವೇರ್ಪಡುವುದು ಹೇಗೆ ಸಾಧ್ಯ. ಸೇಡು ತೀರಿಸಿಕೊಳ್ಳುವ ಮನೋಭಾವದಿಂದ ವರ್ತಿಸುತ್ತಿರುವ ಹೆಚ್.ಎ.ಎಲ್. ಮ್ಯಾನೇಜ್‌ಮೆಂಟಿನ ನೀತಿ ಖಂಡನೀಯವಾಗಿದೆ. ಅನೇಕ ದಿನಗಳಿಂದ ಇತ್ಯರ್ಥವಾಗದಿರುವ ಪ್ರಶ್ನೆಗಳನ್ನು ಇತ್ಯರ್ಥಗೊಳಿಸಲು ಈಗ ಇರುವ ಅವಕಾಶವನ್ನು ಮ್ಯಾನೇಜ್‌ಮೆಂಟು ಹಾಗೂ ನೌಕರರ ಸಂಘವು ಸದುಪಯೋಗ ಪಡಿಸಿಕೊಳ್ಳಬೇಕೆಂದೂ, ಕೈಗಾರಿಕಾ ಶಾಂತಿ ಸ್ಥಾಪಿಸಬೇಕೆಂದೂ ಒತ್ತಾಯ ಪಡಿಸಬೇಕಾಗಿದೆ.

ಕುಣಿಗಲ್ ರೈತ ಸಮ್ಮೇಳನ

ತಾ. 26-4-’58ನೇ ಶನಿವಾರ ಬೆಳಿಗ್ಗೆ 9-30 ಗಂಟೆಗೆ ಕುಣಿಗಲ್ ತಾಲ್ಲೋಕು ರೈತ ಸಂಘದ ಸಮ್ಮೇಳನವನ್ನು ಕುಣಿಗಲ್ ಟೌನ್ ಮುನಿಸಿಪಲ್ ಪ್ರೆಸಿಡೆಂಟರಾದ ಶ್ರೀ ಎನ್. ಶ್ರೀನಿವಾಸ, ಬಿ.ಎಸ್‌ಸಿ. ಇವರ ಅಧ್ಯಕ್ಷತೆಯಲ್ಲಿ ನಡೆಯಿತು. 40 ಜನ ಪ್ರತಿನಿಧಿಗಳು ವಿವಿಧ ಗ್ರಾಮಗಳಿಂದ ಆಗಮಿಸಿದ್ದರು.

ತುಮಕೂರು ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಕಾಮ್ರೇಡ್ ಕೆ. ವಿ. ಕೃಷ್ಣಸ್ವಾಮಿಯವರು ಪ್ರತಿನಿಧಿಗಳನ್ನುದ್ದೇಶಿಸಿ ಪ್ರಾರಂಭ ಭಾಷಣದಲ್ಲಿ ಇಂದಿನ ರಾಜಕೀಯದ ಬೆಳವಣಿಗೆಯಲ್ಲಿ ರೈತರ ಪಾತ್ರ ಅದರ ಸಂಘಟನೆಯ ಮಹತ್ವದ ಬಗ್ಗೆ ವಿವರಗಳನ್ನಿತ್ತು, ರೈತ ಸಂಘಟನೆಗೆ ಹೆಚ್ಚು ಹೆಚ್ಚು ಸದಸ್ಯರುಗಳನ್ನು ಮಾಡಬೇಕೆಂತಲೂ ಮತ್ತು ಸರ್ಕಾರದ ಪ್ರತಿಗಾಮೀ ಧೋರಣೆಯನ್ನು ಖಂಡಿಸಿ ಮಾತನಾಡಿದರು.

ಕುಣಿಗಲ್ ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಆರ್. ರಾಮಣ್ಣನವರು 1957-58ನೇ ಸಾಲಿನ ವರದಿಯನ್ನೊಪ್ಪಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಎನ್. ಶ್ರೀನಿವಾಸನ್‌ರವರು 1957-58ರ ವರೆಗಿನ ತಾಲ್ಲೂಕು ರೈತ ಸಂಘದ ಕೆಲಸ ಚಟುವಟಿಕೆಗಳಿಗೆ ಒಪ್ಪಿ, ಇನ್ನು ಮುಂದೆ ರೈತ ಸಂಘಟನೆಗೆ ಶ್ರಮವಹಿಸಿ ದುಡಿಯುವುದಾಗಿ ಭರವಸೆಯಿತ್ತು, ತಾಲ್ಲೂಕಿನ ಎಲ್ಲ ರೈತ ಬಾಂಧವರ ಬೆಂಬಲ ಕೋರಿ, ಸಂಘಟನೆಯ ಉದ್ದಿಶ್ಯ ಅಂದರೆ: ಸಂಘಟನೆಯ ಮೂಲಕ ಏನನ್ನಾದರೂ ಸಾಧಿಸಬಹುದೆಂದು ವಿವರಗಳೊಡನೆ ಭಾಷಣಮಾಡಿದರು.

ಮೇ ದಿನಾಚರಣೆ

ಮೈಸೂರು

ತಾ. 1-5-58ನೇ ಗುರುವಾರ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಮೇ ದಿನಾಚರಣೆಯ ಅಂಗವಾಗಿ ಬಹಿರಂಗ ಸಭೆ ಮೈಸೂರು ನಗರದ ವಿವಿಧ ಟ್ರೇಡ್ ಯೂನಿಯನ್ನಗಳ ಆಶ್ರಯದಲ್ಲಿ ನಡೆಯಿತು. ಸಭೆಗೆ ಪೂರ್ವ ಭಾವಿಯಾಗಿ ಮೈಸೂರು ಸಿಟಿ ಮುನಿಸಿಪಲ್ ಕೆಲಸಗಾರರು ಮೆರವಣಿಗೆ ಮಾಡಿದರು. ಈ ಮೆರವಣಿಗೆಯಲ್ಲಿ ಮುನಿಸಿಪಲ್ ಕೆಲಸಗಾರರಾದ ಶ್ರೀ ಕರಿಯಣ್ಣ ಎಂಬುವರು ವೇಷವನ್ನು ಧರಿಸಿ ಬಂದಿದ್ದಕ್ಕಾಗಿ ಅವರಿಗೆ ಸಭೆಯಲ್ಲಿ ಒಂದು ಬೆಳ್ಳಿಯ ಕಪ್ಪನ್ನು ಬಹುಮಾನವಾಗಿ ಕೊಡಲಾಯಿತು. ಟೌನ್‌ಹಾಲ್ ಎದುರು ಇರುವ ಕಮ್ಯೂನಿಸ್ಟ್ ಪಾರ್ಟಿ ಖಚೇರಿಯನ್ನು ತಳಿರು ತೋರಣಗಳಿಂದ ಚಪ್ಪರವನ್ನು ಹಾಕಿ ಅಲಂಕರಿಸಿತ್ತು. ಬಹಿರಂಗ ಸಭೆಗೆ ಶ್ರೀ ಎಲ್. ಶ್ರೀಕಂಠಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀಗಳಾದ ಸ್ವಾಮಿದಾಸ್‌ರವರು ಭಾಷಣಮಾಡಿ ಕಮ್ಯೂನಿಸ್ಟ್ ಪಾರ್ಟಿಯು ಕೂಲಿಗಾರರ ಮಧ್ಯೆ ಪ್ರಪಂಚದ ಎಲ್ಲಾ ಭಾಗದಲ್ಲೂ ಕೆಲಸ ಮಾಡುತ್ತಿರುವುದನ್ನು ವಿವರಿಸಿದರು. ಈದಿನ ಕಾರ್ಮಿಕರು ಸುಸಂಘಟಿತರಾಗಿ ದೇಶಾಭಿಮಾನದಿಂದ ದುಡಿಯಲು, ತಮ್ಮ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು, ಜಗತ್ತಿನ ಯುದ್ಧ ಘೋಷಣೆಯನ್ನು ಅಂತ್ಯ ಮಾಡಲು, ಜಗತ್ತಿನಲ್ಲಿ ಶಾಂತಿ ಸ್ಥಾಪಿಸಲು ಪಣತೊಟ್ಟು ಸಂಘಟಿತರಾಗಬೇಕೆಂದು ತಿಳಿಸಿದರು. ಶ್ರೀ ಸೋಮಸುಂದರ ಶರ್ಮರವರು ಮಾತನಾಡುತ್ತಾ ಕೂಲಿಗಾರರು ಈವರೆವಿಗೆ ಗಳಿಸುದದನ್ನು ತಿಳಿಸಿ ಇನ್ನು ಮುಂದೆ ಎರಡನೇ ಪಂಚವಾರ್ಷಿಕ ಯೋಜನೆಯನ್ನು ಪೂರೈಸಲು ಅದಕ್ಕೆ ಅಡ್ಡ ಬರುವ ಪ್ರತಿಗಾಮಿ ಶಕ್ತಿಗಳ ವಿರುದ್ಧ ಹೋರಾಡಬೇಕೆಂದು ತಿಳಿಸಿದರು ಮತ್ತು ಶ್ರೀ ಎಂ.ಎನ್. ಉಗ್ರಪ್ಪನವರು ಭಾಷಣಮಾಡಿ ರಾಷ್ಟ್ರದ ಹಿತಕ್ಕಾಗಿ ಎಲ್ಲಾ ಕಾರ್ಮಿಕ ಸಂಸ್ಥೆಗಳೂ ಒಂದಾಗಿ ಪ್ರಜಾಪ್ರಭುತ್ವ ರೀತಿಯಲ್ಲಿ ಕೆಲಸಮಾಡಬೇಕೆಂದು ತಿಳಿಸಿದರು. ಸಭೆಯ ಅಂತ್ಯದಲ್ಲಿ ಸುಮಾರು ಒಂದೂವರೆ ಘಂಟೆಗಳ ಕಾಲ ನೃತ್ಯ ಕಲಾ ಪ್ರದರ್ಶನ ನಡೆದ ಬಳಿಕ ಸಭೆಯು ರಾಷ್ಟ್ರಗೀತೆಯೊಡನೆ ಮುಕ್ತಾಯವಾಯಿತು.

ಬಿಜಾಪುರ

ಕಮ್ಯೂನಿಸ್ಟ್ ಪಾರ್ಟಿ ಮತ್ತು ಮುನಿಸಿಪಲ್ ಕಾಮಗಾರ ಯೂನಿಯನಿನ ಪರವಾಗಿ 1-5-58ನೇ ದಿವಸ ಮೇ ದಿನಾಚರಣೆಯ ಸಂಬಂಧ, ಕೆಲಸಗಾರರ ಮೆರವಣಿಗೆ ತೆಗೆದು ರೇಡಿಯೋ ಮೈದಾನಿನಲ್ಲಿ ಸಾರ್ವಜನಿಕ ಸಭೆ ಜರುಗಿತು. ಶ್ರೀ ಎನ್. ಕೆ. ಉಪಾಧ್ಯಾಯರು ಮೇ ದಿನದ ಮಹತ್ವ ತಿಳಿಸಿ, ಈ ದಿನಾಚರಣೆ ಶಾಂತಿ ಪ್ರಿಯ ಮಾನವ ಜನಾಂಗದ ದಿನವೆಂದು ಹೇಳಿದರು. ಇದೇ ಸಭೆಯಲ್ಲಿ ಮುನಿಸಿಪಲಾಟಿಯಲ್ಲಿ ಹೊಸದಾಗಿ ಅಧ್ಯಕ್ಷರಾಗಿ ಆರಿಸಿ ಬಂದಿರುವ ಶ್ರೀ ಎಸ್. ಎಸ್. ಸಾವಳಗಿ ಮತ್ತು ಇತರ ಸದಸ್ಯರನ್ನು ಪಾರ್ಟಿ ಪರವಾಗಿ ಸ್ವಾಗತ ಮಾಡಲಾಯಿತು. ಮುನಿಸಿಪಾಲಿಟಿಯ ಆಡಳಿತೆಯಲ್ಲಿ ಸುಧಾರಣೆಯಾಗಬೇಕೆಂದೂ, ಸಾರ್ವಜನಿಕ ಹಿತದ ಕೆಲಸ ಆಗಬೇಕೆಂದೂ, ಜಾತೀಯತೆ ನಷ್ಟವಾಗಬೇಕೆಂದೂ ನಾಗರೀಕರ ಪರವಾಗಿ ಹೊಸ ಅಧಿಕಾರಿ ಜನರಿಗೆ ಕೇಳಿಕೊಳ್ಳಲಾಯಿತು. ಶ್ರೀ ಸಾವಳಗಿ, ಭಕ್ಷಿ, ಚವಾಣ ಇವರು ಜನರ ಹಿತವೇ ತಮ್ಮ ಹಿತವೆಂದು ಹೇಳಿದರು.

ಕಂಕನಾಡಿ—

ಪಂಚಾಯತ ಸಭೆ

ತಾ. 29—4—58ರಂದು ಕಂಕನಾಡಿ ‘ಬಿ’ ಪಂಚಾಯತದ ವಿಶೇಷ ಸಭೆಯು ಶ್ರೀ ವೈದ್ಯ ಬಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು.

ಕಂಕನಾಡಿ ಕಟ್ಟಪುಣಿ ಹೋಟೇಲಿನ ಬಳಿಯ ಮತ್ತು ನಾಗುರಿ ಬಳ್ಳಿಮಾರಿನ ಬಳಿಯ ತೋಡುಗಳಿಗೆ ಕಾಲು ಸಂಕವನ್ನು ಕಟ್ಟಿಸಬೇಕೆಂದೂ ಇದರ ಸಹಾಯಾರ್ಥಕ್ಕಾಗಿ ಮಂಗಳೂರು ಬಿ. ಡಿ. ಒ.ರವರನ್ನು ಕೇಳಿಕೊಳ್ಳಬೇಕೆಂಬ ಠರಾವು ಮಂಜುರಾಯ್ತು.

ಕಂಕನಾಡಿ ‘ಬಿ’ ಪಂಚಾಯತದ ಕೋರ್ಟನ್ನು ನಿರ್ಣಯ ನಂಬ್ರ 59ರಂತೆ ತೆರೆಯಲ್ಪಟ್ಟಿದೆ. ಆದುದರಿಂದ ಇನ್ನು ಕಂಕನಾಡಿ ಗ್ರಾಮದಲ್ಲಿ ವಿವಾದಗಳಿದ್ದರೆ ಸದರಿ ಕೋರ್ಟಿಗೆ ತಮ್ಮಗಳ ವಿವಾದಗಳನ್ನು ದಾಖಲು ಮಾಡಬಹುದೆಂದು ಎಲ್ಲ ನಾಗರಿಕರನ್ನು ಕೇಳಿಕೊಳ್ಳುವ ಠರಾವು ಮಂಜೂರಾಯ್ತು.

ವಿವಿಧ ಅರ್ಜಿಗಳನ್ನು ಪರಿಶೀಲಿಸಿ ತಕ್ಕ ನಿರ್ಣಯವನ್ನು ಸ್ವೀಕರಿಸಲಾಯ್ತು.

ವಿಟ್ಲ ದ. ಕ.—

ಪಂಚಾಯತ ಚುನಾವಣೆಯಲ್ಲಿ
ಕಮ್ಯೂನಿಸ್ಟರ ವಿಜಯ

ಇದೇ ಏಪ್ರಿಲ್ ತಾರೀಕು 28ರಂದು ಅಳಿಕೆ ಪಂಚಾಯಿತ್ ಚುನಾವಣೆಯು ನಡೆದು ಕಮ್ಯೂನಿಸ್ಟ್ ಪಾರ್ಟಿಯ ಅಳಿಕೆ ಬ್ರಾಂಚ್ ಕಾರ್ಯದರ್ಶಿಯವರಾದ ಕಾ|| ನಾರಾಯಣ ಭಟ್ಟರು ಅಧ್ಯಕ್ಷರಾಗಿಯೂ, ಶ್ರೀಗಳಾದ ಜಿ. ರತ್ನಾಕರ ಶೆಟ್ಟಿ, ಬಿ. ರಾಮಯ್ಯ ಶೆಟ್ಟಿ, ಯಮ್. ಶಿವರಾಮ ರಾವ್, ಯಮ್. ನಾರಾಯಣ ಭಟ್ಟ, ಕೆ. ರಾಮ ಭಟ್ಟ, ಕೆ. ಸೇಸಪ್ಪ ಶೆಟ್ಟಿ ಮತ್ತು ಯಮ್. ರಾಮಯ್ಯ ಶೆಟ್ಟಿ ಇವರುಗಳು ಸದಸ್ಯರಾಗಿಯೂ ಅವಿರೋಧವಾಗಿ ಆಯ್ಕೆಗೊಂಡಿರುತ್ತಾರೆ.

ತೀರ್ಥಹಳ್ಳಿ—

ಕಮ್ಯೂನಿಸ್ಟ್ ಪಾರ್ಟಿ ಸಭೆ

22—4—58ರಂದು ಈ ಊರಿನ ಕಮ್ಯೂನಿಸ್ಟ್ ಕಾರ್ಯಕರ್ತರ ಸಭೆ ಸೇರಿ ಭಾರತದ ಕಮ್ಯೂನಿಸ್ಟ್ ಪಾರ್ಟಿಯ ಶಾಖೆಯನ್ನು ಪ್ರಾರಂಭಿಸುವ ವ್ಯವಸ್ಥೆಮಾಡಲು ಸರ್ವ ಶ್ರೀ ಪಿ. ದಿನೇಶ್, ಕಾರ್ಯದರ್ಶಿ, ಎಚ್. ರಘುನಾಥ್, ಸಿ. ಕೆ. ಜನಾರ್ಧನ ಸಾಯ್ಕ, ಎನ್. ಬಾಲನ್ ನಾಯರ್, ಕೆ. ಜಿ. ದೇವದಾಸ ಬಾಳಿಗ, ಎಂ. ಕೆ. ಕೇಳನ್, ಬಿ. ಎನ್. ಎ. ಹೆಗ್ಡೆ, ಇವರುಗಳನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಯಿತು.

ಶಿಗಮೊಗ್ಗಾ ಜಿಲ್ಲಾ ಪಾರ್ಟಿ ಮುಂದಾಳುಗಳಾದ ಬಿ. ಎನ್. ಎ. ಹೆಗ್ಗಡೆಯವರು ಪಾರ್ಟಿಯ ಧ್ಯೇಯ ಧೋರಣೆಯನ್ನು ವಿವರಿಸಿದರು.

ಮಂಗಳೂರು ಪತ್ರ

ಗೇರುಬೀಜ ಮಜೂರರ ವಾರ್ಷಿಕ ಮಹಾಸಭೆ

ಕಳೆದ ತಾ|| 27 ರಂದು ಮಂಗಳೂರು ಗಣಪತಿ ಹೈಸ್ಕೂಲಿನ ಸಭಾ ಭವನದಲ್ಲಿ ಸೇರಿದ ಗೇರುಬೀಜ ಮಜೂರರ ವಾರ್ಷಿಕ ಮಹಾ ಸಭೆಯು ತಮ್ಮ ಈ ಕೆಳಗಿನ ಕೇಳಿಕೆಗಳನ್ನು ಮಾಲಿಕರ ಮತ್ತು ಸರಕಾರದ ಮುಂದಿಟ್ಟು ಅವನ್ನು ಕೂಡಲೇ ಈಡೇರಿಸಬೇಕೆಂದು ಕೇಳಿಕೊಳ್ಳಲಾಯಿತಲ್ಲದೆ ಅದನ್ನು ಪಡೆಯುವುದಕ್ಕಾಗಿ ಗೇರುಬೀಜ ಮಜೂರರೆಲ್ಲರೂ ಒಂದಾಗಿ ಸರ್ವಶಕ್ತಿಯಿಂದ ಚಳವಳಿ ನಡೆಸಬೇಕೆಂದು ಕರೆ ಕೊಟ್ಟಿತು.

ಕೇಳಿಕೆಗಳು

ಗೇರುಬೀಜ ಕಾರ್ಖಾನೆಗಳನ್ನೆಲ್ಲ ಇಡಿಯ ವರುಷ ನಡೆಯುವ ಕಾರ್ಖಾನೆ (Non-Seasonal) ಗಳೆಂದು ಸಾರಬೇಕು. ಕಾರ್ಖಾನೆ ಮುಚ್ಚಿದಾಗಿನ ಕಾಲದ, ಕಾನೂನು ಪ್ರಕಾರ ಶೇ. 50 ರಷ್ಟು ಸಂಬಳ ಸಿಗಬೇಕು. ಕನಿಷ್ಟ ಕೂಲಿ ನಿರ್ಣಯವಾಗಬೇಕು. ಶೆಲ್ಲಿಂಗ್ ಮತ್ತು ಪೀಲಿಂಗ್ ಕೆಲಸಗಾರರಿಗೆ ರಾತವೊಂದರ 0-2-0 ಯಂತೆಯೂ ಗ್ರೇಡಿಂಗ್ ಕೆಲಸದವರಿಗೆ ದಿನಕ್ಕೆ 1-12-0 ಯಂತೆಯೂ ಉಳಿದ ಮಜೂರರಿಗೆ ಈಗಿನ ಸಂಬಳದ ಶೇ. 25ರಷ್ಟು ಹೆಚ್ಚು ಸಂಬಳ ಸಿಗಬೇಕು. ಎಲ್ಲ ಗೇರುಬೀಜ ಕಾರ್ಖಾನೆಗಳಲ್ಲೂ ಪ್ರಾವಿಡೆಂಟ್ ಫಂಡ್ ವ್ಯವಸ್ಥೆ ಜಾರಿಗೆ ತರಬೇಕು. ಗ್ರೇಚ್ಯುಟಿ ಅಥವಾ ಸರ್ವಿಸ್ ಸಂಬಳ ಕೊಡುವ ವ್ಯವಸ್ಥೆಯಾಗಬೇಕು. ವರುಷಕ್ಕೆ ಸಂಬಳ ಸಮೇತ 12 ದಿನಗಳ ರಜೆ ಕೊಡಬೇಕು. ಯಾರ್ಡ್ ರೋಸ್ಟಿಂಗ್ ಕೆಲಸಗಾರರಿಗೆ ಡ್ರೆಸ್ ಕೊಡಬೇಕು. ಹೆರಿಗೆ ಭತ್ತೆ ಕಾನೂನಿನಲ್ಲಿ ತಿದ್ದುಪಡಿಯಾಗಬೇಕು. ವರ್ಷಕ್ಕೆ ಕನಿಷ್ಟ ಪಕ್ಷ ಒಂದು ತಿಂಗಳ ಬೋನಸ್ಸನ್ನಾದರೂ ಕಡ್ಡಾಯವಾಗಿ ಕೊಡಬೇಕು. ಫ್ಯಾಕ್ಟರಿಯೊಳಗೇ ಕಡಿಮೆ ದರದಲ್ಲಿ ಅಕ್ಕಿ ಮತ್ತಿತರ ಜೀವನಾವಶ್ಯಕ ವಸ್ತುಗಳ ಮಾರಾಟದ ವ್ಯವಸ್ಥೆಯಾಗಬೇಕು. ಯೂನಿಯನನ್ನು ಮಾಲಿಕರು ಅಂಗೀಕರಿಸಬೇಕು.

ಮಹಾ ಸಭೆಯ ಅಧ್ಯಕ್ಷತೆಯನ್ನು ಯೂನಿಯನಿನ ಅಧ್ಯಕ್ಷ ಶ್ರೀ ಎ. ಶಾಂತಾರಾಂ ಪೈಯವರು ವಹಿಸಿದ್ದರು. ಕಾರ್ಯದರ್ಶಿ ಶ್ರೀ ಬಿ. ಲಿಂಗಪ್ಪ ಸುವರ್ಣರು ಸಂಘದ ವಾರ್ಷಿಕ ವರದಿಯನ್ನೂ ಕೋಶಾಧಿಕಾರಿ ಶ್ರೀ ಶಿವಾನಂದ ಕಾಮತರು ಲೆಕ್ಕಪತ್ರಗಳ ವಿವರವನ್ನೂ ಸಭೆಯ ಮುಂದಿಟ್ಟರು. ಅದನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು.

ನಂತರ ಮುಂದಿನ ವರುಷಕ್ಕೆ ಶ್ರೀ ಎ. ಶಾಂತಾರಾಂ ಪೈ (ಅಧ್ಯಕ್ಷ) ಶ್ರೀಮತಿಯವರಾದ ಉಮ್ಮಳೆ ಮತ್ತು ಕಮಲ (ಉಪಾಧ್ಯಕ್ಷೆಯರು), ಶ್ರೀ ಬಿ. ಲಿಂಗಪ್ಪ ಸುವರ್ಣ (ಕಾರ್ಯದರ್ಶಿ) ಶ್ರೀಗಳಾದ ಬಿ. ವಿಶ್ವನಾಥ [illegible] (ಜತೆ ಕಾರ್ಯದರ್ಶಿಯರು) ಶ್ರೀ ಶಿವಾನಂದ ಕಾಮತ್ (ಕೋಶಾಧಿಕಾರಿ) ಯಾಗಿ [illegible] 20 ಮಂದಿ ಸದಸ್ಯರಿರುವ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಬಳಿಕ ಶ್ರೀಗಳಾದ ಎ. ಕೃಷ್ಣಶೆಟ್ಟಿ, ಕೆ. ಮೋನಪ್ಪ ಶೆಟ್ಟಿ, ಬಿ. ನಾರಾಯಣ ಮೊದಲಾದವರು ಮಜೂರರು ಸಂಘಟಿತರಾಗಿ ಈ ಕೇಳಿಕೆಗಳನ್ನು ಪಡೆಯುವ ಅವಶ್ಯಕತೆಗಳನ್ನು ವಿವರಿಸಿ ಭಾಷಣವಿತ್ತರು.

ಅಧ್ಯಕ್ಷ ಭಾಷಣ ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಪಂಚಾಯತ್ ಚುನಾವಣೆ

ಜಿಲ್ಲೆಯ ಹಲವು ಕಡೆ ಪಂಚಾಯತ್ ಬೋರ್ಡು ಚುನಾವಣೆಗಳು ನಡೆದಿವೆ. ಕಮ್ಯೂನಿಸ್ಟ್ ಪಾರ್ಟಿ ಮತ್ತು ರೈತ ಸಂಘಗಳ ಸಂಘಟನೆಗಳಿರುವಲ್ಲಿ ಇವು ಚುನಾವಣೆಯಲ್ಲಿ ಸ್ಪರ್ಧಿಸಿವೆ. ಸ್ಪರ್ಧಿಸಿದೆಡೆಗಳಲ್ಲಿ ಹೆಚ್ಚಿನ ಕಡೆಗಳಲ್ಲಿ ಜಯವನ್ನು ಪಡೆದಿವೆ.

● ಉಳ್ಳಾಲದ ಪೆರ್ಮನ್ನೂರು ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ರೈತ ಸಂಘದ ಎಲ್ಲ ಉಮೇದ್ವಾರರೂ (ಅಧ್ಯಕ್ಷ ಸಮೇತ) ಆರಿಸಿ ಬಂದಿದ್ದಾರೆ, ಮರೋಳಿ ಗ್ರಾಮದಲ್ಲಿ ಕಮ್ಯೂನಿಸ್ಟ್ ಮತ್ತು ಕಮ್ಯೂನಿಸ್ಟ್ ಹಿತ ಚಿಂತಕರು ಸರ್ವಾನುಮತದಿಂದ ಎಲ್ಲ ಸ್ಥಾನಗಳಲ್ಲಿಯೂ ಆರಿಸಿ ಬಂದಿದ್ದರು.

● ಬೆಳ್ತಂಗಡಿ ತಾಲೂಕು ಅಮ್ಟಾಡಿ ಗ್ರಾಮ ಪಂಚಾಯತ್‌ಗೆ ಕಮ್ಯೂನಿಸ್ಟ್ ಉಮೇದ್ವಾರರುಗಳಾದ ಬಿ. ಯಚ್. ಬಂಗೇರ, ಬಿ. ಅಮ್ಮುಶೆಟ್ಟಿ, ನೋಣಯ್ಯ ಬಂಗೇರ ಇವರು ಸದಸ್ಯರುಗಳಾಗಿ ಆರಿಸಿ ಬಂದಿದ್ದಾರೆ. ಕಮ್ಯೂನಿಸ್ಟ್ ಬೆಂಬಲದಿಂದ ಶ್ರೀ ರಘು ಶೆಟ್ಟಿಯವರೂ ಆರಿಸಲ್ಪಟ್ಟಿದ್ದಾರೆ, ಈ ಪಂಚಾಯತ್‌ನಲ್ಲಿ ಒಟ್ಟು ಸಂಖ್ಯೆ 7.

● ಮುಲ್ಕಿ ಪಂಚಾಯತ್ ಬೋರ್ಡಿಗೆ ನಡೆದ ಚುನಾವಣೆಯಲ್ಲಿ ರೈತ ಸಂಘದ ಹುರಿಯಾಳಾಗಿ ಸ್ಪರ್ಧಿಸಿದ್ದ ಶ್ರೀಗಳಾದ ಕೆ. ಉಗ್ಗಪ್ಪ ಮತ್ತು ಚಿನ್ನಯ್ಯ ಶೆಟ್ಟಿ ಇವರು ಸದಸ್ಯರಾಗಿ ಆರಿಸಲ್ಪಟ್ಟಿದ್ದಾರೆ.

● ಸಜಿಪ ಗ್ರಾಮ ಪಂಚಾಯತ್‌ಗೂ ರೈತ ಸಂಘದ ಇಬ್ಬರು ಸದಸ್ಯರು ಆರಿಸಿ ಬಂದಿದ್ದಾರೆ.

ನ್ಯಾಯ ಗೇಣಿ ನಿರ್ಣಯ

ಮದರಾಸು ನ್ಯಾಯ ಗೇಣಿ ನಿರ್ಣಯ ಕಾಯಿದೆಯಂತೆ ಗೇಣಿ ಕೋರ್ಟುಗಳಲ್ಲಿ ನಡೆಯುತ್ತಿರುವ ಗೇಣಿ ನಿರ್ಣಯದ ಅರ್ಜಿಗಳಲ್ಲಿ ಪ್ರಥಮವಾದ ತೀರ್ಮಾನವೊಂದು ಇತ್ತೀಚೆಗೆ ಪ್ರಕಟವಾಗಿದೆ.

ಮಂಗಳೂರು ತಹಶೀಲ್ದಾರರ ಕೋರ್ಟಿನಲ್ಲಿ ಉಳ್ಳಾಲದ ಪ್ರಸಿದ್ಧ ಜಮೀನ್ದಾರ್ ಶ್ರೀ ಹಾಜಿ ಯು. ಯಂ. ಇಬ್ರಾಹಿಮರ ಒಕ್ಕಲು ಶ್ರೀ ಮ್ಯೊಜಿ ಪೆರಾಂವ್ ಎಂಬವರು ತನ್ನ ಈಗಿನ ಗೇಣಿ ಹೆಚ್ಚೆಂದೂ ಆದುದರಿಂದ ಗೇಣಿಯನ್ನು ಕಡಿಮೆ ಮಾಡಬೇಕೆಂದೂ ಅರ್ಜಿ ಹಾಕಿದ್ದರು.

ಈ ಅರ್ಜಿಯು ವಿಚಾರಣೆ ನಡೆದು ಈಗಿರುವ 18 ಮುಡಿ ಗೇಣಿಯ ಬದಲು 14 ಮುಡಿ 2 ಕಳಸಿಗೆ ಗೇಣಿ ಎಂದು ತಹಶೀಲ್ದಾರರು ನಿಶ್ಚಯಿಸಿದ್ದಾರೆ 200 ಸೂಡಿ ಬೈಹುಲ್ಲಿನ ಬದಲು 1250 ಸೂಡಿ ಬೈಹುಲ್ಲೆಂದೂ ತೀರ್ಪು ಕೊಟ್ಟಿದ್ದಾರೆ.

ಈ ವಿವಾದದ ಒಂದು ವೈಶಿಷ್ಟ್ಯವೆಂದರೆ ಜಿಲ್ಲೆಯ ಪ್ರಸಿದ್ಧ ಪ್ರಜಾಸೋಷಿಯಲಿಸ್ಟ್ ಮುಖಂಡ ವಕೀಲ್ ಶ್ರೀ ಮೋಹನ ರಾಯರು ಭೂಮಾಲಕರ ಪರವಾಗಿ ಗೇಣಿ ಕಡಿಮೆಯಾಗಬಾರದೆಂದು ವಾದಿಸಿದ್ದು. ರೈತನ ಪರವಾಗಿ ಜಿಲ್ಲಾ ರೈತ ಸಂಘದ ಉಪಕಾರ್ಯದರ್ಶಿ ಶ್ರೀ ಬಿ. ಕೊರಗಪ್ಪ ರೈಯವರು ವಾದಿಸಿದ್ದರು.

ನಗರಸಭೆ ಆಡಳಿತೆ ಕೆಡಲು ಕಾರಣವೇನು ?

(೫ನೇ ಪುಟದಿಂದ)

ನೌಕರದಾರರನ್ನು ನೇಮಿಸಿಕೊಳ್ಳುವಾಗ ಅನುಭವ ಮತ್ತು ಸರ್ವಿಸಿಗೆ ಮಹತ್ವ ಕೊಡುವುದಿಲ್ಲ. ಸದಸ್ಯರ ಹಿತೈಷಿಗಳನ್ನು ನೇಮಿಸಲಾಗುತ್ತಿದೆ. ಆದ ಕಾರಣ ಮುನಿಸಿಪಾಲಿಟಿಯಲ್ಲಿ ಯೋಗ್ಯ ನೌಕರದಾರರು ಸಿಗುವುದು ಅತಿ ವಿರಳ.

ನೌಕರದಾರರಿಗೆ ರಜೆ ಕೊಡುವ ಪದ್ಧತಿಯಂತೂ ಅಸಹ್ಯವಾಗಿದೆ. ಸದಸ್ಯರ ಕಾಟದಿಂದಾಗಿ ಯಾವಾಗಲೂ ಅರ್ಧಕ್ಕಿಂತಲೂ ಹೆಚ್ಚು ನೌಕರದಾರರು ರಜೆಯ ಮೇಲಿರುತ್ತಾರೆ. ಸದಸ್ಯರ ಹಿತೈಷಿಗಳಿಗೆ ನೌಕರಿ ಕೊಡಿಸುವುದರ ಸಲುವಾಗಿ ಈ ರೀತಿ ಮಾಡಲಾಗುತ್ತಿದೆ. ಒಬ್ಬ ರಜೆಯ ವೇಳೆಯಲ್ಲಿ ನೌಕರಿಗೆ ಬರುವವರು, ರಜೆಯ ಮೇಲೆ ಹೋಗುವವರಿಗೆ ತಮ್ಮ ಪಗಾರದಲ್ಲಿ ಪಾಲು ಕೊಡಬೇಕಾಗುತ್ತದೆ. ಈ ಪದ್ಧತಿಯಿಂದ ಮುನಿಸಿಪಾಲಿಟಿಗೆ ಬಹಳ ಲುಕ್ಸಾನಾಗುತ್ತಿದೆ.

ಮುನಿಸಿಪಾಲಿಟಿಯಲ್ಲಿ ಎಲ್ಲಾ ಜವಾಬ್ದಾರಿ ಚೀಫ ಆಫೀಸರರ ಮೇಲಿರುತ್ತದೆ. ನೌಕರದಾರರ ಮೇಲೆ ಚೀಫ ಆಫೀಸರರ ಹಿಡಿತವಿಲ್ಲದಿದ್ದರೆ, ಪ್ರತಿಯೊಂದು ಖಾತೆಯನ್ನು ಚೀಫ ಆಫೀಸರರು ತಪಾಸಣೆ ಮಾಡದಿದ್ದರೆ, ಆಡಳಿತೆ ಸುಧಾರಣೆಯಾಗಲು ಸಾಧ್ಯವಿಲ್ಲ.

ನಗರ ಸಭೆಗಳಲ್ಲಿ ಅಧ್ಯಕ್ಷರೇ ಸರ್ವಾಧಿಕಾರಿ ಎಂಬ ಭಾವನೆ ಜನರಲ್ಲಿರುತ್ತದೆ. ಇದು ನಿಜ ಸಂಗತಿಯಲ್ಲ. ಅಧ್ಯಕ್ಷರು ಸರ್ವಾಧಿಕಾರಿ ಎಂದು ಕಂಡುಬಂದರೂ, ಬರೇ ಸರ್ವಾಧಿಕಾರಿ ಜನರಲ ಬಾಡಿ ಇರುತ್ತದೆ. ಅಧ್ಯಕ್ಷರು ಯಾವದೇ ಕೃತಿ ಮಾಡಿದರೂ ಜನರಲ ಬಾಡಿಯ ಮಂಜೂರಿ ಬೇಕಾಗುತ್ತದೆ. ಜನರಲ ಬಾಡಿಯವರು ಅಂದರೆ ಸದಸ್ಯರು ವಿಚಾರ ಮಾಡಿ, ಮಂಜೂರಿ ಕೊಡದಿದ್ದರೆ, ಅಧ್ಯಕ್ಷರು ಒಂದು ಕಲ್ಲಿನ ಮೂರ್ತಿಯಂತೆ ಕೂಡುವ ಪರಿಸ್ಥಿತಿ ಬರುತ್ತದೆ.

ಬಹುಮತ ಪಕ್ಷದವರು ಹೇಳಿದಂತೆ, ಅದು ಸರಿಯಿರಲಿ—ತಪ್ಪಿರಲಿ, ಆದರಂತೆ ಅಧ್ಯಕ್ಷರು ನಡೆಯಬೇಕಾಗುತ್ತದೆ. ಅಧ್ಯಕ್ಷರಿಗೆ ಸ್ವತಂತ್ರ ಅಧಿಕಾರವೇ ಇಲ್ಲವೆಂದರೆ ತಪ್ಪಾಗಲಿಕ್ಕಿಲ್ಲ. ಆದ ಕಾರಣ ಮುನಿಸಿಪಾಲಿಟಿಯಲ್ಲಿ ಪ್ರತಿಯೊಬ್ಬ ಸದಸ್ಯನೂ, ತನ್ನ ಸ್ವಂತ ಹಿತವನ್ನು ಮರೆತು, ನಾಗರಿಕ ಹಿತದೃಷ್ಟಿಯಿಂದ ವಿಚಾರ ಮಾಡಿದರೆ, ಮುನಿಸಿಪಾಲಿಟಿಯ ಆಡಳಿತೆಯಲ್ಲಿ ಸುಧಾರಣೆಯಾಗಲು ಸಾಧ್ಯ. ಇಲ್ಲವಾದರೆ, ಜಾತೀಯತೆ, ಲಂಚಗುಳಿತನ, ಹಿತೈಷಿಗಳಿಗೆ ಅನುಕೂಲತೆ ಮೊದಲಾದ ಕೆಟ್ಟ ಗುಣಗಳು ಮನೆಮಾಡಿ, ನಾಗರಿಕ ಹಿತಕ್ಕೆ ಅಡ್ಡಿ—ಆತಂಕಗಳನ್ನುಂಟುಮಾಡುತ್ತವೆ. ಇವುಗಳನ್ನೆಲ್ಲ. ನಾಶ ಮಾಡಿ ಆಡಳಿತೆ ಯೋಗ್ಯ ರೀತಿಯಲ್ಲಿ ನಡೆಯುವಂತೆ ಮಾಡುವ ಸಂಪೂರ್ಣ ಜವಾಬ್ದಾರಿ ಸದಸ್ಯರ ಮೇಲಿದೆ ಎಂದು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ.

ತಾ. 24-4-58ಕ್ಕೆ ಜರುಗಿದ ಚುನಾವಣೆಯಲ್ಲಿ ಹೊಸ ವರ್ಷದ ಅಧ್ಯಕ್ಷರಾಗಿ ಉತ್ಸಾಹೀ ತರುಣರಾದ ಶ್ರೀ ಎಸ್.ಎಸ್. ಸಾವಳಗಿಯವರು ಆರಿಸಿ ಬಂದಿದ್ದಾರೆ. ಹಿಂದಕ್ಕೆ ಮುನಿಸಿಪಾಲಿಟಿ ಹಣದ ದುರುಪಯೋಗಕ್ಕೆ ಕಾರಣೀಭೂತರಾದ ಕೆಲವು ಸದಸ್ಯರು ಇವರ ಪಾರ್ಟಿಯಲ್ಲಿರುವುದರಿಂದ, ಊರ ಜನರು ಈ ವರ್ಷದ ಆಡಳಿತೆ ಹೇಗೆ ನಡೆಯುತ್ತದೋ ಎಂದು ವಿವಂಚನೆಗೊಳಗಾಗಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ಊರಲ್ಲಿಯ ಸುಧಾರಣೆ ಯೋಗ್ಯ ರೀತಿಯಲ್ಲಿ ನಡೆದಿದ್ದು, ಈಗ ಮತ್ತೆ ಬಕಪಕ್ಷಿಗಳು ಮುನಿಸಿಪಾಲಿಟಿಯ ಖಜಾನೆಯನ್ನು ಎಲ್ಲಿ ಖಾಲಿ ಮಾಡುತ್ತಾರೋ ಎಂದು ಊರ ಜನರು ಚಿಂತೆಗೊಳಗಾಗಿದ್ದಾರೆ. ಶ್ರೀ ಸಾವರಗಿಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟ ನಂತರ, ಶ್ರೀ ಎನ್. ಕೆ. ಉಪಾಧ್ಯಾಯರು ವಿರೋಧ ಪಕ್ಷದ ಪರವಾಗಿ ಶ್ರೀ ಸಾವಳಗಿಯವರನ್ನು ಅಭಿನಂದಿಸಿದ್ದಲ್ಲದೆ, ಶ್ರೀಮತಿ ಕೊಡೆಕಲ್ಲರಂತೆಯೇ ಯೋಗ್ಯ ರೀತಿಯಲ್ಲಿ ಆಡಳಿತೆ ನಡೆಸಿಕೊಂಡುಹೋಗಬೇಕೆಂದು ಹೇಳಿ, ಮುನಿಸಿಪಾಲಿಟಿಯ ಹಣ ದುರುಪಯೋಗವಾದರೆ, ನಾಗರಿಕ ಹಿತಸಾಧನೆಯಾಗದಿದ್ದರೆ, ವಿರೋಧಿ ಪಕ್ಷದವರು ತಮ್ಮ ಸರ್ವ ಶಕ್ತಿಯನ್ನುಪಯೋಗಿಸಿ, ಅಂಥ ಕೃತಿಗಳನ್ನು ಬಲವಾಗಿ ವಿರೋಧಿಸುವುದಾಗಿ ಹೇಳಿದರು. ಯೋಗ್ಯ ಕೆಲಸಗಳಿಗೆ ವಿರೋಧ ಪಕ್ಷದವರು ಯಾವಾಗಲೂ ಅಧ್ಯಕ್ಷರಿಗೆ ಸಹಕಾರವನ್ನೀಯುವರೆಂದು ಭರವಸೆ ಕೊಟ್ಟರು.

ಎನ್. ಕೆ. ಉಪಾಧ್ಯಾಯ

ದೇವಿಕುಲಂ ಚುನಾವಣೆಗೆ ಸಹಾಯ

ದೇವಿಕುಲಂನಲ್ಲಿ ನಡೆಯಲಿರುವ ಉಪಚುನಾವಣೆಯ ಬಗ್ಗೆ ಕಮ್ಯೂನಿಸ್ಟ್ ಪಾರ್ಟಿಯ ಚುನಾವಣಾ ನಿಧಿಗೆ ಮಂಗಳೂರಿನ ಮಲೆಯಾಳಿ ಬಂಧುಗಳು ರೂ. 51ನ್ನು ಸಂಗ್ರಹಿಸಿ ಕಳುಹಿಸಿದ್ದಾರೆ.

ಬೆಂಗಳೂರು ಜಿಲ್ಲಾ ಕಮ್ಯೂನಿಸ್ಟ್ ಪಕ್ಷದ ನಗರ ಶಾಖೆಯ ಸದಸ್ಯರು ಚುನಾವಣಾ ನಿಧಿಗಾಗಿ 100 ರೂ.ಗಳನ್ನು ಕಳಿಸಿ ಕೊಟ್ಟಿದ್ದಾರೆ.

ಬೆಳಗಾವಿ ಜಿಲ್ಲೆ, ಸವಂದತ್ತಿ ತಾಲ್ಲೂಕಿನ ಶ್ರೀ ಶಂಕರ ಕಪ್ಪಣ್ಣನವರು ರೂ. 5ನ್ನು ಕಳಿಸಿದ್ದಾರೆ.

ದೊಡ್ಡ ಜವುಗು ಪ್ರಾಂತ್ಯ

(೫ನೇ ಪುಟದಿಂದ)

ಆ ದೊಡ್ಡ ಜವುಗು ಪ್ರಾಂತ್ಯ ನಿಜವಾಗಿಯೂ ಇನ್ನೂ ದೊಡ್ಡದಾದ ಜವುಗು ಪ್ರದೇಶವಾಗಿತ್ತು. ಬೆನ್ನು ಮುರಿದಂತಿದ್ದ ಹುಲ್ಲು ಗುಡಿಸಲುಗಳು ಬಾಗಿ ಬಿಳಿಯ ಮಂಜಿನಡಿಯಲ್ಲಿ ಅಡಗಿ ನಿಂತಿದ್ದವು. ನೀರು ತುಂಬಿಕೊಂಡು ಅದರ ಮಟ್ಟ ಇನ್ನೂ ಜಾಸ್ತಿಯಾಗಿತ್ತು. ನೀರಿನ ಮಟ್ಟ ಎಷ್ಟು ಏರಿತ್ತೆಂದರೆ ಒಂದಿಬ್ಬರು ಹಳ್ಳಿಗರು ತಮ್ಮ ಮನೆಯ ಬಾಗಿಲಲ್ಲೆ ಮೀನಿಗಾಗಿ ಬಲೆ ಒಡ್ಡಿದ್ದರು! ನೀರಿನಲ್ಲಿ ಅತ್ತಿತ್ತ ಹೊಯ್ದಾಡುವ ವಿಲ್ಲೋ ಗಿಡಗಳ ರೆಂಬೆಗಳು ಕುರ್ರೋ ಎಂದು ಅರಚುತ್ತಿದ್ದವು. ತಮ್ಮ ಮನೋಭಾವನೆಗಳನ್ನು ;ಹತ್ತಿಕ್ಕಿಡಲು ಆಗುತ್ತಿಲ್ಲವೇನೋ ಎಂಬುವಂತೆ ಗಲಗು ಮುಂತಾದವು ತಮ್ಮ ಕುಚ್ಚು-ಗೊಂಡೆಗಳನ್ನು ನೀರಿನ ಪಾತಳಿಯ ಮೇಲೆಯೂ ಎತ್ತಿ ಆಡುತ್ತಿದ್ದವು. ಆಕಾಶದಿಂದ ದೊಡ್ಡ ದೊಡ್ಡ ಮಳೆಯ ಹನಿಗಳು ಧಪ ಧಪನೆ ಬೀಳುತ್ತಿದ್ದವು. ದಟ್ಟವಾದ ಮಂಜು ಮತ್ತು ಮಳೆಯ ಹಿನ್ನೆಲೆಯಲ್ಲಿರುವ ಹೊಳೆಯ ದಡದ ಹಳ್ಳಿಯ ಚಿತ್ರವೊಂದರಂತೆ ಆ ದೃಶ್ಯ ಒಂದು ನಮೂನೆಯದ್ದಾಗಿತ್ತು.

ಅಸಮಧಾನ ಮನಸ್ಕರಾಗಿಯೇ ಅಧಿಕಾರಿಗಳು ಪರಿಶೀಲನೆ ನಡೆಸಿದರು. ಕ್ಷಣಕಾಲ ಅವರಲ್ಲಿ ದುಷ್ಟವಾದ, ದುರಂತಕಾರಿಯಾದ, ವಿನಾಶಕಾರಿಯಾದ ಭಾವನೆಯೊಂದು ಸುಳಿದು ಹೋಯಿತು. ಅದು ಅವರು ಶಿಬಿರದಲ್ಲಿ ಸುತ್ತಾಡಿ ನಡೆಸಿದುದರ ಫಲಿತಾಂಶ. ತಾವೊಂದು ದುರ್ಬಲ ಪರಿಸ್ಥಿತಿಯಲ್ಲಿರುವುದರಿಂದ ಈ ಕೆಟ್ಟ ಯೋಚನೆ ಅವರಿಗೆ ತಿಳಿಗೇಡಿತನದ್ದೆನಿಸಲಿಲ್ಲ. ಭಯಭೀತಿಗಳೂ ಅವರ ಮೇಲೆ ಪರಿಣಾಮ ಮಾಡಿದ್ದುವು. ತಮ್ಮ ಪಾಳೆಯಗಾರ ಪೂರ್ವಿಕರಿಂದ ಅವರ ನರ ನರಗಳಲ್ಲಿ ಹರಿದು ಬಂದಿದ್ದ ರಕ್ತ ಅತ್ಯಂತ ಚುರುಕಾಗಿ ಅವರಲ್ಲಿ ವರ್ಗಪ್ರಜ್ಞೆಯನ್ನು ಕೆರಳಿಸಿತ್ತು.

ದ್ವೇಷದಿಂದ ಕುದಿಯುತ್ತಿದ್ದ ಆ ಗುಲಾಮರು ಮೇಲೆದ್ದು ತಮ್ಮನ್ನು ಅದೇ ಜವುಗು ಪ್ರಾಂತ್ಯದಲ್ಲಿ ಮುಳುಗಿಸಿ ಬಿಡುವವರೆಗೆ ಆ ದಿಬ್ಬದ ಮೇಲೆ ಕೈಕಟ್ಟಿಕೊಂಡು ನಿಲ್ಲುವ ಹುಚ್ಚರೇನು ಅವರಾಗಿರಲಿಲ್ಲ. ಒಂದೇ ಹೊಡೆತದಲ್ಲಿ ಜೂಜಾಟದ ಗೆಲುವನ್ನು ಪಡೆಯಲು ಇಚ್ಛಿಸುತ್ತಿದ್ದರು.

"ನೋಡಿದಾ ಈ ಸ್ಥಿತಿಯನ್ನು? ಈಗ ಅವರು, ಇಲ್ಲವೆ ನಾವು......"

"ಮೊದಲು ಆ ಇಬ್ಬರು ಶಿಬಿರಾಧಿಪತಿಗಳನ್ನು ನಾವು ಕೊಂದು ಹಾಕೋಣವೇನು?"

"ಅಗತ್ಯವೆನಿಸಿದರೆ ಇಡೀ ೯೦೦ ಜನರನ್ನೇ ಮುಗಿಸಿ ಬಿಡೋಣ!" ಮೊದಲನೆಯ ಅಧಿಕಾರಿ ತನ್ನ ಬಲಗೈಯನ್ನು ಜೋರಾಗಿ ಬೀಸುತ್ತ ನಿರ್ಧಾರಾತ್ಮಕ ಗಡಸು ಧ್ವನಿಯಲ್ಲಿ ರೋಷದಿಂದ ಅರಚಿದ: "ಜೀವಸಹಿತವಾಗಿ ಅವರನ್ನು ಹೂಳೋಣ."

"ನಮಗಾರು ಕುಣಿ ತೋಡುತ್ತಾರೆ?" ಹೀಗೆ ನುಡಿದ ಇನ್ನೊಬ್ಬ ಅಧಿಕಾರಿಯ ಧ್ವನಿಯಲ್ಲಿ ಆಶ್ಚರ್ಯವೇನಿರಲಿಲ್ಲ. ತಮ್ಮ ಕಾರ್ಯಕ್ರಮದ ಕುರಿತು ಆತ ಚರ್ಚಿಸುತ್ತಿದ್ದ, ಅಷ್ಟೆ. ಆತನ ಕ್ರೂರ ಧ್ವನಿಯಲ್ಲಿ ಭಯಂಕರ ಸ್ಪರ್ಧೆ ನುಡಿಗೊಡುತ್ತಿತ್ತು.

"ಮಂಜು ಮುಸುಕಿದ ಈ ನೀರಿನ ವಿಸ್ತಾರವಾದ ಪ್ರದೇಶವೆಯಾಕೆ ಕುಣಿ ಆಗಬಾರದು?" ತಮ್ಮೆಡಿಯಲ್ಲಿ ವಿಸ್ತರಿಸಿ ನಿಂತಿದ್ದ ದೊಡ್ಡ ನೀರಿನ ಪ್ರದೇಶವನ್ನು ನೋಡುತ್ತ ಮೊದಲ ಅಧಿಕಾರಿ ತೃಪ್ತಿಯಿಂದ ಮುಗುಳ್ನಕ್ಕ. ಆದರೆ ಮುಂದೆ ಆತನ ಮುಗುಳ್ನಗೆ ಬಾಡಿ ಮುಖ ಹಿಂದೆಂದೂ ಇಲ್ಲದಷ್ಟು ಕಪ್ಪಾಯಿತು. ಸಿಟ್ಟಿನ ರಭಸದಲ್ಲಿ ತುಟಿಗಳನ್ನು ಕಚ್ಚುತ್ತ ಸಣ್ಣ ಧ್ವನಿಯಲ್ಲಿ ತನ್ನ ಜೊತೆಗಾರರನ್ನು ಕೇಳಿದ:

"ಅವರಲ್ಲಿ ನಮಗೆ ನಿಷ್ಠರಾದವರು ಎಷ್ಟು ಜನರಿರುವರು?"

ಹ! ನಿಷ್ಠರು? ಒಬ್ಬರೂ ಇಲ್ಲ! ಇವರು ಅವರ ಜನರಾಗಿರಲಿಲ್ಲ. ಚೆನ್ ದೊರೆ ಬೇರೆ ರಾಜ್ಯಗಳ ಆಧಿಪತ್ಯ ನಡೆಸುತ್ತಿದ್ದಾಗಲೂ ಕೂಡ ಶ್ರೀಮಂತ-ಭೂಸ್ವಾಮಿಗಳ ವರ್ಗದ ಸೈನಿಕರು ಸಾಕಷ್ಟು ಜನರಿರಲಿಲ್ಲ. ಕೆಲವು ಜನ ಕದನಕಲಿಗಳು ದಂಡನಾಯಕ ಮೆನ್‌ಟೀನ್‌ನೊಡನೆಯೇ ಸತ್ತು ಹೋಗಿದ್ದರು. ಈಗ ಶಿಬಿರಾಧಿಪತಿಗಳ ಸ್ಥಳಗಳಿಗೂ ಗುಲಾಮರನ್ನೇ ಆಯ್ದುಕೊಳ್ಳಬೇಕಾಗಿತ್ತು. ಹೀಗಾಗಿ ಅವರು ಎದುರಿಸಬೇಕಾಗಿದ್ದ ಪರಿಸ್ಥಿತಿ ತುಂಬಾ ಅಪಾಯಕಾರಿಯಾಗಿತ್ತು.

"ಸಾಮ್ರಾಟನ ಹತ್ತಿರ ಸೈನಿಕರ ಬದಲು ಪಂಜರದ ಸೈನಿಕ ಗುಲಾಮರಿರಕೂಡದು!" ಎರಡನೆಯ ಅಧಿಕಾರಿ ಕೋಪದಿಂದ ಕನಲಿದ. ಅವನಿಗೆ ತಕ್ಷಣವೇ ಹೊಳೆಯಿತು—ಎಂದೂ ಮರಳಿಬಾರದಿರುವದಕ್ಕಾಗಿ ತಮ್ಮ ತಾತ ಮುತ್ತಾತರಕಾಲದ ಸುವರ್ಣಯುಗ ಗತಿಸಿ ಹೋಗಿದೆಯೆಂದು!

"ಸತ್ಯವಾಗಿಯೂ ಇರಲೇ ಕೂಡದು! ಪ್ರಭು ಷಾಂಗ್‌ರ ಸುಧಾರಣೆಗಳ ಕಾಲದಿಂದಲೂ ನಮ್ಮ ಪೂರ್ವಿಕರು ನಮ್ಮ ದೇಶವನ್ನು ತಮ್ಮ ಈಟಿ, ಭಲ್ಲೆ, ಢಾಲುಗಳಿಂದಲೇ ರಕ್ಷಿಸಿದ್ದಾರೆ. ಸೈನಿಕ ವೃತ್ತಿ ಅತ್ಯಂತ ವೈಭವದ ವೃತ್ತಿ. ಗುಲಾಮರಿಂದ ಈ ವೃತ್ತಿಗೆ ಕಲಂಕಬಾರದಿನ್ನೇನು? ಪ್ರಥಮ ಸಾಮ್ರಾಟ ಸ್ವರ್ಗವಾಸಿಯಾದಂದಿನಿಂದ (ಅಲ್ಲಿಂದ) ಯಾವ ಆಜ್ಞೆಗಳೂ ಇಲ್ಲ. ಗುಲಾಮರಿಗೆ ಶಸ್ತ್ರಾಸ್ತ್ರಗಳನ್ನು ಕೊಟ್ಟ ಯೋಜನೆ ಅವಿಶ್ವಾಸ ದ್ರೋಹಿ ಸಚಿವ ಚೌವೊತಾವೋ ಅವನದು. ಅವನ ತಂದೆಗಳಿಬ್ಬರೂ ಗುಲಾಮರೇ ಆಗಿದ್ದರು!"

"ನಮ್ಮ ನೂತನ ಸಾಮ್ರಾಟ ಖಡ್ಗವನ್ನು ಅಲುಗಿನಿಂದಲೇ (ಅವರ ಬಾಯಿಂದಲೇ) ಹಿಡಿದಿದ್ದಾನೆ. ಬೇರೆಯವರು ಇನ್ನು ಅದರ ಹಿಡಿಕೆಗಳನ್ನು ಮಾತ್ರ ಹಿಡಿಯಲಿ!"

ರಾಜ ಸಭೆಯಿಂದ ತುಂಬಾ ದೂರಿರುವ ಮಣ್ಣು ದಿಬ್ಬ ಒಂದರಮೇಲೆ ನಿಂತಿದ್ದರೆಂದೇ ಆ ಅಧಿಕಾರಿಗಳಿಬ್ಬರೂ ಅಷ್ಟು ಧೈರ್ಯದಿಂದ ಮಾತನಾಡಲು ಶಕ್ತರಾಗಿದ್ದರು! ಆದರೆ ಅವರು ಹೀಗೆ ಮಾತನಾಡಿದಂತೆ ಅವರ ಧೈರ್ಯವೆಲ್ಲ ಉಡುಗಿ ಹೋಗುತ್ತಿತ್ತು. ಮತ್ತೆ ಗಾಳಿ ಜೋರಾಗಿ ಬೀಸತೊಡಗಿತ್ತು. ಅವರು ಧರಿಸಿದ ಹಸುವಿನ ಚರ್ಮದ ಕೋಯ್ದಿದ್ದ ಚಿಲಖತ್ತು (ಕವಚ) ಯಾವಾಗಲೂ ತಣ್ಣಗಿರುತ್ತಿತ್ತು. ಈಗ ಗಾಳಿಯೂ ಆ ಶೈತದೊಂದಿಗೆ ಸೇರಿಕೊಂಡಾಗ ಆ ಛಳಿ ಅವರ ಮೂಳೆಗಳವರೆಗೂ ಛೇದಿಸಿಕೊಂಡು ಹೋಗುವಂತಾಯಿತು ಅಧಿಕಾರಿಗಳಿಬ್ಬರೂ ಮೌನವಾಗಿ ಒಬ್ಬರನ್ನೊಬ್ಬರು ನೋಡಿದರು. ನಿಸ್ಸಹಾಯವಾದ, ವಿಷಣ್ಣತೆ ಆವರಿಸಿದ ಮುಖಗಳಿಗೆ ಉಪಶಮನ ದೊರತೀತೆಂದು ಮಳೆಗೆದುರಾಗಿ ಮುಖ ಮೇಲಕ್ಕೆ ಮಾಡಿ ನಿಂತರು. ಮನೆಯಿಂದ ಅವರೆಷ್ಟು ದೂರಿದ್ದರು? ಅವರಿಗೆ ಕಾಣುತ್ತಿದ್ದುದು ಅನಂತ ಅಪಾರವಾದ ಮೋಡಗಳಿಂದ ತುಂಬಿದ ಆಕಾಶ, ದೂರದವರೆಗೂ ಹರಡಿಕೊಂಡು ಉತ್ತರವಾಗಿ ನಿಂತಿದ್ದ ಪರ್ವತಗಳು. ದೂರ ಪೂರ್ವದಲ್ಲಿ ರಾಜಧಾನಿಯಾದ ಷೀಯಾಂಗ್ ಇದೆ. ಅಲ್ಲಿಯ ಪರಿಸ್ಥಿತಿಯು ಹೇಗಿದೆಯೊ? ಅಲ್ಲಿರುವ ರಾಜ್ಯ ರಕ್ಷಕರು ಹಿಂದಿನ ಸಾಮ್ರಾಟನ ನಿಷ್ಠಾವಂತರಾದ ಸೇನಾ ಯೋಧರೆಂದು ಸಿದ್ಧಮಾಡಿ ಕೊಟ್ಟವರು. ಆದರೆ ಅಲ್ಲೂ ಗುಲಾಮರ ಪ್ರವಾಹವೇನು ಚಿಕ್ಕದಾಗಿಯೆ? ಈ ದೊಡ್ಡ ಜವುಗು ಪ್ರಾತ್ಯದಂತೆಯೇ ಷಿಯಾಂಗ್ ಕೂಡ ಉಬ್ಬಿ ಉಬ್ಬಿ ತುಂಬಿ ತುಂಬಿ ಹರಿಯುತ್ತಿರಬೇಕು.

ಂ ಂ ಂ ಂ

ಅಧಿಕಾರಿಗಳಿಬ್ಬರೂ ತಮ್ಮ ಡೇರೆಗಳಿಗೆ ಮರಳಿದರು. ಅವರು ತುಂಬಾ ವ್ಯಾಕುಲ ಚಿತ್ತರಾಗಿ ಬಳಲಿ ಹೋಗಿದ್ದರು. ಇಷ್ಟರಲ್ಲೇ ಕಡಿದುಕೊಂಡು ಅಪ್ಪಳಿಸಿ ಬಿದ್ದು ಹೋಗುವ ಅವರ ವರ್ಗದ ನೆರಳು ಪ್ರೇತವಸ್ತ್ರದಂತೆ ಅವರ ಮುಖಗಳನ್ನಾವರಿಸಿತು. ಕಗ್ಗೊಲೆಯ ಕದನಕ್ಕಾಗಿಯೋ ಅವರೀಗ ಸಿದ್ಧರಾಗಿದ್ದರೆನ್ನುವುದರಲ್ಲಿ ಸಂದೇಹವಿರಲಿಲ್ಲ. ಆದರೆ ಶಕ್ತ ವಿಚಾರ್ತರಾಗಿ ತಾವು ಸಾಯುವಂತೆ ತಮಗೆ ಪೆಟ್ಟುಕೊಡುವ ಮೊದಲು ಅವನನ್ನು ಸಾಕಪಡಿಸುವುದೆಂತು?

—ಮೊದಲು ಆ ಇಬ್ಬರು ಶಿಬಿರಾಧಿಪತಿಗಳನ್ನುಕೊಲ್ಲೋಣ?

—ಇನ್ನುಳಿದ ೯೦೦ ಜನರನ್ನೇನು ಮಾಡುವುದು?

—ಅವರಲ್ಲಿ ಅರ್ಧದಷ್ಟು ಜನರನ್ನು ಗದರಿಸಿ ಸುಮ್ಮನಿರಿಸಬಹುದು ಇಲ್ಲವೆ ಲಂಚಕೊಟ್ಟು ನಮ್ಮೆಡೆಗೆ ಎಳೆದು ಕೊಳ್ಳಬಹುದು.

—ಅವರೆಲ್ಲರ ಶಸ್ತ್ರಾಸ್ತ್ರಗಳನ್ನು ಕಸಿದುಕೊಂಡು ಬೆಂಕಿಗಿಕ್ಕಬೇಕು.

ಪರಸ್ಪರ ದೃಷ್ಟಿ ವಿನಿಮಯದಲ್ಲೇ ಹೀಗೆ ಅವರು ಯೋಚಿಸಿದರು. ಪಶ್ಚಾತ್ತನೆ ಅವರು ಮಹಾಧ್ವನಿಯ ಆರ್ಭಟೆಗಳನ್ನು ಕೇಳಿದರು:

"ನಾವು ಇಲ್ಲಿಯೇ ಉಳಿದರೆ, ಸತ್ತು ಹೋಗುತ್ತೇವೆ. ಯೂಯಾಂಗಿಗೆ ಹೋದರೂ ಕೊಂಚ ತಡಮಾಡಿ—ಅಲ್ಲಿ ಕೂಡಾ ಸಾಯುತ್ತೇವೆ. ಆದರೆ ನಾವೆಲ್ಲ ಸೇರಿಕೊಂಡು ಒಟ್ಟಾಗಿ ಕೆಲಸಮಾಡಿದರೆ ಎಲ್ಲರೂ ಬದಕುತ್ತೇವೆ. ಅಧಿಕಾರಿಗಳೆ?--ಸಾಯುವಷ್ಟು ಕುಡಿದು ಬಿದ್ದಿರಲಿ ಅವರು ತಮ್ಮ ಪಾಡಿಗೆ!"

ಅಲ್ಲಿ ಅನೇಕ ಧ್ವನಿಗಳ ಗದ್ದಲ, ತಾಕಲಾಟ, ಅಣಕದ ಗಟ್ಟಿನಗೆಯ ಅಬ್ಬರ ಪ್ರತಿಧ್ವನಿಗೊಡುತ್ತಿತ್ತು.

ಅಧಿಕಾರಿಗಳು ನಿಸ್ತೇಜರಾದರು, ಅವರ ತುಟಿಗಳು ಕಂಪಿಸಿದವು, ಅವರ ಮುಖಚರ್ಯೆ ಬದಲಾಯಿಸಿತು. ತುಟಿಗಳನ್ನು ಕಚ್ಚುತ್ತ, ಹುಬ್ಬುಗಳನ್ನು ಮೇಲೇರಿಸುತ್ತ ನಿಂತು ಆಳುವ ವರ್ಗದ ಆ ಅಧಿಕಾರಿಗಳಲ್ಲಿ ಕೊಲೆಪಾತಕಿಯ ಕೋಪ ಕುದಿಯತೊಡಗಿತ್ತು. ಆದರೆ ಅವರು ಪ್ರತ್ಯಕ್ಷ ಕಾರ್ಯಕ್ಕಿಳಿಯುವ ನಿರ್ಧಾರಕ್ಕೆ ಒಂದು ಕ್ರಮ ಕೈಕೊಳ್ಳುವ ಮೊದಲು ಜೋರಾಗಿ ಬೀಸಿದ ಬಿರುಗಾಳಿಯ ರಭಸಕ್ಕೆ ಅವರ ಡೇರೆಯ ಹೊದಿಕೆ ಕಿತ್ತುಹೋಗಿ, ಚೀರಾಟ ಕೂಗಾಟಗಳಲ್ಲಿ ತೊಡಗಿದ್ದ ಗುಲಾಮ(ಸೈನಿಕ) ಸಮೂಹದೆದುರು ಅಧಿಕಾರಿಗಳ ಪ್ರದರ್ಶನವಾಯಿತು. ಘರ್ಷಣೆ ಇನ್ನೂ ತಡವಾಗಕೂಡದು.! ವಿಕ್ಷೋಭೆಯಿಂದ ಕಂಪಿಸುತ್ತಿದ್ದ ಗುಲಾಮ ಸೈನಿಕರಿಗೂ ಅಧಿಕಾರಿಗಳನ್ನು ಡೇರೆಯಲ್ಲಿ ನೋಡಿದಾಗ ಮೇಲಿನ ನುಡಿಯೇ ಸರಿಯೆನಿಸಿತು. ಘರ್ಷಣೆ ಇನ್ನು ತಡವಾಗಕೂಡದು ನಿಜ! ಕೋಪದಿಂದ ರಕ್ತವರ್ಣಕ್ಕೆ ತಿರುಗಿದ್ದ ಮುಖಗಳ ಅಧಿಕಾರಿಗಳು ಉರಿಗಣ್ಣಿನಿಂದ ಅವರನ್ನೇ ನೋಡುತ್ತ ನಿಂತರು. ಆದರೆ ಅಲ್ಲಿ ಇದ್ದವರು ಮಾತ್ರ ತಾವಿಬ್ಬರೇ!

"ಶಿಬಿರದಲ್ಲಿ ಒದರಾಟವನ್ನು ನಿರ್ಬಂಧಿಸಲಾಗಿವೆ. ಶಿಬಿರಾಧಿಪತಿಗಳೇ ದಂಗೆಕೋರರನ್ನು ಬಂಧಿಸಿರಿ!" ಅಧಿಕಾರಿಯೊಬ್ಬ ತನ್ನ ಒರೆಯಿಂದ ಖಡ್ಗವನ್ನು ಹಿರಿಯುತ್ತ ಅಜ್ಞಾಪಿಸಿದ. ಶಿಬಿರಾಧಿಪತಿಗಳಲೊಬ್ಬನಾದ ; ವೂಕೂಂಗ್‌ನ ಬಳಿ ಆ ಅಧಿಕಾರಿ ನುಗ್ಗಿದ.

ಪಂಜರದ ಸೈನಿಕರ ಕುದಿಯುತ್ತಿರುವ ಕೋಪದ ಪ್ರದರ್ಶನದ ಜವಾಬಿನಿಂದ ಅಧಿಕಾರಿಗಳ ಡೇರೆ ತತ್ತರಿಸಿ,ನಡುಗಿತು. ಆ ಸಶಸ್ತ್ರ ಗುಲಾಮರೂ ಅವರ ಆಜ್ಞೆಗಳನ್ನು ಪಾಲಿಸಲಿಲ್ಲ! ಬಹು ದೊಡ್ಡ ಕರಡಿಯಂತೆ ವೂಕೂಂಗ್ ಧಾವಿಸಿ ಅಧಿಕಾರಿಯ ಖಡ್ಗವನ್ನು ಕಿತ್ತುಕೊಂಡು ಅವನ ಸೊಂಟದಲ್ಲಿ ತಿವಿದ. ಉನ್ಮತ್ತರಾದ ಪಂಜರದ ಸೈನಿಕರು ಇನ್ನೊಬ್ಬ ಅಧಿಕಾರಿಯನ್ನು ಮುತ್ತಿ ಅವನ ಬಿಗಿದ ಬಾಯಿಯಿಂದ ನೊರೆ ಕೊಂಚವೇ ಪಾರಾಗುವ ಮೊದಲು ಅವನನ್ನು ಬಡಿದೇ ನೆಲಕ್ಕೆ ಕೆಡವಿದರು.

ಗುಲಾಮರು ಕತ್ತರಿಸಿ ಹಾಕಿದ ಬೇಡಿಗಳ ಘಟ್ ಘಟ್ ಶಬ್ದ ಕಾಡಿನ ಬೆಂಕಿಯಂತೆ ಶಿಬಿರದಿಂದ ಶಿಬಿರಕ್ಕೆ ಹಬ್ಬಿತು. ಪ್ರಥಮ ಸಾಮ್ರಾಟ ಚಿನ್ ಪ್ರಭುತ್ವ ನಡೆಸಿದ್ದ ರಾಜ್ಯದ ಎಲ್ಲಾ ಗ್ರಾಮಗಳಲ್ಲಿ, ಪ್ರದೇಶಗಳಲ್ಲಿ, ಈ ಜವುಗು ಪ್ರಾಂತ್ಯದಲ್ಲಾದ ಸಿಡಿತದಿಂದ, ಆ ಸ್ಫೋಟನೆಯಿಂದ ಬಂದೆಗಲ್ಲು ಒಡೆದು ಹೋದಂತಾಯಿತು.

(ಕೊನೇ ಪುಟ ನೋಡಿ)

ಪ್ರಜಾಪ್ರಭುತ್ವ ತತ್ವಗಳಿಗೆ ವಿರೋಧವಾದ
ಗ್ರಾಮಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆಗಳ ಮಸೂದೆ

(ಮೊದಲನೇ ಪುಟದಿಂದ)

ನಕ್ಕೆ ಅನುವಾಗಿ ಕೊಡುವುದರಿಂದ, ಹಿಂದೆ ಇದ್ದಂತೆ ಮುಂದೆಯೂ ಸಹ ಗ್ರಾಮ ಪಂಚಾಯಿತ್ತಿಗಳು ಸಾಕಷ್ಟು ಆದಾಯವಿಲ್ಲದೆ ನಿಷ್ಕ್ರಿಯವಾಗುತ್ತವೆ. ಆದ್ದರಿಂದಾಗಿ ಭೂಕಂದಾಯದ ಸಂಪೂರ್ಣ ವರಮಾನವನ್ನು ಗ್ರಾಮ ಪಂಚಾಯ್ತಿಗಳಿಗೇ ವಹಿಸಿಕೊಡುವುದು ಅಗತ್ಯ. ಈಗ ಮಸೂದೆಯಲ್ಲಿರುವಂತೆ ಗ್ರಾಮ ಪಂಚಾಯ್ತಿ ತನ್ನ ಪ್ರತಿಯೊಂದು ಕಾರ್ಯಕ್ಕೂ ಸಹ ಡೆಪ್ಯೂಟಿ ಕಮಿಷನರರ ಒಪ್ಪಿಗೆ ಪಡೆಯಬೇಕಾಗಿದೆ. ಸರಕಾರದಿಂದ ನಿಯಮಿತವಾಗುವ ಪಂಚಾಯ್ತಿ ಕಾರ್ಯದರ್ಶಿಯ ಮೇಲೆ ಪಂಚಾಯ್ತಿಗೆ ಯಾವ ಅಧಿಕಾರವೂ ಇಲ್ಲ. ಹೀಗೆ ಅಧಿಕಾರವೇ ಇಲ್ಲದ ಗ್ರಾಮ ಪಂಚಾಯ್ತಿಯು ಕೇವಲ ತೆರಿಗೆ ವಿಧಿಸುವ ಮತ್ತು ವಸೂಲಿ ಮಾಡುವ ಸಂಸ್ಥೆಯಾಗುತ್ತದೆ ಅಷ್ಟೆ.

ಪ್ರಜಾಪ್ರಭುತ್ವದ ಅವಹೇಳನ

ಪಂಚಾಯ್ತಿಗಳ ಮೇಲೆ ಡೆಪ್ಯೂಟಿ ಕಮಿಷನ್‌ರರಿಗೆ ಇರುವ ಅಧಿಕಾರ ಸರ್ವಾಧಿಕಾರವನ್ನು ಮೀರಿದಂಥದ್ದಾಗಿದೆ. ಅವರು ತಮಗೆ ಸರಿಯೆಂದು ತೋರಿದ್ದಲ್ಲಿ, ಅದು ಅಸಮರ್ಪಕವಾಗಿದೆ, ಕೆಲಸಮಾಡುತ್ತಿಲ್ಲವೆಂದಲ್ಲಿ, ಅಥವಾ ಏನಾದರೂ ಜಗಳವಿದೆಯೆಂದು ಕಂಡು ಬಂದಲ್ಲಿ ಪಂಚಾಯ್ತಿಯ ಯಾರಾದರೂ ಸದಸ್ಯರು ಅಸಮರ್ಥರೆಂದು ಕಂಡುಬಂದಲ್ಲಿ ತೆಗೆದುಹಾಕಬಹುದು. ಪಂಚಾಯ್ತಿಯ ತೀರ್ಮಾನಗಳನ್ನು ತಿರಸ್ಕರಿಸಬಹುದು. ಚುನಾಯಿತ ಮಂಡಲವನ್ನು ಜನತೆಯ ತೀರ್ಮಾನವಿಲ್ಲದೆ ಅಧಿಕಾರಿಯೊಬ್ಬರು ಕಿತ್ತು ಹಾಕುವುದು ಪ್ರಜಾಪ್ರಭುತ್ವದ ಅವಹೇಳನವೇ ಸರಿ. ಅಲ್ಲದೆ ಅಸಮರ್ಥನೆಂದು ಕಂಡು ಬಂದ ಯಾವುದೇ ಸದಸ್ಯನನ್ನು ತೆಗೆದು ಹಾಕುವುದರ ಉದ್ದೇಶವೇನು ಎಂದು ತಿಳಿಯದಿದೆ. ಏಕೆಂದರೆ ಪಂಚಾಯ್ತಿ ಸದಸ್ಯರ ಮೇಲೆ ಕಾರ್ಯ ನಿರ್ವಹಣೆಯ ಜವಾಬುದಾರಿಯೇನಿಲ್ಲ. ಅವರು ಸಭೆಗಳಿಗೆ ಮಾತ್ರ ಹಾಜರಾಗುತ್ತಾರೆ ಅಷ್ಟೆ. ಈ ರೀತಿಯಲ್ಲಿ ಡೆಪ್ಯೂಟಿ ಕಮಿಶನರರಿಗೆ ಅವ್ಯಾಹತವಾದ ಸರ್ವಾಧಿಕಾರವಿರುವುದು, ಪಂಚಾಯ್ತಿಗಳ ಪ್ರಜಾಪ್ರಭುತ್ವ ಅಸ್ತಿತ್ವಕ್ಕೇ ಧಕ್ಕೆ ತರುತ್ತದೆ.

ತಾಲ್ಲೂಕು ಬೋರ್ಡುಗಳ ಕರ್ತವ್ಯ

ತಾಲ್ಲೂಕು ಬೋರ್ಡುಗಳ ಕೇವಲ ಮೇಲುಸ್ತುವಾರಿ ಸಲಹಾಸಮಿತಿಯಾಗಿರುತ್ತದೆ. ಪಂಚಾಯಿಯ ವ್ಯವಹಾರವನ್ನು ಗಮನಿಸುತ್ತದೆ. ತಾಲ್ಲೂಕಿನ ಎಲ್ಲ ಪ್ರದೇಶಗಳ ಏಕ ಪ್ರಕಾರವಾದ ಬೆಳವಣಿಗೆಯ ಭರವಸೆಯನ್ನು ತಾಲ್ಲೂಕು ಬೋರ್ಡುಗಳು ಕೊಡುವುದಿಲ್ಲ.

ತೆರಿಗೆ ವಿಧಿಸುವ ಅಪ್ರಿಯ ಕಾರ್ಯವನ್ನು ಪಂಚಾಯ್ತಿಗೆ ವಹಿಸಿದ್ದು, ತಾಲ್ಲೂಕು ಬೋರ್ಡು ಸದಸ್ಯರು ಯಾವ ಜವಾಬುದಾರಿಯೂ ಇಲ್ಲದಿರುತ್ತಾರೆ. ಎಲ್ಲ ಪ್ರದೇಶಗಳ ಏಕಪ್ರಕಾರವಾದ ಬೆಳವಣಿಗೆಯ ಜವಾಬುದಾರಿ ಇಲ್ಲದಿರುವುದರಿಂದ ಪ್ರಭಾವಯುತರಾದ ಸದಸ್ಯರು ಅದನ್ನು ದುರುಪಯೋಗಪಡಿಸಿಕೊಳ್ಳಲು ಅವಕಾಶವಿದೆ. ಹಿಂದುಳಿದ ಪ್ರದೇಶ ಹಾಗೆಯೇ ಉಳಿದಿರಲು ಹೆಚ್ಚು ಅವಕಾಶವಿದೆ.

ಜಿಲ್ಲಾ ಅಭಿವೃದ್ಧಿ ಸಮಿತಿಗಳು ಶಾಸನಸಭಾ ಸದಸ್ಯರು ಮತ್ತು ಇತರ ನಾಮಕರಣ ಮಾಡಲ್ಪಟ್ಟ ಸದಸ್ಯರುಗಳಿಂದ ಕೂಡಿರುವುದರಿಂದ, ಅದು ಹೆಚ್ಚೆನಮಟ್ಟಿಗೆ ಸಲಹಾ ಸಮಿತಿಯಾಗಿ ಇರುತ್ತದೆ.

ಯೋಜನೆಯ ಅಭಿವೃದ್ಧಿ ಕಾರ್ಯಗಳಿಗಾಗಲೀ, ಸುಧಾರಣೆಗಳನ್ನು ತರುವುದರಲ್ಲಾಗಲೀ ಸಂಬಂಧವಿರದಂತಹ ಸ್ಥಳೀಯ ಸಂಸ್ಥೆಗಳನ್ನು ರಚಿಸುವ ಮೈಸೂರು ಸರಕಾರದ ಪ್ರಸಕ್ತ ಮಸೂದೆ ನಿರರ್ಥಕವಾದುದಾಗಿದೆ. ಪ್ರಜಾಪ್ರಭುತ್ವದ ಎಲ್ಲ ತತ್ವಗಳನ್ನೂ ಗಾಳಿಗೆ ತೂರುವ ಈ ಮಸೂದೆಯನ್ನು ತೀವ್ರವಾ. ವಿರೋಧಿಸುವುದಗತ್ಯ.

ವಿಧಾನಸಭೆಯಲ್ಲಿ ಮಸೂದೆಯಮೇಲೆ ಚರ್ಚೆ ಅಪೂರ್ಣವಾಗಿ ನಡೆದಿದೆ. ಅಷ್ಟರಲ್ಲೇ ನಿಜಲಿಂಗಪ್ಪನವರ ಮಂತ್ರಿಮಂಡಲ ಉರುಳಿದೆ. ಮುಂದೆ ಅಧಿಕಾರಕ್ಕೆ ಬರುವ ಮಂತ್ರಿಮಂಡಲ ಈ ಮಸೂದೆಯನ್ನು ಹಿಂತೆಗೆದುಕೊಂಡು, ಸಮಗ್ರವಾದ ಪುರೋಗಾಮಿ ಮಸೂದೆಯನ್ನು ಮಂಡಿಸಲಿ.

ಓದುಗರ ಓಲೆ

ಕುಣಿಗಲ್ ಪೋಲೀಸರ ಕರ್ತವ್ಯ ?

ಕುಣಿಗಲ್ ಪೋಲೀಸರು; ಈ ಮಧ್ಯದಾರಿಯಲ್ಲಿ ತಿರುಗುವ ರೈತರನ್ನು ಪೋಲೀಸ್‌ಸ್ಟೇಷನ್ನಿಗೆ ಕರೆದುಕೊಂಡುಹೋಗಿ, ಈ ರೀತಿ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. 1) ನೀವು ಕುಣಿಗಲ್ ತಾಲ್ಲೂಕು ರೈತ ಸಂಘದ ಸದಸ್ಯರಾಗಿದ್ದೀರಾ? 2) ಕಮ್ಯೂನಿಸ್ಟ್ ಪಾರ್ಟಿ ಸದಸ್ಯರಾಗಿದ್ದೀರಾ? ರೈತ ಸಂಘ ಮತ್ತು ಪಾರ್ಟಿ ಚಟುವಟಿಕೆಗಳೇನು? ನಿಮ್ಮ ಹೆಸರೇನು? ಜಾತಿ? ವಯಸ್ಸು? ಬಂಧುಬಳಗ ಯಾರು? ಈ ರೀತಿಯಾಗಿ ಕೇಳಿ ಇದಕ್ಕೆ ಸಹಿಹಾಕಿ ಎಂದು ಹೇಳುವ ವಾಡಿಕೆಯನ್ನು ದಿನನಿತ್ಯವೂ ನಡೆಸುತ್ತಿದ್ದಾರೆ. ಅಲ್ಲದೆ, ಪಾರ್ಟಿ ಮೆಂಬರುಗಳ ಮನೆಯ ಹತ್ತಿರ ಹೋಗಿ ನಿಮ್ಮ ಹುಡುಗ–ಅಥವಾ ಮಗನನ್ನು ಪೋಲೀಸ್ ಸ್ಟೇಷನಿಗೆ ಬರಹೇಳುತ್ತಾರೆ ಎಂದು ಬೆದರಿಸುವ ಕೆಲಸ ಜಾಸ್ತಿಯಾಗಿದೆ. ರೈತ ಸಂಘದ ಸದಸ್ಯರುಗಳನ್ನು ಬೆದರಿಸಿ ಸಂಘಟನೆ ಮುರಿಯುವ ಪ್ರಯತ್ನವಂತೂ ಹೇಳತೀರದು. ಸರ್ಕಾರದವರು ಪೋಲೀಸರಿಗೆ ಕಮ್ಯೂನಿಸ್ಟ್ ಪಾರ್ಟಿ ಮತ್ತು ರೈತ ಸಂಘದ ಸದಸ್ಯರುಗಳನ್ನು ಈ ರೀತಿಯಾಗಿ ಬೆದರಿಸುವ ಕೆಲಸಕ್ಕೆ ನೇಮಿಸಿದ್ದಾರೊ ಏನೋ ತಿಳಿಯದು. ಈ ಬಗ್ಗೆ ಮೇಲ್ಪಟ್ಟ ಅಧಿಕಾರಿಗಳು, ಸಂಘಟನೆಗಳನ್ನು ಮುರಿಯಲೆತ್ನಿಸುತ್ತಿರುವ ಪೋಲೀಸರಿಗೆ ಸರಿಯಾದ ತಿಳುವಳಿಕೆ ಕೊಟ್ಟಾರೆಂದು ಆಶಿಸುತ್ತೇವೆ.

—ನೊಂದವ

ಕವಿ ರವೀಂದ್ರನಾಥ್ ಟಾಗೋರ್ ಜಯಂತಿ

ವಿಶ್ವ ಕವಿ ರವೀಂದ್ರನಾಥ ಟಾಗೋರ್‌ರವರ 97ನೆಯ ಜಯಂತ್ಯುತ್ಸವವನ್ನು ದೇಶದ ನಾನಾ ಭಾಗಗಳಲ್ಲಿ ಮೇ 8ರಂದು ಜನತೆ ಆಚರಿಸುತ್ತಿದ್ದಾರೆ.

ಕವಿ ರವೀಂದ್ರರ ಹೆಸರು ನಮ್ಮ ದೇಶದಲ್ಲಷ್ಟೇ ಅಲ್ಲದೆ ಜಗತ್ತಿನಲ್ಲಿ ಎಲ್ಲೆಡೆಯಲ್ಲಿಯೂ ಪ್ರಖ್ಯಾತವಾಗಿದೆ. ಅವರ ಕವಿತೆ, ಗೀತೆಗಳ ಮಾಧುರ್ಯವನ್ನು ಮೆಚ್ಚದವರಿಲ್ಲ. ಸಂಸ್ಕೃತಿ ಕಲೆಗಳ ಉದ್ಧಾರಕ್ಕಾಗಿ ಶಾಂತಿ ನಿಕೇತನದಲ್ಲಿ ವಿಶ್ವ ಭಾರತಿ ವಿಶ್ವವಿದ್ಯಾ ನಿಲಯವನ್ನು ರವೀಂದ್ರರು ಸ್ಥಾಪಿಸಿದರು.

ಕವಿ ರವೀಂದ್ರರು ಕವಿವರ್ಯರಷ್ಟೇ ಅಲ್ಲದೆ ಸ್ವಾತಂತ್ರ್ಯ ಪ್ರೇಮಿಯೂ ಪ್ರಜಾಪ್ರಭುತ್ವವಾದಿಯೂ ಆಗಿದ್ದರು. ಜನತೆಯ ಸ್ವಾತಂತ್ರ್ಯ ಕೇಳಿಕೆಯನ್ನು ತಮ್ಮ ಗೀತೆಗಳಲ್ಲಿ, ಕವಿತೆಗಳಲ್ಲಿ ಮೊಳಗಿಸಿದರು. ಭಾರತದ ಸ್ವಾತಂತ್ರ್ಯ ಚಳವಳಿಯ ಹೋರಾಟವು ಅವರ ಮೇಲೆ ಭಾರೀ ಪರಿಣಾಮವನ್ನುಂಟುಮಾಡಿತ್ತು. ಜಲಿಯನ್‌ವಾಲಾ ಭಾಗ್‌ನಲ್ಲಿ ಬ್ರಿಟಿಷರು ನಡೆಸಿದ ಕಗ್ಗೊಲೆ ಅವರನ್ನು ತಲ್ಲಣಗೊಳಿಸಿತು. ತಮ್ಮ ಪ್ರತಿಭಟನೆಯನ್ನು ಸೂಚಿಸಲು ಅವರು ಬ್ರಿಟಿಷ್ ಸರಕಾರ ಅವರಿಗೆ ಇತ್ತಿದ್ದ ಗೌರವ ಪ್ರಶಸ್ತಿಯನ್ನು ತ್ಯಜಿಸಿ ವೈಸ್ ರಾಯ್‌ರವರಿಗೆ ಪತ್ರ ಬರೆದರು.

ದ್ವಿತೀಯ ಮಹಾ ಯುದ್ಧ ಕಾಲದಲ್ಲ ಫ್ಯಾಸಿಸಂನ ದುಷ್ಕೃತ್ಯಗಳಿಂದ ಅವರ ಮನಃ ಕ್ಲೇಶಗೊಂಡಿತು. ಯುದ್ಧಕೋರರನ್ನು ತೀವ್ರವಾಗಿ ಖಂಡಿಸಿ ಅನೇಕ ಬಾರಿ ತಮ್ಮ ಅಭಿಮತವನ್ನು ವ್ಯಕ್ತಗೊಳಿಸಿದರು. ಶಾಂತಿಗಾಗಿ ಶ್ರಮಿಸುತ್ತಿದ್ದ ಶಕ್ತಿಗಳೊಂದಿಗೆ ಒಂದುಗೂಡಿದರು. ಮಾನವತೆಯ ಆದರ್ಶಗಳನ್ನು ಎತ್ತಿಹಿಡಿಯುವುದರಲ್ಲಿ ಕವಿ ರವೀಂದ್ರರು ಮೊದಲಿಗರಾಗಿದ್ದರು.

ಕಲಾಭಿವೃದ್ಧಿಗಾಗಿ, ಸಾಂಸ್ಕೃತಿಕ ಏಳಿಗೆಗಾಗಿ ಕವಿ ರವೀಂದ್ರರು ಭಾರತಕ್ಕೆ ಸಲ್ಲಿಸಿರುವ ಕಾಣಿಕೆ ಇತಿಹಾಸದಲ್ಲಿ ಚಿರಸ್ಮರಣೀಯವಾಗಿ ಉಳಿದಿದೆ. ಪ್ರಗತಿಪರವಾದ ಅಭಿಪ್ರಾಯಗಳನ್ನು ತಳೆದಿದ್ದ ಅವರು ಸಂಸ್ಕೃತಿ ಕಲೆಗಳ ಪುನರುಜ್ಜೀವನಗೊಳಿಸುವುದರಲ್ಲಿ ಅಪಾರವಾದ ಕಾಣಿಕೆ ಸಲ್ಲಿಸಿದ್ದಾರೆ. ವಿಶ್ವ ಭಾರತಿ ವಿಶ್ವವಿದ್ಯಾ ನಿಲಯ ಇಂದು ಜಗತ್ಪ್ರಸಿದ್ಧವಾಗಿದೆ.

ಬಂಗಾಳಿ ಕವಿಯಾಗಿದ್ದ ರವೀಂದ್ರರು ಬಂಗಾಳಕ್ಕಷ್ಟೇ ಅಲ್ಲದೆ, ಇಡೀ ಭಾರತಕ್ಕೇ ಕವಿಯಾಗಿದ್ದು, ವಿಶ್ವ ಕವಿ ಎನ್ನಿಸಿಕೊಂಡರು. ಅವರ ಕೃತಿಗಳು ಆಂಗ್ಲ ಭಾಷೆಗೆ, ಮತ್ತಿತರ ಭಾಷೆಗಳಿಗೆ ಅನುವಾದಿತವಾಗಿದೆ. ವಿಶ್ವ ಕವಿ ರವೀಂದ್ರರು ಸಾಹಿತ್ಯದಲ್ಲಿ ನೋಬೆಲ್ ಬಹುಮಾನವನ್ನೂ ಸಹ ಪಡೆದಿದ್ದರು.

ಸ್ವಾತಂತ್ರ್ಯ ಪ್ರಿಯರಾಗಿದ್ದ ಕವಿ ರವೀಂದ್ರರು, ಅದನ್ನು ಅನುಭವಿಸಲು ಜೀವಿಸಲಿಲ್ಲ. 1941ರಲ್ಲಿ ಅವರು ಕಣ್ಮರೆಯಾದರು.

ಇಂದು ಅವರು ಜೀವಿತರಾಗಿದ್ದಲ್ಲಿ ವಿಶ್ವ ಶಾಂತಿಗಾಗಿ, ಜನತೆಯ ಅಭಿವೃದ್ಧಿಗಾಗಿ ಹೋರಾಡುವವರಲ್ಲಿ ಮೊದಲಿನರಾಗಿರುತ್ತಿದ್ದರೆಂಬುದರಲ್ಲಿ ಸಂಶಯವಿಲ್ಲ. ಅವರು ಕಣ್ಮರೆಯಾದರೂ, ಅವರ ಕೃತಿಗಳು ಜೀವಂತವಾಗಿವೆ, ಜನಪ್ರಿಯವಾಗಿ ಹೆಚ್ಚು ಹೆಚ್ಚು ಖ್ಯಾತಿಗಳಿಸುತ್ತಿವೆ. ಅವರ 97ನೆಯ ಜನ್ಮದಿನದಂದು ನಾವು ನಮ್ಮ ಶ್ರದ್ಧಾಂಜಲಿಯನ್ನರ್ಪಿಸುತ್ತೇವೆ.

ದೊಡ್ಡ ಜವುಗು ಪ್ರಾಂತ್ಯ

(೯ನೇ ಪುಟದಿಂದ)

ಮರ್ದಿತ ರೈತ ಜನಾಂಗ ದೇಶದ ಉದ್ದಗಲಕ್ಕೂ ಮೇಲೆದ್ದು ನಿಂತರು.

ದೊಡ್ಡದೊಂದು ತೆರೆಯಂತೆ ಭ್ರಷ್ಟ ಅಧಿಕಾರಿಗಳನ್ನೇ, ತಮ್ಮನ್ನು ಮೆಟ್ಟಿಟ್ಟಿದ್ದ ಕಾನೂನುಗಳನ್ನು ಅವರು ಕೊಚ್ಚಿ ಹಾಕಿದರು.

ಗಾಳಿ ಜಯಘೋಷದ ಗಾನವನ್ನು ಹಾಡಿತು. ಧಾಳಿಗಾಗಿ ಮಳೆ ಸಮರಭೇರಿಯನ್ನು ಬಾರಿಸಿತು, ಚಳಿಗಾಲದ ಮಳೆಯ ಪ್ರವಾಹ ಜವುಗು ಪ್ರಾಂತ್ಯದಲ್ಲಿ ರೈತಕುಲ ಬಂಡೆದ್ದುದರ ಮಹಾಘೋಷಣೆಯಾಗಿ ಮೊರೆಯಿತು. ಹಳ್ಳಿಯಿಂದ ಹಳ್ಳಿಗೆ, ಪ್ರದೇಶದಿಂದ ಪ್ರದೇಶಕ್ಕೆ ಒಂಬತ್ತುನೂರು ಜನರು ಈ ಐತಿಹಾಸಿಕ ತೀರ್ಪನ್ನು ಕೊಂಡೊಯ್ದು ಪ್ರತಿಯೊಂದು ಹುಲ್ಲುಗುಡಿಸಲಿನಲ್ಲೂ ದೀರ್ಘ ಕಾಲದಿಂದ ಹುದುಗಿಡಲ್ಪಟ್ಟಿದ್ದ ಕೋಪಾಗ್ನಿಯನ್ನು ಬಿಡುಗಡೆ ಮಾಡಿದರು!

ಸಮ್ರಾಟ ಸತ್ತಿದ್ದಾನೆ!
ಭೂಮಿ ಹಂಚಲ್ಪಡುತ್ತದೆ!

REG. No. M 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore—2 phone 3810